# ಗಣಿತ ತರಗತಿ - IV

IN ANY EMERGENCY
DIAL
100
TELANGANA POLICE
www.tspolice.gov.in
@ Telangana State Police





ತೆಲಂಗಾಣ ಸರಕಾರ
ಮಹಿಳಾ ಅಭಿವೃದ್ಧಿ ಮತ್ತು ಶಿಶು ಕಲ್ಯಾಣ ಶಾಖೆ - ಚೈಲ್ಡ್‌ಲೈನ್ ಫೌಂಡೇಷನ್

ಶಾಲೆಯಲ್ಲಾಗಲಿ, ಶಾಲೆಯ ಹೊರಗಾಗಲಿ ವೇದನೆಗೆ ಗುರಿ ಆಗುತ್ತಿದ್ದರೆ

ಆಪತ್ತಿನಲ್ಲಿ, ಕಷ್ಟದಲ್ಲಿ ಇರುವ ಮಕ್ಕಳನ್ನು ರಕ್ಷಿಸಲು

CHILD LINE 1098 NIGHT & DAY
24 HOUR NATIONAL HELPLINE

ಮಕ್ಕಳಿಂದ ಕೆಲಸ ಮಾಡಿಸುತ್ತಿರುವ ಅವರನ್ನು ಶಾಲೆಗೆ ಕಳಿಸದೆ ಬೇರೆ ಕೆಲಸಗಳಲ್ಲಿ ಉಪಯೋಗಿಸುತ್ತಿದ್ದರೆ

ಕುಟುಂಬದ ಸದಸ್ಯರಾಗಲಿ ಬಂಧುಗಳಾಗಲಿ ಇಬ್ಬಂದಿಕರವಾಗಿ ಅಸಭ್ಯವಾಗಿ ವರ್ತಿಸುತ್ತಿದ್ದರೆ

1098 (ಹತ್ತು - ಒಂಬತ್ತು - ಎಂಟು) ಉಚಿತ ಟೆಲಿಫೋನ್ ಸೇವಾ ಸೌಕರ್ಯಕ್ಕಾಗಿ ಫೋನ್ ಮಾಡಿರಿ.

ರಾಷ್ಟ್ರ ವಿದ್ಯಾ, ಪರಿಶೋಧನೆ, ಶಿಕ್ಷಣ ಸಂಸ್ಥೆ
ತೆಲಂಗಾಣ, ಹೈದರಾಬಾದು.

ತೆಲಂಗಾಣ ಸರ್ಕಾರದ ಉಚಿತ ವಿತರಣೆ

# ಗಣಿತ

## ತರಗತಿ - IV


FREE



MATHEMATICS
CLASS - IV
Kannada Medium







ತೆಲಂಗಾಣ ಸರ್ಕಾರ ಪ್ರಚುರಣೆ,ಹೈದರಾಬಾದು.

ತೆಲಂಗಾಣ ಸರ್ಕಾರದ ಉಚಿತ ವಿತರಣೆ

SCERT TELANGANA

# ಆಶಿಸಿದ ಅಭ್ಯಾಸದ ಫಲಿತಾಂಶಗಳು

# ಗಣಿತ

## 4ನೇ ತರಗತಿ

## ವಿದ್ಯಾರ್ಥಿಗಳು ಇವುಗಳನ್ನೆಲ್ಲಾ ಕಲಿಯುತ್ತಾರೆ.....

- 1000ಕ್ಕಿಂತ ದೊಡ್ಡ ಸಂಖ್ಯೆಗಳನ್ನು ಓದಬಲ್ಲರು ಮತ್ತು ಬರೆಯಬಲ್ಲರು. ಸಂಖ್ಯೆಗಳಲ್ಲಿನ ಅಂಕಿಗಳ ಸ್ಥಾನದ ಬೆಲೆಗಳ ಆಧಾರವಾಗಿ ಸಂಖ್ಯೆಗಳನ್ನು ಹೋಲಿಸಬಲ್ಲರು.
- ನಿತ್ಯಜೀವನದಲ್ಲಿ ವಿವಿಧ ಸಂದರ್ಭಗಳಲ್ಲಿನ ಗಣಿತದ ಚತುರ್ವಿದ ಪ್ರಕ್ರಿಯೆಗಳಿಂದ ಕೂಡಿದ ಸಮಸ್ಯೆಗಳನ್ನು ಸಾಧಿಸಬಲ್ಲರು.
- ವಸ್ತುಗಳನ್ನು ಗುಂಪಿನಲ್ಲಾಗಲಿ, ವಸ್ತುಗಳಲ್ಲಿ ಅರ್ಧಭಾಗ, ಕಾಲುಭಾಗ, ಮುಕ್ಕಾಲು ಭಾಗಗಳನ್ನು ಗುರುತಿಸಬಲ್ಲರು. ಇವನ್ನು ಚಿತ್ರರೂಪದಲ್ಲಿ ತೋರಿಸಬಲ್ಲರು.
- ತ್ರಿಮಿತಿಯ ವಸ್ತುಗಳ ಅಂಚುಗಳು, ಮುಖಗಳು, ಮೂಲೆಗಳನ್ನು ಲೆಕ್ಕಿಸಬಲ್ಲರು. ಅವುಗಳನ್ನು ಗುರುತಿಸಬಲ್ಲರು. ತ್ರಿಮಿತಿ ಆಕಾರಗಳನ್ನು ತಯ್ಯಾರಿಸಬಲ್ಲರು.
- ದ್ವಿಮಿತಿ ಆಕಾರಗಳಾದ ತ್ರಿಭುಜ, ಆಯತ, ಚೌಕ ಮತ್ತು ವೃತ್ತಗಳನ್ನು ಅವುಗಳ ಬಾಹುಗಳನ್ನು ಮೂಲೆಗಳನ್ನು ಲೆಕ್ಕಿಸಿ ಗುರುತಿಸಬಲ್ಲರು.
- ಉದ್ದ, ಅಂತರಗಳನ್ನು (ದೂರ) ಮೀಟರಗಳಲ್ಲಿ ಸೆಂಟೀಮೀಟರಗಳಲ್ಲಿ ಭಾರವನ್ನು ಗ್ರಾಮ, ಕಿಲೋ ಗ್ರಾಮಗಳಲ್ಲಿ ಪಾತ್ರೆಯಲ್ಲಿಯ ದ್ರವ ಪರಿಮಾಣವನ್ನು ಲೀಟರಗಳಲ್ಲಿ, ಮಿಲ್ಲಿಲೀಟರಗಳಲ್ಲಿ ಅಂದಾಜು ಮಾಡಬಲ್ಲರು ಮತ್ತು ಅಳತೆ ಮಾಡಿ ಸರಿನೋಡಬಲ್ಲರು.
- ಗಡಿಯಾರದಲ್ಲಿನ ವೇಳೆಯನ್ನು ಗಂಟೆಗಳಲ್ಲಿ ನಿಮಿಷಗಳಲ್ಲಿ ಹೇಳಬಲ್ಲರು. ಕ್ಯಾಲೆಂಡರನಲ್ಲಿಯ ದಿನಾಂಕ ವನ್ನು ಪೂರ್ತಿಯಾಗಿ ಸರಿಯಾದ ಚೌಕಟ್ಟಿನಲ್ಲಿ ಹೇಳಬಲ್ಲರು
- ವಿವಿಧ ಜ್ಯಾಮಿತಿಯ ಆಕಾರಗಳ ಸುತ್ತಳತೆಯನ್ನು ರೇಖಾಖಂಡಗಳಿಂದ ಲೆಕ್ಕಿಸುವರು
- ಜ್ಯಾಮಿತಿಯ ಆಕಾರಗಳು ಸಂಖ್ಯೆಗಳೊಂದಿಗೆ ಇರುವ ಜೋಡಣೆಗಳನ್ನು ಮುಂದುವರೆಸಬಲ್ಲರು ಹಾಗೂ ತಯ್ಯಾರಿಸಬಲ್ಲರು.
- ನಮೋದಿಸಿದ ದತ್ತಾಂಶವನ್ನು ಪಟ್ಟಿರೂಪದಲ್ಲಿ ಚಿತ್ರರೂಪದಲ್ಲಿ ತೋರಿಸಬಲ್ಲರು ಮತ್ತು ಅವುಗಳಿಗೆ ನಿರ್ಣಯಗಳನ್ನು ನೀಡಬಲ್ಲರು.

ವಿದ್ಯ ಮಾ ಹಕ್ಕು
ಸರ್ವಶಿಕ್ಷಾ ಅಭಿಯಾನ್

ತೆಲಂಗಾಣ ವಿದ್ಯಾ ಶಾಖೆ
ತೆಲಂಗಾಣ ಸರಕಾರ

NCERT

## ಮಕ್ಕಳೇ! ನಿಮಗಾಗಿಯೇ ಈ ಸೂಚನೆಗಳು. . .

- ಪಠ್ಯ ಪುಸ್ತಕದಲ್ಲಿ ಪ್ರತಿ ಭಾವನೆ ತಿಳುವಳಿಕೆಗಾಗಿ ಸಂದರ್ಭ ಇಲ್ಲವೇ ಉದಾಹರಣೆಗಳು ಇಲ್ಲವೇ ಸಮಸ್ಯೆಗಳು ಇಲ್ಲವೇ ಆಟಗಳು ಮೊದಲಾದವುಗಳಿಗೆ ಸಂಬಂಧಿಸಿದ ಚಿತ್ರಗಳು/ಪಟಗಳು ಕೊಡಲಾಗಿದೆ. ಸಂದರ್ಭವನ್ನು ಪಟದೊಂದಿಗೆ/ ಚಿತ್ರಗಳೊಂದಿಗೆ ಓದಿ ಭಾವನೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು.
- ಭಾವನೆಗಳನ್ನು ಅರ್ಥೈಸಿಕೊಳ್ಳಲು ನಿರ್ವಹಿಸುತ್ತಿರುವ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿರುವ ಸಂದರ್ಭದಲ್ಲಿ ನಿಮಗೆ ಬರುವ ಅನುಮಾನಗಳನ್ನು ತಕ್ಷಣವೇ ನಿಮ್ಮ ಶಿಕ್ಷಕರನ್ನು ಕೇಳಿ ತಿಳಿದು ಕೊಳ್ಳಬೇಕು.
- ಭಾವನೆ ಅರ್ಥವಾಗಿದೆ ಎಂದು ತಿಳಿದುಕೊಳ್ಳಲು "ಇವು ಮಾಡಿರಿ" ಯಲ್ಲಿನ ಸಮಸ್ಯೆಗಳನ್ನು ನೀವು ಸ್ವಂತವಾಗಿ ಬಿಡಿಸಬೇಕು. ಒಂದು ವೇಳೆ ಬಿಡಿಸಲು ಕಷ್ಟವಾದರೆ ಮಾದರಿ ಸಮಸ್ಯೆಗಳನ್ನು ಪರಿಶೀಲಿಸಿ ಅರ್ಥಮಾಡಿಕೊಳ್ಳಬೇಕು. ಇಲ್ಲವೇ ಶಿಕ್ಷಕರನ್ನು , ನಿಮ್ಮ ಸ್ನೇಹಿತರೊಂದಿಗೆ ಚರ್ಚಿಸಿ ಪರಿಹಾರವನ್ನು ತಿಳಿದುಕೊಳ್ಳಬೇಕು.
- ‘‘ಪ್ರಯತ್ನಿಸಿರಿ'' ಶೀರ್ಷಿಕೆ ಕೆಳಗೆ ಇರುವ ಸಮಸ್ಯೆಗಳು ನಿಮ್ಮ ಆಲೋಚನೆಗಳನ್ನು ಚುರುಕುಗೊಳ್ಳಿಸಲು ಉಪಯೋಗವಾಗುತ್ತವೆ. ಅಂದರೆ ನಿಮಗೆ ಆಲೋಚನಾ ನೈಪುಣ್ಯಗಳನ್ನು ಅಭಿವೃದ್ಧಿ ಮಾಡುತ್ತವೆ. ಇವುಗಳನ್ನು ಸ್ವತಃವಾಗಿ ಸಾಧಿಸಲಾಗದಿದ್ದಾಗ ಸಹಪಾಠಿಗಳೊಂದಿಗೆ ಸೇರಿ ಗುಂಪುಗಳಾಗಿ ಸಾಧಿಸುವುದಕ್ಕೆ ಪ್ರಯತ್ನಿಸಬೇಕು. ಇಲ್ಲವೇ ಶಿಕ್ಷಕರೊಂದಿಗೆ ಚರ್ಚಿಸಿ ಪರಿಹಾರವನ್ನು ತಿಳಿದುಕೊಳ್ಳಬೇಕು.
- "ಆಲೋಚಿಸಿರಿ- ಚರ್ಚಿಸಿರಿ"ನಲ್ಲಿನ ಚಟುವಟಿಕೆಗಳು ನಿಮ್ಮ ಭಾವನೆಯನ್ನು ಮತ್ತಷ್ಟು ಆಳವಾಗಿ ವಿಸ್ತೃತವಾಗಿ ಅರ್ಥಮಾಡಿಕೊಳ್ಳಲು ಸಹಾಯಪಡುತ್ತವೆ. ಆದ್ದರಿಂದ ಇವುಗಳನ್ನು ನಿಮ್ಮ ಸ್ನೇಹಿತರೊಂದಿಗೆ ಸೇರಿ ಚರ್ಚಿಸುತ್ತಾ, ಪ್ರಶ್ನಿಸುತ್ತಾ ಅರ್ಥಮಾಡಿಕೊಳ್ಳಬೇಕು.
- ಅಧ್ಯಾಯದ ಕೊನೆಗೆ ಕೊಟ್ಟ ಅಭ್ಯಾಸಗಳಲ್ಲಿನ ಸಮಸ್ಯೆಗಳು ನೀವು ಅಧ್ಯಾಯದಲ್ಲಿ ಕಲಿತುಕೊಂಡ ಎಲ್ಲಾ ಭಾವನೆಗಳಗೆ ಸಂಬಂಧಸಿದವು. ಈ ಸಮಸ್ಯೆಗಳೆಲ್ಲವೂ ಒಂದೇ ವಿಧವಾಗಿರುವುದಿಲ್ಲ, ಇವುಗಳನ್ನು ನೀವು ಸ್ವತಃ ಮನೆಕೆಲಸವಾಗಿ ಇಲ್ಲವೇ ವಿರಾಮ ಸಮಯದಲ್ಲಾಗಲೀ ಬಿಡಿಸಬಹುದು.
- "ಇವು ಮಾಡಿರಿ, ಪ್ರಯತ್ನಿಸಿರಿ"ಗಳಲ್ಲಿನ ಸಮಸ್ಯೆಗಳನ್ನು ಮಾತ್ರ ಪಾಠಶಾಲೆಯಲ್ಲಿ ಶಿಕ್ಷಕರ ಸಮಕ್ಷಮದಲ್ಲಿ ಯೇ ಸಮಸ್ಯೆಗಳನ್ನು ಬಿಡಿಸಬೇಕು.
- ಪಠ್ಯಪುಸ್ತಕದಲ್ಲಿ ಎಲ್ಲಿ ಯೋಜನೆಗಳನ್ನು ಕೊಟ್ಟಿರುವರೋ ಅಲ್ಲಿ ನೀವು ಸಮೂಹಗಳಾಗಿ ಕೆಲಸ ಮಾಡಬೇಕಾಗಿರುತ್ತದೆ. ಆದರೆ ಇವುಗಳ ವರದಿಗಳನ್ನು ವ್ಯಕ್ತಿಗತವಾಗಿ ಬರೆದು ಕೊಡಬೇಕಾಗಿರುತ್ತದೆ.
- ಭಾವನೆಗಳನ್ನು ಅರ್ಥಮಾಡಿಕೊಳ್ಳಲು ನಿರ್ವಹಿಸುವ ಚಟುವಟಿಕೆಗಳು, ಅಭ್ಯಾಸಗಳಲ್ಲಿರುವ ಸಮಸ್ಯೆಗಳನ್ನು , ನಿಮ್ಮ ಪ್ರತಿಸ್ಪಂದನೆಗಳನ್ನು ಪಠ್ಯಪುಸ್ತಕದಲ್ಲಿ ಬರೆಯಬೇಕಾಗಿದ್ದರೆ ಅವುಗಳನ್ನು ಅಲ್ಲಿಯೇ ಬರೆಯಿರಿ.
- ನೀವು ಯಾವ ದಿನದಲ್ಲಿ ಬಿಡಿಸಬೇಕಾದ ಸಮಸ್ಯೆಗಳನ್ನು ಆದಿನವೇ ಪೂರ್ತಿಮಾಡಿ ನಿಮ್ಮ ಶಿಕ್ಷಕರ ಹತ್ತಿರ ತಪ್ಪದೇ ಸರಿಮಾಡಿಸಿಕೊಳ್ಳಬೇಕು.
- ಪಠ್ಯ ಪುಸ್ತಕದಲ್ಲಿ ತರಗತಿ ನೀವು ಅರ್ಥೈಸಿಕೊಂಡ ಭಾವನೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಶೇಖರಣೆಮಾಡಿ ಸ್ವಂತವಾಗೆ ಬಿಡಿಸಿ ನಿಮ್ಮ ಶಿಕ್ಷಕನಿಗೆ, ಸಹಪಾಠಿಗಳಿಗೆ ತೋರಿಸಿರಿ. ಎಲ್ಲರೂ ಸೇರಿ ಅವುಗಳನ್ನು ಬಿಡಿಸಿರಿ.
- ಗಣಿತ ಭಾವನೆಗಳಿಗೆ ಸಂಬಂಧಿಸಿದ ಪಠ್ಯಪುಸ್ತಕದಲ್ಲಿ ಕೊಟ್ಟ ಆಟಗಳು, ಪಜಿಲ್ಸ್, ಆಸಕ್ತಿಕರವಾದ ವಿಷಯಗಳನ್ನು ಅರ್ಥಮಾಡಿಕೊಂಡು ಅಂತಹವುಗಳನ್ನು ಮತ್ತಷ್ಟು ಶೇಖರಿಸಿ ಬಿಡಿಸಬೇಕು.
- ಗಣಿತದಲ್ಲಿ ನೀವು ಮುಖ್ಯವಾಗಿ ಸಮಸ್ಯಾ ಸಾಧನೆ, ಕಾರಣಗಳನ್ನು ತಿಳಿಸುವುದು, ಸಾಧನೆಗಳು ಮಾಡುವುದು, ಗಣಿತ ಬಾಷೆಯಲ್ಲಿ ವ್ಯಕ್ತ ಪಡಿಸುವುದು, ಗಣಿತ ಭಾವನೆಗಳು ಅರ್ಥಮಾಡಿಕೊಳ್ಳುವುದನ್ನು ವಿವಿಧ ಸಂದರ್ಭಗಳಲ್ಲಿ , ವಿಷಯಗಳಲ್ಲಿ ನಿತ್ಯ ಜೀವನದಲ್ಲಿ ಅನುಸಂಧಾನ ಮಾಡುವುದು, ಪ್ರತಿನಿಧಿತ್ವಗಳಂತಹ ಸಾಮರ್ಥ್ಯಗಳನ್ನು ಸಾಧಿಸಬೇಕು.
- ಮೇಲಿನ ಗಣಿತ ಸಾಮರ್ಥ್ಯಗಳನ್ನು ಸಾಧಿಸುವುದರಲ್ಲಿ ಭಾವನೆಗಳನ್ನು ಅರ್ಥೈಸಿಕೊಳ್ಳುವುದರಲ್ಲಿ ಯಾವುದೇ ಸಮಸ್ಯೆಗಳು ಎದುರಾದರೆ ಶಿಕ್ಷಕರ ಮಾರ್ಗದರ್ಶನ ತೆಗೆದುಕೊಳ್ಳಬೇಕು.

SCERT TELANGANA

# ಗಣಿತ

## 4ನೇ ತರಗತಿ

# MATHEMATICS

## CLASS - IV

(KANNADA MEDIUM)

## ಪಠ್ಯಪುಸ್ತಕ ಅಭಿವೃದ್ಧಿ ಮತ್ತು ಪ್ರಚುರಣಾ ಸಮಿತಿ

ಪ್ರಧಾನ ನಿರ್ವಹಣಾಧಿಕಾರಿ : **ಶ್ರೀ ಎ.ಸತ್ಯನಾರಾಯಣ ರೆಡ್ಡಿ**
ನಿರ್ದೇಶಕರು, ಎಸ್.ಸಿ.ಇ.ಆರ್.ಟಿ.
ಹೈದರಾಬಾದ್.

ಪ್ರಧಾನ ವ್ಯವಹಾರ ನಿರ್ವಾಹಕರು : **ಶ್ರೀ ಬಿ.ಸುಧಾಕರ್**
ನಿರ್ದೇಶಕರು, ಸರ್ಕಾರಿ ಪಠ್ಯ ಪುಸ್ತಕ ಮುದ್ರಣಾಲಯ,
ಹೈದರಾಬಾದ್.

ಕಾರ್ಯನಿರ್ವಾಹಕರು : **ಡಾ.ಎನ್.ಉಪೇಂದರ್ ರೆಡ್ಡಿ**
ಪ್ರೊಫೆಸರ್, ಪಠ್ಯಪ್ರಣಾಳಿಕೆ ಮತ್ತು ಪಠ್ಯಪುಸ್ತಕ ವಿಭಾಗ,
ಎಸ್.ಸಿ.ಇ.ಆರ್.ಟಿ., ಹೈದರಾಬಾದ್.



**ತೆಲಂಗಾಣ ಸರ್ಕಾರದ ಪ್ರಚುರಣೆ, ಹೈದರಾಬಾದ್**

ಕಾನೂನನ್ನು ಗೌರವಿಸಿ
ಹಕ್ಕುಗಳನ್ನು ಪಡೆದುಕೊಳ್ಳಿ

ಶಿಕ್ಷಣದಿಂದ ಬೆಳೆಯಿರಿ.
ವಿನಯಶೀಲರಾಗಿ ನಡೆದುಕೊಳ್ಳಿ.

SCERT TELANGANA

© Government of Telangana, Hyderabad.

*First Published 2013*
*New Impresions 2014, 2015, 2016, 2017, 2018, 2019, 2020*

All rights reserved.

No part of this publication may be reproduced, stored in a retrieval system, or transmitted, in any form or by any means without the prior permission in writing of the publisher, nor be otherwise circulated in any form of binding or cover other than that in which it is published and without a similar condition including this condition being imposed on the subsequent purchaser.

The copy right holder of this book is the Director of School Education, Hyderabad, Telangana.

This Book has been printed on 70 G.S.M. Maplitho Title Page 200 G.S.M. White Art Card

ತೆಲಂಗಾಣ ಸರ್ಕಾರದ ಉಚಿತ ವಿತರಣೆ 2020-21

SCERT TELANGANA

*Printed in India*
at the Telangana Govt. Text Book Press,
Mint Compound, Hyderabad,
Telangana.

— o —

# ಪಠ್ಯಪುಸ್ತಕ ರಚನಾ ಸಮಿತಿ

## ಸದಸ್ಯರು

ಶ್ರೀ ಸಿ.ಹೆಚ್.ಕೇಶವರೆಡ್ಡಿ, ಎಸ್.ಜಿ.ಟಿ.,ಪ್ರಾ.ಪಾ.ಮೊಟ್ಲಪಲ್ಲಿ, ಶ್ರೀರಾಂಪುರ್ ಮಂಡಲ, ಕರೀಂನಗರ ಜಿಲ್ಲೆ.
ಶ್ರೀಅಂಬಟಿ ಸೈದಿ ರೆಡ್ಡಿ, ಎಸ್.ಜಿ.ಟಿ.,ಪ್ರಾ.ಪಾ, ಜಸ್ತೀ ವೀರಪ್ಪ ಗೂಡೆಂ, ಮಿರ್ಯಾಲಗೂಡ ಮಂಡಲ, ನಲ್ಗೊಂಡ ಜಿಲ್ಲೆ.
ಶ್ರೀ ಸಿ.ಹೆಚ್.ಕೇಶವ, ಎಸ್.ಜಿ.ಟಿ.ಪ್ರಾ.ಉ.ಪಾ.ವಟ್ಟಿಪಲ್ಲಿ, ಮರ್ರಿಗೂಡ ಮಂಡಲ, ನಲ್ಗೊಂಡ ಜಿಲ್ಲೆ.
ಶ್ರೀ ಎಮ್.ಶ್ರೀನಿವಾಸ್, ಎಸ್.ಜಿ.ಟಿ.ಪ್ರಾ.ಪಾ.ವೈಸೆಂಬಿ, ಸಾಲೂರು ಮಂಡಲ, ವಿಜಯನಗರಂ ಜಿಲ್ಲೆ.
ಶ್ರೀ ಯತ್.ಧರ್ಮೇಂದರ್ ಸಿಂಗ್, ಎಸ್.ಎ.,ಪ್ರಾ.ಉ.ಪಾ.ಫೊನ್ನಾ. ಇಚ್ಚೋಡ ಮಂಡಲ, ಆದಿಲಾಬಾದ್ ಜಿಲ್ಲೆ.
ಶ್ರೀ ನಾಗುಲ ರವಿಗೌಡ್, ಎಸ್.ಎ.,ಜಿ.ಪ.ಉ.ಪಾ.,ಲೋಕೇಶ್ವರಮ್, ಆದಿಲಾಬಾದ್ ಜಿಲ್ಲೆ.
ಶ್ರೀ ಕೆ.ಶ್ರೀಧರಾ ಚಾರ್ಯುಲು, ಎಸ್.ಎ.,ಜಿ..ಉ.ಪಾ.ರಂಗಯ್ಯ ಪಲ್ಲಿ, ಮೆದಕ್ ಜಿಲ್ಲೆ.
ಶ್ರೀ ಕೆ.ರಾಮಯ್ಯ, ಎಸ್.ಎ.,ಜಿ.ಪ.ಉ.ಪಾ.ಕಾಶಿಂದೇವಿ ಪೇಟೆ, ಮುಲುಗು ಮಂಡಲ, ವರಂಗಲ್ ಜಿಲ್ಲೆ.
ಶ್ರೀ ಖಾಜಾ ಬಂದೇ ನವಾಜ್, ಎಸ್.ಎ., ಜಿ.ಪ.,ಉ.ಪಾ, ಕಲುಗೊಟ್ಲ, ಕರ್ನೂಲ್ ಜಿಲ್ಲೆ.
ಶ್ರೀ ಯಸ್.ರಾಜಶೇಖರ ರೆಡ್ಡಿ, ಎಸ್.ಎ.,ಜಿ.ಪ.ಉ.ಪಾ, ಮೆಡಿವೇಮುಲ, ಕರ್ನೂಲ್ ಜಿಲ್ಲೆ.
ಶ್ರೀ ಕೆ.ನಾಗೇಶ್ವರ ರಾವು, ಪ್ರ.ಉ.,ಪ್ರ.ಉ.ಪಾ.ಪೇರವಲ್ಲಿ, ಪಶ್ಚಿಮಗೋದಾವರಿ ಜಿಲ್ಲೆ.
ಶ್ರೀಟಿ.ಸಾಯಿ ರಾಮಕ್ರಿಷ್ಣ, ಪ್ರ.ಉ.,ಬಿ.ಎಫ್.ಎಮ್.ಎಚ್.ಎಸ್.ಸಮಾಲ್‌ಕೋಟ್, ತೂರ್ಪುಗೋದಾವರಿ ಜಿಲ್ಲೆ.
ಶ್ರೀ ಯಮ್.ರಾಮಾಂಜನೇಯುಲು, ಉಪನ್ಯಾಸಕರು, ಡೈಟ್ ವಿಕಾರಾಬಾದ್, ರಂಗಾರೆಡ್ಡಿ ಜಿಲ್ಲೆ.

## ಸಮನ್ವಯಾಧಿಕಾರಿಗಳು

ಶ್ರೀ ಡಾ|| ಕಾಕುಳವರಂ ರಾಜೇಂದರ್ ರೆಡ್ಡಿ, ಕೋ-ಆರ್ಡಿನೇಡಟರ್, ಗಣಿತ ಪುಸ್ತಕಗಳು, ಎನ್.ಸಿ.ಇ.ಆರ್.ಟಿ., ಹೈದರಾಬಾದ್.

## ಸಂಪಾದಕರು

ಶ್ರೀ ಎಸ್.ಸುರೇಶ್ ಬಾಬು, ಪ್ರೊಫೆಸರ್, ಎನ್.ಸಿ.ಇ.ಆರ್.ಟಿ., ಹೈದರಾಬಾದ್.
ಶ್ರೀ ಕೆ.ಬ್ರಹ್ಮಯ್ಯ, ನಿವೃತ್ತ ಉಪನ್ಯಾಸಕರು, ಎಸ್.ಸಿ.ಇ.ಆರ್.ಟಿ ಎ.ಪಿ.,ಹೈದರಾಬಾದ್.
ಶ್ರೀ ಬಿ.ಹರಿ ಸರ್ವೋತ್ತಮವಾವು, ನಿವೃತ್ತ ಉಪನ್ಯಾಸಕರು, ಎಸ್.ಸಿ.ಇ.ಆರ್.ಟಿ., ಹೈದರಾಬಾದ್.

## ಚೇರ್ ಪರ್ಸನ್, ಗಣಿತ ಆಧಾರ ಪತ್ರ, ಗಣಿತ ಪಾಠ್ಯ ಪ್ರಣಾಳಿಕೆ ಮತ್ತು ಪಠ್ಯಪುಸ್ತಕ ಅಭಿವೃದ್ಧಿ ಸಮಿತಿ.

ಪ್ರೊಫೆಸರ್, ವಿ.ಕನ್ನನ್, ಗಣಿತ ಮತ್ತು ಸಂಖ್ಯಾಶಾಸ್ತ್ರವಿಭಾಗ, ಹೈದರಾಬಾದ್ ವಿಶ್ವವಿದ್ಯಾಲಯ

## ಪ್ರಧಾನ ಸಲಹೆಗಾರರು

**ಶ್ರೀ ಚುಕ್ಕಾ ರಾಮಯ್ಯ**
ಶಿಕ್ಷಣ ತಜ್ಞ
ಹೈದರಾಬಾದ್.

**ಡಾ|| ಹೆಚ್.ಕೆ.ದಿವಾನ್**
ಶಿಕ್ಷಣ ಸಲಹೆಗಾರರು, ವಿದ್ಯಾಭವನ್ ಸೊಸೈಟಿ,
ರಿಸೋರ್ಸ್ ಸೆಂಟರ್, ಉದಯಾಪೂರ್, ರಾಜಸ್ಥಾನ್.

## ಶೈಕ್ಷಣಿಕ ಸಹಾಯ ಸಮಿತಿ ಸದಸ್ಯರು

ಶ್ರೀಮತಿ ಪದ್ಮಪ್ರಿಯ ಶಿರಾಲಿ, ಗಣಿತ ಸಮೂಹ ಕೇಂದ್ರ, ರಿಷಿವ್ಯಾಲಿ ಸ್ಕೂಲ್, ಮದನಪಲ್ಲಿ, ಚಿತ್ತೂರು ಜಿಲ್ಲಾ.
ಶ್ರೀಮತಿ ನಮ್ರತ ಬತ್ರ, ವಿದ್ಯಾಭವನ್ ಸೊಸೈಟಿ, ಸಮೂಹ ಕೇಂದ್ರ, ಉದಯ್‌ಪುರ್, ರಾಜಸ್ಥಾನ.
ಕುಮಾರಿ ವರ್ಷಾಗುಪ್ತ, ವಿದ್ಯಾಭವನ್ ಸೊಸೈಟಿ, ಸಮೂಹ ಕೇಂದ್ರ, ಉದಯ್‌ಪುರ್, ರಾಜಸ್ಥಾನ.
ಕುಮಾರಿ ಪ್ರೀತಿ ಮಿಶ್ರ, ವಿದ್ಯಾಭವನ್ ಸೊಸೈಟಿ, ಸಮೂಹ ಕೇಂದ್ರ, ಉದಯ್‌ಪುರ್, ರಾಜಸ್ಥಾನ.
ಶ್ರೀ ಶರಣ್‌ಗೋಪಾಲ್, ಗಣಿತ, ಸಾಂಖ್ಯಿಕ ಶಾಸ್ತ್ರವಿಭಾಗ, ಹೈದರಾಬಾದ್ ವಿಶ್ವವಿದ್ಯಾಲಯ.

## ಕನ್ನಡ ಅನುವಾದಕರು

ಶ್ರೀ ಟಿ.ಹನುಮಂತ,ಪಿ.ಎಸ್.ಕುಸುಮೂರ್ತಿ, ಮಂಡಲ ಕೃಷ್ಣ ಮಹಬೂಬನಗರ.
ಶ್ರೀ ಸೂರ್ಯಕಾಂತ, ಎಮ್.ಪಿ.ಯು.ಪಿ.ಎಸ್. ತಂಗಡ್ಗಿ, ಮಂಡಲ ಕೃಷ್ಣ ಮಹಬೂಬನಗರ.
ಶ್ರೀ ಹನುಮದಾಸ, ಎಮ್.ಪಿ.ಯು.ಪಿ.ಎಸ್. ತಂಗಡ್ಗಿ, ಮಂಡಲ ಕೃಷ್ಣ ಮಹಬೂಬನಗರ.
ಶ್ರೀ ಸಿ. ನಾಗರಾಜ, ಝಡ್.ಪಿ.ಹೆಚ್.ಎಸ್. ಕೃಷ್ಣ ಮಹಬೂಬನಗರ.
ಶ್ರೀ ಸೋಮನಾಥರೆಡ್ಡಿ, ಝಡ್.ಪಿ.ಹೆಚ್.ಎಸ್. ಕೃಷ್ಣ ಮಹಬೂಬನಗರ.

## ರೇಖಾ ಚಿತ್ರ ಮತ್ತು ವಿನ್ಯಾಸ ಸಮಿತಿ.

ಶ್ರೀ ಪ್ರಶಾಂತ್ ಸೋನಿ, ವಿದ್ಯಾಭವನ್ ಸೊಸೈಟಿ, ಉದಯಪೂರ್, ರಾಜಸ್ಥಾನ.
ಶ್ರೀ ಭವಾನಿ ಶಂಕರ್, ವಿದ್ಯಾಭವನ್ ಸೊಸೈಟಿ, ಉದಯಪೂರ್, ರಾಜಸ್ಥಾನ.
ಶ್ರೀ ಕೈಲಾಷ್ ಯಾದವ್, ವಿದ್ಯಾಭವನ್ ಸೊಸೈಟಿ, ಉದಯಪೂರ್, ರಾಜಸ್ಥಾನ.

SCERT TELANGANA

# ಮುನ್ನುಡಿ

ಪ್ರತಿಯೊಬ್ಬ ವಿದ್ಯಾರ್ಥಿಯ ದೈನಂದಿನ ಜೀವನವು ಗಣಿತದೊಂದಿಗೆ ಮಿಳಿತವಾಗಿರುತ್ತದೆ. ಮಕ್ಕಳು ಆಡುಗೆ ಮನೆಯಲ್ಲಿ ತನ್ನ ತಾಯಿಗೆ ಸಹಾಯ ಮಾಡುತ್ತಿದ್ದಾಗ ಇಲ್ಲವೇ ಹೊಲದ ಕೆಲಸಗಳಲ್ಲಿ ತನ್ನ ತಂದೆ ತಾಯಂದಿರಿಗೆ ಸಹಾಯ ಮಾಡುವಾಗ ಅಥವಾ ಸ್ನೇಹಿತರೊಂದಿಗೆ ಆಡಿಕೊಳ್ಳುವಂತಹ ಸಂದರ್ಭಗಳು ವಿವಿಧ ರೀತಿಯ ಗಣಿತ ಸಮಸ್ಯೆಗಳಿಂದ ಸಮ್ಮಿಳಿತಗೊಂಡಿರುತ್ತವೆ. ಗಣಿತದ ಬಗ್ಗೆ ಯಾವುದೇ ಗ್ರಹಿಕೆ ಇಲ್ಲದ ಹಂತದಿಂದ ವಿದ್ಯಾರ್ಥಿ ಸಂಖ್ಯೆಗಳು ಮತ್ತು ಅವಕಾಶಕ್ಕೆ ಸಂಬಂಧಿಸಿದ ವಿವಿಧ ಅನುಭವ ಗಳೊಂದಿಗೆ ಪಾಠಶಾಲೆಗೆ ಬರುತ್ತಾರೆ. ಆ ಭಾವನೆಗಳು ಕೆಲವೊಮ್ಮೆ ಗಣಿತಜ್ಞರನ್ನು ಚಕಿತಗೊಳಿಸುವಂತೆಯೂ ಇರಬಹುದು.

ವಿದ್ಯಾರ್ಥಿಗಳೆಲ್ಲರೂ ಗಣಿತವನ್ನು ಕಲಿಯುವ ಸಾಮರ್ಥ್ಯವನ್ನು ಪಡೆದು ಜ್ಞಾನಾಭಿವೃದ್ಧಿಗೆ ಅವಶ್ಯಕವಾದ ಅಂತರ್ಗದ ಶಕ್ತಿಯನ್ನು ಹೊಂದಿರುತ್ತಾರೆ. ಪ್ರಪಂಚದಲ್ಲಿನ ಪ್ರತಿ ವಿಷಯವನ್ನು ಕುತೂಹಲದಿಂದ ಪರೀಕ್ಷಿಸುವಂತಹ ಲಕ್ಷಣವು ಅವರ ಸಾಮರ್ಥ್ಯವನ್ನು ಸೂಚಿಸುತ್ತದೆ. ವರ್ಗೀಕರಿಸುವುದು, ಹೊಂದಿಸುವುದು, ವಿಶ್ಲೇಷಿಸುವುದು, ಅನುಸಂದಾನ ಮಾಡುವುದು, ಸಾಧರೀಣೀಕರಿಸುವುದು ಮೊದಲಾದ ಗಣಿತ ವಿಷಯ ಕಲಿಕೆಗೆ ಅವಶ್ಯಕವಾದ ವಿದ್ಯಾರ್ಥಿಗಳ ಅಂತರ್ಗತ ಶಕ್ತಿಯೊಂದಿಗೆ ಸಂಖ್ಯೆ ಮತ್ತು ಅವಕಾಶಕ್ಕೆ ಸಂಬಂಧಿಸಿದ ಅನುಭವಗಳು ತರಗತಿಯಲ್ಲಿ ಭೋಧಿಸುವ ಶಿಕ್ಷಕರಿಗೆ ಭೋಧನೋಪಕರಣಗಳಾಗಿ ಉಪಯೋಗವಾಗುತ್ತವೆ. ಇವನ್ನು ಶಿಕ್ಷಕರೆಲ್ಲರೂ ಕಲಿಕೆಯ ಸಮಯದಲ್ಲಿ ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳುತ್ತಾರೆ.

ಮಾನವನ ಅನುಭವಗಳಿಂದ ಗಣಿತವನ್ನು ಕಲಿಯುವುದು ಪ್ರಶಂಸನೀಯವಾದರೂ, ಅದರ ಅಭಿವೃದ್ಧಿ ಮತ್ತು ಮುನ್ನಡೆ ಮಾನವನ ಅನುಭವಗಳ ಮೇಲೆ ಆಧಾರ ಪಡಲಿಲ್ಲ ಆದರೆ ಮಾನವನ ಮಸ್ತಿಷ್ಕದಲ್ಲಿರುವ ಸೃಜನಾತ್ಮಕತೆ ಮತ್ತು ತರ್ಕಗಳ ಮೇಲೆ ಆಧಾರವಾಗಿ ಮುನ್ನಡೆ ಪಡೆದಿದೆ. ಆದ್ದರಿಂದ ಗಣಿತ ಭೋಧನಾ ಗುರಿ ಸಂಖ್ಯಾ ಭಾವನೆ ಮತ್ತು ಪ್ರಕ್ರಿಯೆಗಳನ್ನು ನಿರ್ವಹಿಸಲು ಅವಶ್ಯವಾದ ಸಾಮರ್ಥ್ಯ ಮತ್ತು ಸೃಜನಾತ್ಮಕತೆ ಬೆಳೆಸುವ ಮತ್ತು ತಾರ್ಕಿಕವಾಗಿ ಕಾರಣಗಳನ್ನು ತಿಳಿಸುವುದರ ಕಡೆಗೆ ಕೇಂದ್ರೀಕೃತವಾಗಿ ಗಣಿತ ಭೋಧನೆ ನಡೆಯಬೇಕು. ಗಣಿತವು ಕೇವಲ ಸಂಖ್ಯೆಗಳಲ್ಲಿ ಮತ್ತು ಅವಕಾಶಗಳ ಸಾದೃಶೀಕರಣ, ಕ್ರಮಗಳ ಪರಿಶೀಲನೆ ಮುಂತಾದವುಗಳನ್ನು ಕಲಿತುಕೊಳ್ಳುವುದೇ ಅಲ್ಲದೆ ಅದು ಮಕ್ಕಳ ಪ್ರತಿ ಕ್ಷಣಗಳನ್ನು ಉಪಯೋಗಿಸುವ ಜೀವನದ ಅಂತರ್ಭಾವಿಕ ವಿಷಯವಾಗಿ ಪರಿಗಣಿಸಲ್ಪಟ್ಟಿದೆ.

ಪಾಠ್ಯಯೋಜನಾ ಕಾಯ್ದೆಯು (SCF2011) ಗಣಿತದ ಬಗ್ಗೆ ಮೇಲೆ ತಿಳಿಸಿದ ದೃಷ್ಟಿಕೋನವನ್ನು ಅದರ ಅನುಬಂಧ ಪಾಠ್ಯ ಪುಸ್ತಕಗಳು ಈ ವಿಷಯಗಳೆಲ್ಲವನ್ನೂ ನಿರ್ಧರಿಸಲು ಪ್ರಮುಖ ಅಂಗಗಳಾಗಿ ಉಪಯೋಗವಾಗುತ್ತದೆ. ಗಣಿತದಲ್ಲಿನ ಭಾವನೆಗಳನ್ನು ಬೋದಿಸಲು ರಸವತ್ತರವಾದ ಸಂದರ್ಭಗಳು ಮತ್ತು ಅದರಲ್ಲಿನ ತಾರ್ಕಿಕ ಕ್ರಮವನ್ನು ಚರ್ಚಿಸುವುದರ ಮೂಲಕ ಮಕ್ಕಳು ತಮ್ಮ ಸ್ವಂತ ಮಾತುಗಳಲ್ಲಿ ಸಾಮಾನ್ಯೀಕರಿಸಲು ಅವಕಾಶ ಕಲ್ಪಿಸಲಾಗಿದೆ. ನಿರ್ವಚನೆಗಳು ಮತ್ತು ಅನವಶ್ಯಕವಾದ ಪದಗಳ ಬಳಕೆಗೆ ಅವಕಾಶಕೊಟ್ಟಿಲ್ಲ. ಸಮಸ್ಯೆಯಲ್ಲಿ ಕೇವಲ ಯಾಂತ್ರಿಕವಾಗಿ ಸಾಧಿಸುವುದಲ್ಲದೆ ಆ ಸಮಸ್ಯೆಯನ್ನು ಹಲವು ರೀತಿಗಳಲ್ಲಿ ಸಾಧಿಸುವುದನ್ನು ಪ್ರೋತ್ಸಾಹಿಸಲಾಗಿದೆ. ಸಮಸ್ಯೆಯ ಸಾಧನೆಯಲ್ಲಿ ವಿವಿಧ ಸೋಪಾನಗಳನ್ನು ಮಕ್ಕಳು ಸ್ವತಃ ಅರ್ಥಮಾಡಿಕೊಳ್ಳಲು ಅವಕಾಶವನ್ನು ನೀಡಲಾಗಿದೆ. ಸಮಸ್ಯಾ ಸಾಧಿಸುವುದಲ್ಲದೆ ಸಮಸ್ಯೆಯನ್ನು ತಯಾರುಮಾಡುವುದು ಕೂಡ ಒಂದು ಮುಖ್ಯವಾದ ಪ್ರಕ್ರಿಯೆ. ಮಕ್ಕಳು ಸ್ವತಃ ಸಮಸ್ಯೆಯನ್ನು ಹುಡುಕಲು ಕಲ್ಪನೆಗಳನ್ನು ಗ್ರಹಿಸಲು ಮತ್ತು ವಿವಿಧ ರೀತಿಯಲ್ಲಿ ಆಲೋಚಿಸುವಂತೆ ಪ್ರೋತ್ಸಾಹಿಸಲು ಚಿತ್ರಗಳನ್ನು ಕೊಡಲಾಗಿದೆ. ಮಕ್ಕಳಿಗೆ ಆಸಕ್ತಿಗೊಳಿಸುವಂತಹ ಬಣ್ಣಗಳಿಂದ ಪಠ್ಯ ಪುಸ್ತಕಗಳನ್ನು ಆಕರ್ಷಣೀಯಗೊಳಿಸಲಾಗಿದೆ.

ಪಠ್ಯ ಪುಸ್ತಕವನ್ನು ಅಭಿವೃದ್ಧಿಗೊಳಿಸುವಲ್ಲಿ ಶ್ರಮಿಸಿದ ರಚನಾ ಸಮಿತಿಯ ಸೇವೆಯನ್ನು , ರಾಜ್ಯ ಶಿಕ್ಷಣ ಪರಿಶೋಧನೆ ಸಂಸ್ಥೆ (SCERT)ಅಭಿನಂದಿಸುತ್ತದೆ. ರಾಜ್ಯದಲ್ಲಿನ ಹಲವಾರು ಶಿಕ್ಷಕರು, ವಿಷಯ ಪರಿಣಿತರು, ಶಿಕ್ಷಣ ತಜ್ಞರು ಪುಸ್ತಕದ ಅಭಿವೃದ್ಧಿಯಲ್ಲಿ ಸಹಭಾಗಿಗಳಾಗಿದ್ದಾರೆ. ಇದಕ್ಕೆ ಸಹಕರಿಸಿದ ಸಂಬಂಧಿಸಿದ, ಜಿಲ್ಲಾ ವಿದ್ಯಾಧಿಕಾರಿಗಳಿಗೆ ಮತ್ತುಮಂಡಲ ವಿದ್ಯಾಧಿಕಾರಿಗಳಿಗೆ ಅಭಿನಂದನೆಗಳು. ನೂತನ ಪಠ್ಯ ಪುಸ್ತಕ ರೂಪ ಕಲ್ಪನೆಯಲ್ಲಿ ಸಹಕಾರ ನೀಡಿದ ವಿದ್ಯಾ ಸಂಸ್ಥೆಗಳಿಗೂ ಮತ್ತು ಸ್ವಚ್ಛಂದ ಸಂಸ್ಥೆಗಳಿಗೂ ಧನ್ಯವಾದಗಳು. ಪಠ್ಯ ಪುಸ್ತಕ ಅಭಿವೃದ್ಧಯಲ್ಲಿ ಸಹಕಾರ ನೀಡಿದ ಕಮೀಷನರ್ ಮತ್ತು ಡೈರೆಕ್ಟರ್, ಪಾಠಶಾಲಾ ವಿದ್ಯಾ ಕಾರ್ಯಾಲಯದವರಿಗೂ ಪ್ರತ್ಯೇಕ ಕೃತಜ್ಞತೆಗಳು. ಈ ಪಠ್ಯ ಪುಕವನ್ನು ಇನ್ನಷ್ಟು ಉತ್ತಮ ಪಡಿಸಲು ನಿಮ್ಮ ಸಲಹೆ, ಸೂಚನೆಗಳನ್ನು ಸದಾ ಆಹ್ವಾನಿಸುತ್ತೇವೆ.

ಡೈರೆಕ್ಟರ್,

ಎಸ್.ಸಿ.ಇ.ಆರ್.ಟಿ., ಹೈದರಾಬಾದ್

SCERT TELANGANA

# ವಿಷಯ ಸೂಚಿಕ


| ಕ್ರ.ಸಂ | ಘಟಕ | ಪಠ್ಯಕ್ರಮ ಪೂರ್ತಿಮಾಡಬೇಕಾದ ತಿಂಗಳು | ಪುಟ ಸಂಖ್ಯೆ |
|---|---|---|---|
| 1. | ವಿವಿಧ ವಸ್ತುಗಳು –ವಿಧ ವಿಧ ಆಕಾರಗಳು | ಜೂನ್ | 1-7 |
| 2. | ವಿವಿಧ ಭಾಗಗಳು –ವಿಧ ವಿಧ ನೋಟ | ಜೂನ್ | 8-14 |
| 3. | ಇನ್ನೂ ಕೆಲವು ಆಕಾರಗಳು | ಜುಲೈ | 15-22 |
| 4. | ಸಂಖ್ಯೆಗಳನ್ನು ತಿಳಿದುಕೊಳ್ಳೋಣ | ಜುಲೈ | 23-37 |
| 5. | ಎಷ್ಟು ಹೆಚ್ಚು – ಎಷ್ಟು ಕಡಿಮೆ? | ಆಗಸ್ಟ್ | 38-48 |
| 6. | ಎಷ್ಟು ಪಟ್ಟು? | ಆಗಸ್ಟ್ | 49-60 |
| 7. | ಸಮಾನ ಭಾಗಗಳು – ಸಮಾನ ರಾಶಿಗಳು | ಸೆಪ್ಟೆಂಬರ್ | 61-70 |
| 8. | ಇದು ಎಷ್ಟು ಉದ್ದವಿದೆ? | ಸೆಪ್ಟಂಬರ್ | 71-79 |
| 9. | ಇದರ ತೂಕವೆಷ್ಟು? | ಆಕ್ಟೋಬರ್ | 80-90 |
| 10. | ಯಾವುದು ಎಷ್ಟು ಸಂಗ್ರಹಿಸಬಲ್ಲದು? | ನವಂಬರ್ | 91-98 |
| 11. | ಟಿಕ್ ಟಿಕ್ ಎಂದು ನಡೆಯುವ ಗಡಿಯಾರ | ನವಂಬರ್ | 99-107 |
| 12. | ಸಮ ಭಾಗಗಳಾಗಿ ವಿಭಜಿಸೋಣ | ಡಿಸೆಂಬರ್ | 108-117 |
| 13. | ಚತುರತಾ ಪಟ್ಟಿ | ಡಿಸೆಂಬರ್ | 118-124 |
| 14. | ಅಂಚುಗಳು – ಸರಿಹದ್ದುಗಳು | ಜನವರಿ | 125-129 |
| 15. | ಒಂದೇ ಬಗೆಯ ಅರ್ಧ ಭಾಗಗಳು | ಜನವರಿ | 130-133 |
| 16. | ವಿನ್ಯಾಸಗಳು | ಫೆಬ್ರವರಿ | 134-140 |
| 17. | ಗಣಿತ ನಮ್ಮ ಸುತ್ತಲೂ ಇದೆ | ಫೆಬ್ರವರಿ | 141-146 |
| | ಪುನಶ್ಚರಣ | ಮಾರ್ಚ್ | |


SCERT TELANGANA

# ರಾಷ್ಟ್ರಗೀತೆ

ರವೀಂದ್ರನಾಥ ಠಾಗೂರ್

ಜನಗಣ ಮನ ಅಧಿನಾಯಕ ಜಯ ಹೇ!
ಭಾರತ ಭಾಗ್ಯ ವಿಧಾತಾ!
ಪಂಜಾಬ ಸಿಂಧ್ ಗುಜರಾತ ಮರಾಠಾ!
ದ್ರಾವಿಡ ಉತ್ಕಲ ವಂಗಾ
ವಿಂಧ್ಯ ಹಿಮಾಚಲ ಯಮುನಾ ಗಂಗಾ!
ಉಚ್ಛಲ ಜಲಧಿ ತರಂಗಾ!
ತವ ಶುಭ ನಾಮೇ ಜಾಗೇ!
ತವ ಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ!
ಜನಗಣ ಮಂಗಳದಾಯಕ ಜಯ ಹೇ!
ಭಾರತ ಭಾಗ್ಯ ವಿಧಾತಾ!
ಜಯ ಹೇ! ಜಯ ಹೇ! ಜಯ ಹೇ!
ಜಯ ಜಯ ಜಯ ಜಯ ಹೇ !!

# ಪ್ರತಿಜ್ಞೆ

**– ಪೈಡಿಮರ್ರಿ ವೆಂಕಟ ಸುಬ್ಬಾರಾವು.**

"ಭಾರತ ದೇಶ ನನ್ನ ಮಾತೃಭೂಮಿ.ಭಾರತೀಯರೆಲ್ಲರೂ ನನ್ನ ಸಹೋದರರು.ವೈವಿಧ್ಯಮಯ ಸಂಸ್ಕೃತಿಯ ಲಕ್ಷಣವು ನನಗೆ ಆತೀವ ಹೆಮ್ಮೆ ತಂದಿದೆ.ಈ ದೇಶದ ಉನ್ನತ ಸಂಸ್ಕೃತಿಯ ಮಟ್ಟವನ್ನು ತಲುಪಲು ನಾನು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ.ಸುಸಂಪನ್ನವಾದ ನನ್ನ ದೇಶವನ್ನೂ,ನನ್ನ ತಂದೆ ತಾಯಿಗಳನ್ನೂ,ಉಪಾಧ್ಯಾಯರನ್ನೂ ಎಲ್ಲ ಹಿರಿಯರನ್ನೂ ಗೌರವಿಸುತ್ತೇನೆ.ಪ್ರತಿಯೊಬ್ಬರೊಡನೆ ಮರ್ಯಾದೆಯಿಂದ ನಡೆದುಕೊಳ್ಳುತ್ತೇನೆ. ಪ್ರಾಣಿಗಳ ಬಗ್ಗೆ ಅನುಕಂಪ ತೋರುತ್ತೇನೆ.

ನನ್ನ ದೇಶದ ಬಗ್ಗೆ ನನ್ನ ಪ್ರಜೆಗಳ ಬಗ್ಗೆ, ಸೇವಾ ನಿಷ್ಠೆ ಪಡೆದಿರುವೆನೆಂದು ಪ್ರತಿಜ್ಞೆ ಮಾಡುತ್ತಿದ್ದೇನೆ. ಅವರ ಶ್ರೇಯೋಭಿವೃದ್ಧಿಗಳೇ ನನ್ನ ಆನಂದಕ್ಕೆ ಮೂಲ."

SCERT TELANGANA

# 1 ವಿವಿಧ ವಸ್ತುಗಳು - ವಿಧ ವಿಧ ಆಕಾರಗಳು

ಈ ದಿನದ ತರಗತಿಯಲ್ಲಿ ಉಪಾಧ್ಯಾಯರು 4ನೇ ತರಗತಿ ವಿದ್ಯಾರ್ಥಿಗಳಿಗೆ ವಿವಿಧ ಆಕಾರಗಳಲ್ಲಿರುವ ವಸ್ತುಗಳನ್ನು ತೋರಿಸುತ್ತಿದ್ದಾರೆ.




SCERT TELANGANA

ತೋರಿಸಿದ ವಸ್ತುಗಳನ್ನು ಅವುಗಳ ಆಕಾರಗಳಿಗೆ ಅನುಗುಣವಾಗಿ ಬೇರ್ಪಡಿಸಿರಿ. ಹಾಗೆಯೇ ನೀವು ನಿತ್ಯ ಜೀವಿನದಲ್ಲಿ ನೋಡಿದ ಇನ್ನಷ್ಟು ವಸ್ತುಗಳಿಂದ ಅಂಕಣಗಳನ್ನು ತುಂಬಿರಿ.

| ಚೆಂಡಿನಾಕಾರ | ಇಟ್ಟಿಗೆಯ ಆಕಾರ | ದಾಳದ ಆಕಾರ | ಜೋಕರ್ ಟೋಪಿ ಯಾಕಾರ | ಸಿಲಿಂಡರಾಕಾರ |
|---|---|---|---|---|
| | | | | |
| | | | | |
| | | | | |
| | | | | |
| | | | | |
| | | | | |
| | | | | |


SCERT TELANGANA

**ಆಲೋಚಿಸಿರಿ – ಚರ್ಚಿಸಿರಿ.**

1. ಮೇಲಿನ ವಸ್ತುಗಳೆನ್ನೆಲ್ಲಾ ಉರುಳಿಸಬಹುದೇ? ಅಥವಾ ಜರುಗಿಸಬಹುದೇ?
2. ಚೆಂಡು ಉರುಳುತ್ತದೆಯೇ? ಚೆಂಡಿನಾಕಾರದ ಎಲ್ಲ ವಸ್ತುಗಳು ಉರುಳುತ್ತವೆಯೆ?
3. ಎಷ್ಟು ವಿಧಗಳಲ್ಲಿ ಒಂದು ಸೂಟ್‌ಕೇಸನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಜರುಗಿಸಬಹುದು? ಅದನ್ನು ಉರುಳಿಸಲು ಸಾಧ್ಯವೇ?
4. ಸಿಲಿಂಡರಾಕಾರದ ವಸ್ತುಗಳು ಉರುಳುತ್ತವೆಯೇ? ಅವನ್ನು ಜರುಗಿಸಬಹುದೇ?
5. ಏಕೆ ಕೆಲವು ವಸ್ತುಗಳನ್ನು ಕೇವಲ ಉರುಳುಸುತ್ತವೆ, ಮತ್ತೆ ಕೆಲವು ವಸ್ತುಗಳನ್ನು ಜರಗುಸುತ್ತೇವೆ ?

**ಚಟುವಟಿಕೆ :**


ನಿತ್ಯ ತನ್ನ ಐವರು ಸ್ನೇಹಿತರೊಂದಿಗೆ ಸೇರಿ ಆಡುತ್ತಿದ್ದಾಳೆ. ಪಲ್ಲವಿಯ ಕಣ್ಣಿಗೆ ಬಟ್ಟೆಯನ್ನು ಕಟ್ಟಿ ಎಲ್ಲರೂ ಒಂದು ಮೇಜಿನ ಸುತ್ತಲೂ ಸುತ್ತುತ್ತಾ, ತನಗೆ ಇಷ್ಟ ಬಂದಷ್ಟು ಕಾಲ ಚಪ್ಪಾಳೆ ತಟ್ಟಲು ಹೇಳಿದರು. ಪಲ್ಲವಿಯು ಚಪ್ಪಾಳೆ ಹೊಡೆಯುವುದನ್ನು ನಿಲ್ಲಿಸಿದ ತಕ್ಷಣ ಎಲ್ಲಿರುವವರು ಅಲ್ಲಿಯೇ ನಿಲ್ಲಬೇಕು. ಅವರುಗಳಲ್ಲಿ ಯಾರು ಮೇಜಿನ ಮೂಲೆಗಳ ಹತ್ತಿರ ನಿಂತಿರುವುದಿಲ್ಲವೋ ಅವರು ಆಟದಿಂದ ಹೊರಗೆ ಹೋದಂತೆ.





ಈ ಆಟದಲ್ಲಿ ಯಾರ್ಯಾರು ಮೇಜಿನ ಮೂಲೆಗಳಲ್ಲಿ ನಿಂತಿದ್ದಾರೆ? ಆಟದಲ್ಲಿ ಔಟಾದವರು ಯಾರು? ಏಕೆ?

## ಈಗ ಬೇರೆ ಬೇರೆ ಆಕಾರಗಳಲ್ಲಿರುವ ವಸ್ತುಗಳ, ಅಂಚುಗಳು, ಮೂಲೆಗಳನ್ನು ಲೆಕ್ಕಿಸೋಣ.

1. ಇಟ್ಟಿಗೆಯಾಕಾರವಿರುವ ಕೆಳಗಿನ ವಸ್ತುಗಳಿಗೆ ಇರುವ ಅಂಚುಗಳೆಷ್ಟು? ಎಷ್ಟು ಮೂಲೆಗಳಿವೆ?




ಅಂಚುಗಳ ಸಂಖ್ಯೆ ________________ ಅಂಚುಗಳ ಸಂಖ್ಯೆ ________________


ಮೂಲೆಗಳ ಸಂಖ್ಯೆ ________________ ಮೂಲೆಗಳ ಸಂಖ್ಯೆ ________________

**ಶಿಕ್ಷಕರ ಸೂಚನೆಗಳು:** ಈ ಚಟುವಟಿಕೆ ಮಾಡುವ ಮೊದಲು ವಿವಿಧ ಆಕಾರಗಳಿರುವ ವಸ್ತುಗಳನ್ನು ವಿದ್ಯಾರ್ಥಿಗೆ ಪರಿಚಯ ಮಾಡುತ್ತಾ ಅವುಗಳ ಅಂಚು , ಮೂಲೆಗಳನ್ನು ಲೆಕ್ಕಿಸುವುದರಲ್ಲಿ ಅವರಿಗೆ ಸಹಾಯ ಮಾಡಿ.

SCERT TELANGANA

2. ದಾಳದ ಆಕಾರದ ವಸ್ತುಳಿಗೆ ಎಷ್ಟು ಅಂಚು, ಎಷ್ಟು ಮೂಲೆಗಳಿವೆ?




ಅಂಚುಗಳ ಸಂಖ್ಯೆ ________________

ಮೂಲೆಗಳ ಸಂಖ್ಯೆ ________________

ಅಂಚುಗಳ ಸಂಖ್ಯೆ ________________

ಮೂಲೆಗಳ ಸಂಖ್ಯೆ ________________

3. ಜೋಕರನ ಟೋಪಿಯ ಆಕಾರದ ವಸ್ತುಗಳಿಗಿರುವ ಅಂಚುಗಳೆಷ್ಟು? ಎಷ್ಟು ಮೂಲೆಗಳನ್ನು ಅವು ಹೊಂದಿವೆ?






ಅಂಚುಗಳ ಸಂಖ್ಯೆ ________________


ಮೂಲೆಗಳ ಸಂಖ್ಯೆ ________________

ಅಂಚುಗಳ ಸಂಖ್ಯೆ ________________

ಮೂಲೆಗಳ ಸಂಖ್ಯೆ ________________

SCERT TELANGANA

4. ಸಿಲಿಂಡರಾಕಾರದ ವಸ್ತುವಿಗಿರುವ ಅಂಚುಗಳೆಷ್ಟು? ಮೂಲೆಗಳೆಷ್ಟು?






ಅಂಚುಗಳ ಸಂಖ್ಯೆ ________________ ಅಂಚುಗಳ ಸಂಖ್ಯೆ ________________

ಮೂಲೆಗಳ ಸಂಖ್ಯೆ ________________ ಮೂಲೆಗಳ ಸಂಖ್ಯೆ ________________


5. ಚೆಂಡಿನಾಕಾರದ ವಸ್ತುಗಳು ಅಂಚುಗಳು, ಮೂಲೆಗಳನ್ನು ಹೊಂದಿವೆಯೇ? ________________


**ಆಲೋಚಿಸಿರಿ – ಚರ್ಚಿಸಿರಿ.**

ಚೆಂಡು, ಸಿಲಿಂಡರಾಕಾರದ ವಸ್ತುಗಳು ಮಾತ್ರವೇ ಉರುಳಬಲ್ಲವೆಂದು ನೀವು ಏಕೆ ಆಲೋಚಿಸುತ್ತೀರಿ ?

## ವಿವಿಧ ಮಾದರಿ ಪೆಟ್ಟಿಗೆಗಳು.

ಒಂದು ಸಾಬೂನಿನ ಪೆಟ್ಟಿಗೆಯನ್ನು ತೆಗೆದುಕೊಂಡು ಕಾಗದದ ಮೇಲೆ ಇಡಿರಿ. ಕೆಳಗೆ ತೋರಿಸಿದ ರೀತಿಯಲ್ಲಿ ಎಲ್ಲಾ ಮುಖಗಳನ್ನು ಪೆನ್ಸಿಲ್ಲಿನ ಸಹಾಯದಿಂದ ಅಂಚುಗಳ ಮೂಲಕ ಎಳೆಯಿರಿ.







ಎ) ಸಾಬೂನಿನ ಪೆಟ್ಟಿಗೆಗಿರುವ ಮುಖಗಳೆಷ್ಟು? --------------------------.

ಬಿ) ಎಲ್ಲ ಮುಖಗಳು ನೋಡಲು ಒಂದೇ ರೀತಿ ಇವೆಯೆ? -------------------.

SCERT TELANGANA


ಸಿ) ಈಗ ಸಾಬೂನಿನ ಪೆಟ್ಟಿಗೆಯನ್ನು ಅದರ ಅಂಚುಗಳ ಮೂಲಕ ಎಚ್ಚರಿಕೆಯಿಂದ ತೆರೆಯಿರಿ. ಇದು ಈ ಕೆಳಗೆ ಕೊಟ್ಟಿರುವ ಚಿತ್ರವನ್ನು ಹೋಲುವಂತಿದೆಯೆ?



ಇದನ್ನೇ ಸಾಬೂನು ಪೆಟ್ಟಿಗೆಯ ಜಾಲಾಕೃತಿ ಎನ್ನುತ್ತೇವೆ.

ಡಿ) ಟೂತ್ ಪೇಸ್ಟ್ ಬಾಕ್ಸನ್ನು ಬಿಚ್ಚಿದಾಗ ಈ ಕೆಳಗಿನ ಯಾವ ಜಾಲಾಕೃತಿ ಬರುತ್ತದೆ.




**ಇವನ್ನು ಮಾಡಿರಿ.**

ಟೂತ್‌ಪೇಸ್ಟ್ ಪೆಟ್ಟಿಗೆ, ಮಿಠಾಯಿ ಪೆಟ್ಟಿಗೆ, ಚಪ್ಪಲಿ ಪೆಟ್ಟಿಗೆ ಮುಂತಾದವುಗಳನ್ನು ಶೇಖರಿಸಿರಿ. ಅವನ್ನು ತೆರೆದು ಅವುಗಳ ಜಾಲಾಕೃತಿಗಳನ್ನು ಬರೆಯಿರಿ.

SCERT TELANGANA


## ದಾಳಗಳೊಂದಿಗೆ ಆಡೋಣ :

ಒಂದು ದಾಳವನ್ನು ತೆಗೆದುಕೊಳ್ಳಿ, ಕಾಗದದ ಮೇಲಿಡಿರಿ ಎಲ್ಲ ಮುಖಗಳನ್ನು ಚಿತ್ರದಲ್ಲಿ ತೋರಿಸಿದಂತೆ ಎಳೆಯಿರಿ.




ದಾಳ ಎಷ್ಟು ಮುಖಗಳನ್ನು ಹೊಂದಿದೆ? ____________________

ಎಲ್ಲ ಮುಖಗಳು ಒಂದೇ ರೀತಿ ಇವೆಯೇ? ____________________



## ತೆರೆದಿರುವ ಕೆಲವು ಪೆಟ್ಟಿಗೆಗಳು / ಮುಚ್ಚಳವಿಲ್ಲದ ಪೆಟ್ಟಿಗೆಗಳು

ಕೆಳಗೆ ತೋರಿಸಿದ ಜಾಲಾಕೃತಿಗಳಲ್ಲಿ ಯಾವುವು ಕೊಟ್ಟಿರುವ ಪೆಟ್ಟಿಗೆ ತಯಾರಿಸಲು ಉಪಯೋಗವಾಗುತ್ತವೆ.





SCERT TELANGANA

# 2 ವಿವಿಧ ಭಾಗಗಳು – ವಿಧ ವಿಧ ನೋಟ

ನಿತ್ಯ, ಮೇಘನ, ಮಧು ಒಂದೇ ಬಸ್ಸಿನ ಚಿತ್ರಗಳನ್ನು ಬರೆದಿದ್ದಾರೆ. ಆದರೆ ಆಲೋಚಿಸಿರಿ ಅವರು ಬರೆದ ಚಿತ್ರಗಳು ಬೇರೆಬೇರೆಯಾಗಿ ಏಕೆ ಕಾಣಿಸುತ್ತಿವೆ.


ನಿತ್ಯ


ಮಧು


ಮೇಘನ


ಯಾರು ಬರೆದ ಬಸ್ಸಿನ ಚಿತ್ರ ಮುಂಭಾಗದಿಂದ ನೋಡಿದಂತೆ ಕಾಣಿಸುತ್ತದೆ?

ಯಾರು ಬರೆದ ಬಸ್ಸಿನ ಚಿತ್ರ ಮೇಲಿನಿಂದ ನೋಡಿದಂತೆ ಕಾಣಿಸುತ್ತದೆ?

ಯಾರು ಬರೆದ ಬಸ್ಸಿನ ಚಿತ್ರ ಪಕ್ಕದಿಂದ ನೋಡಿದಂತೆ ಕಾಣಿಸುತ್ತದೆ?

## ಪ್ರಯತ್ನಿಸಿರಿ :-

ನಿಮ್ಮ ಅಡಿಗೆ ಮನೆಯಲ್ಲಿ ಕೆಳಗೆ ಸೂಚಿಸಿರುವ ವಸ್ತುಗಳು ಮೇಲಿನಿಂದ ನೋಡಿದಾಗ ಹೇಗೆ ಕಾಣಿಸುತ್ತವೆ ಎಂಬುದನ್ನು ಗಮನಿಸಿರಿ.








ಅವು ಯಾವ ಆಕಾರವನ್ನು ಹೋಲುತ್ತವೆ.?

SCERT TELANGANA

**ಇವುಗಳನ್ನು ಮಾಡಿರಿ :**

ಕೆಳಭಾಗದಲ್ಲಿ ಕೆಲವು ವಸ್ತುಗಳ ಚಿತ್ರಗಳನ್ನು ನೀಡಲಾಗಿದೆ. ಮೇಲ್ಮುಖವಾಗಿ ಕಾಣಿಸುವ ವಸ್ತುಗಳ ಪಕ್ಕದಲ್ಲಿ 'T 'ಎಂದು, ಪಾರ್ಶ್ವ (ಪಕ್ಕ) ದಿಂದ ಕಾಣಿಸುವ ವಸ್ತುಗಳ ಬಳಿ 'S' ಎಂದು ಬರೆಯಿರಿ.



SCERT TELANGANA

## ಇವು ಯಾವ ಭಾಗದಿಂದ ತೆಗೆದ ಚಿತ್ರಗಳು?


ಕೆಳಗೆ ಒಂದೇ ಸ್ಥಳಕ್ಕೆ ಸಂಬಂಧಿಸಿದ ಮೂರು ಚಿತ್ರಗಳನ್ನು ನೀಡಲಾಗಿದೆ. ಇವುಗಳಲ್ಲಿ ಯಾವುದು ಮುಂಭಾಗದಿಂದ, ಯಾವುದು ಹಿಂಭಾಗದಿಂದ, ಯಾವುದು ಪಾರ್ಶ್ವ ಭಾಗದಿಂದ ತೆಗೆದ ಚಿತ್ರ ಎಂಬುದನ್ನು ಗುರುತಿಸಿ ಚೌಕದಲ್ಲಿ ಬರೆಯಿರಿ.


















SCERT TELANGANA



## ಮಿಟ್ಟು ಮತ್ತು ಮೀನಾ ಪ್ರಯಾಣ :

ಮಿಟ್ಟು ಮತ್ತು ಮೀನ ತರಗತಿಯಲ್ಲಿನ ಫ್ಯಾನ್ (ಪಂಕ) ಮೇಲೆ ಕುಳಿತಿವೆ.





(ಅ) ಅವು ಎಷ್ಟು ಮಕ್ಕಳನ್ನು ನೋಡಿವೆ ?

(ಆ) ಶಿಕ್ಷಕರು ಏನು ಮಾಡುತ್ತಿದ್ದಾರೆ ?

(ಇ) ಶಿಕ್ಷಕರ ಮೇಜಿನ ಮೇಲೆ ಏನಿದೆ ?

(ಈ) ಎಷ್ಟು ಮಂದಿ ಮಕ್ಕಳು ತಮ್ಮ ತಮ್ಮ ಮೇಜಿನ ಮೇಲೆ ಪುಸ್ತಕಗಳನ್ನು ತೆರೆದಿದ್ದಾರೆ ?

(ಉ) ಶಿಕ್ಷಕರ ಕುರ್ಚಿಯ ಮೇಲೆ ಒಂದು ಪುಸ್ತಕದ ಚಿತ್ರ ಬಿಡಿಸಬಲ್ಲೆಯಾ ?

### ಪ್ರಯತ್ನಿಸಿರಿ :

ನಿಮ್ಮ ತರಗತಿಯನ್ನು ಮೇಲ್ಭಾಗದಿಂದ ನೋಡಿದಾಗ ಹೇಗೆ ಕಾಣಿಸುತ್ತದೆ? ಈ ಚಿತ್ರವನ್ನು ಬಿಡಿಸಲು ಪ್ರಯತ್ನಿಸಿರಿ.

SCERT TELANGANA

ಮಿಟ್ಟು, ಮೀನಾ ಪಾಠಶಾಲೆಯಿಂದ ಹೊಲಗಳನ್ನು ದಾಟಿ ಅವು ಕೆಳಗೆ ನೋಡಿದಾಗ ಅವು ಈ ದೃಶ್ಯಗಳನ್ನು ಗಮನಿಸಿದವು.



1) ಶಾಲೆಯ ಸುತ್ತಮುತ್ತ ಎಷ್ಟು ಗುಡಿಸಲುಗಳು ಇವೆ? ________________ ಮೇಲಿನಿಂದ ಅವು ಯಾವ ಆಕಾರದಲ್ಲಿ ಕಾಣಿಸುತ್ತವೆ? ________________

2) ಎಷ್ಟು ಮರಗಳಿವೆ? ________________

3) ರಸ್ತೆಯ ಮೇಲೆ ಎಷ್ಟು ವಾಹನಗಳಿವೆ? ________________ ಅವು ಯಾವವೆಂದು ಊಹಿಸಿ.

4) ನಿನಗೆ ಎಷ್ಟು ಪ್ರಾಣಿಗಳು ಕಾಣಿಸುತ್ತಿವೆ ? ________________


5) ವೃತ್ತಾಕಾರದಲ್ಲಿರುವ (ಗುಂಡಾಗಿ) ವಸ್ತುಗಳು ಎಷ್ಟು ಕಾಣಿಸುತ್ತಿವೆ? ________________

6) ಚಿತ್ರದಲ್ಲಿ ಕಾಣಿಸಬಹುದಾದ ಇತರ ವಸ್ತುಗಳು ಯಾವುವು? ನಿಮ್ಮ ಗೆಳೆಯರೊಂದಿಗೆ ಚರ್ಚಿಸಿ.

________________________________________________________________________

SCERT TELANGANA


ಮಿಟ್ಟು ಮತ್ತು ಮೀನ ಬೇರೆ ಸ್ಥಳದಲ್ಲಿ ಹಾರಾಡುತ್ತಿವೆ? ಅದು ಏನೆಂದು ಊಹಿಸಿ?



ಅ) ಎಷ್ಟು ರೈಲು ಹಳಿಗಳು ನಿನಗೆ ಕಾಣಿಸುತ್ತವೆ? ________________

ಆ) ಎಷ್ಟು ರೈಲು ಹಳಿಗಳ ಮೇಲೆ ರೈಲುಗಳು ನಿಂತಿವೆ? ________________

ಇ) ರೈಲ್ವೆ ಪ್ಲಾಟ್‌ಫಾರಂ ಮೇಲೆ ನೀವು ಇನ್ನು ಏನನ್ನು ಗಮನಿಸಿದಿರಿ? ನಿಮ್ಮ ಸ್ನೇಹಿತರೊಂದಿಗೆ ಚರ್ಚಿಸಿ ಬರೆಯಿರಿ. ________________________



ಈ) ನಾವು ರೈಲ್ವೆ ಹಳಿಗಳ ಬಳಿ ನಿಂತು ಅವನ್ನು ನೋಡಿದಾಗ ಅದು ಹೀಗೆ ಕಾಣಿಸುತ್ತದೆ.

________________________________________

ಉ) ರೈಲುಹಳಿಗಳು ಒಂದು ಕಡೆ ಅಗಲವಾಗಿ ಮತ್ತೊಂದು ಕಡೆ ಚಿಕ್ಕದಾಗಿ ಇರುವಂತೆ ಕಾಣುತ್ತದೆ ಏಕೆ?________________________________

ಊ) ಇಂತಹವುಗಳನ್ನು ನೀವು ಎಲ್ಲೆಲ್ಲಿ ಗಮನಿಸಬಹುದು?


________________________________________



SCERT TELANGANA


## ಒಂದು ಪೆಟ್ಟಿಗೆಯ ಮೇಲೆ ಮತ್ತೊಂದು ಪೆಟ್ಟಿಗೆ

ಎಚ್ಚರಿಕೆಯಿಂದ ಗಮನಿಸಿ. ಇಲ್ಲಿ ನಾಲ್ಕು ಪೆಟ್ಟಿಗೆಗಳಿವೆ.




ಕೆಳಗಿನ ಪ್ರತಿಚಿತ್ರದಲ್ಲಿ ಎಷ್ಟು ಪೆಟ್ಟಿಗೆಗಳಿವೆ ತಿಳಿಸಿ?


(a)




(b)




(c)




(d)




(e)



(f)




(g)



SCERT TELANGANA

# 3 ಇನ್ನೂ ಕೆಲವು ಆಕಾರಗಳು

ಈ ತರಗತಿ ಕೊಠಡಿಯಲ್ಲಿ ಯಾವ ಯಾವ ಆಕಾರಗಳು ಕಾಣುತ್ತಲಿವೆ ?



SCERT TELANGANA

□ ಆಕೃತಿಯ ವಸ್ತುಗಳು : ______________________________

▭ ಆಕೃತಿಯ ವಸ್ತುಗಳು: ______________________________

△ ಆಕೃತಿಯ ವಸ್ತುಗಳು : ______________________________

○ ಆಕೃತಿಯ ವಸ್ತುಗಳು : ______________________________

## ಈ ಆಕಾರ(ಆಕೃತಿ)ಗಳನ್ನು ಏನೆಂದು ಕರೆಯುತ್ತಾರೆ?


### ಆಯತ :



ನಾವು ಸೋಪು ಪೆಟ್ಟಿಗೆಯ ಮುಖಗಳನ್ನು ಚಿತ್ರದಲ್ಲಿ ತೋರಿಸಿದ ವಿಧವಾಗಿ ಈಗಾಗಲೇ ಎಳೆದಿದ್ದೇವೆ.

ಅವುಗಳ ಮುಖಗಳು ಈ ರೀತಿಯಾಗಿ ಕಾಣಿಸುತ್ತವೆ.




ಮೇಲಿರುವ ಎರಡು ಆಕೃತಿಗಳನ್ನು ಆಯತಗಳು ಎನ್ನುತ್ತೇವೆ.

(ಅ) ಆಯತದಲ್ಲಿ ಎಷ್ಟು ಬಾಹುಗಳಿವೆ?

(ಆ) ಆಯತದಲ್ಲಿ ಎಷ್ಟು ಮೂಲೆಗಳು ಅಥವಾ ಶೃಂಗಗಳಿವೆ?


(ಇ) ಆಯತದಲ್ಲಿರುವ ಎಲ್ಲಾ ಬಾಹುಗಳ ಉದ್ದಗಳು ಸಮನಾಗಿರುತ್ತವೆಯಾ?

### ಚೌಕ :



ಚಿತ್ರದಲ್ಲಿ ತೋರಿಸಿದ ವಿಧವಾಗಿ ದಾಳದ ಮುಖಗಳೂ ಸಹ ಈಗಾಗಲೇ ಎಳೆದಿದ್ದೇವೆ.

ದಾಳವನ್ನು ಎಳೆದಾಗ ಅವುಗಳ ಮುಖಗಳು ಈ ರೀತಿಯಾಗಿ ಕಾಣಿಸುತ್ತವೆ.



ಈ ಆಕೃತಿಯನ್ನು ಚೌಕ ಎನ್ನುತ್ತಾರೆ.

(ಅ) ಚೌಕದಲ್ಲಿ ಎಷ್ಟು ಬಾಹುಗಳಿವೆ?

(ಆ) ಚೌಕದಲ್ಲಿ ಎಷ್ಟು ಶೃಂಗ ಅಥವಾ ಮೂಲೆಗಳಿವೆ?

(ಇ) ಚೌಕದ ಬಾಹುಗಳೆಲ್ಲವೂ ಸಮವೇನಾ?

SCERT TELANGANA

**ಇವನ್ನು ಮಾಡಿರಿ**

1. ನಿಮ್ಮ ತರಗತಿ ಕೊಠಡಿಯಲ್ಲಿ ಚೌಕ, ಆಯತಕಾರವುಳ್ಳ ವಸ್ತುಗಳು ಗುರುತಿಸಿ ಪಟ್ಟಿಯಲ್ಲಿ ಬರೆಯಿರಿ.


| ಆಯತ | ಚೌಕ |
|---|---|
| | |
| | |
| | |

**ಪ್ರಯತ್ನಿಸಿರಿ :**

ಆಯತಕಾರವುಳ್ಳ ಕಾಗದವನ್ನು (ಪೇಪರನ್ನು) ಮಡಿಚಿ ಚೌಕಾಕಾರವಾಗಿ ಏರ್ಪಡಿಸಿರಿ.

**ತ್ರಿಭುಜಗಳು :**

ಒಂದು ಚೌಕಾಕಾರದ ಕಾಗದವನ್ನು ತೆಗೆದುಕೊಳ್ಳಿ.
ಚಿತ್ರದಲ್ಲಿ ತೋರಿಸಿದ ವಿಧವಾಗಿ ಮಡಿಚಿರಿ.



ಈ ಆಕೃತಿ (ಆಕಾರ) ಯನ್ನು ತ್ರಿಭುಜ ಎನ್ನುತ್ತಾರೆ.

(ಅ) ತ್ರಿಭುಜದಲ್ಲಿ ಎಷ್ಟು ಬಾಹುಗಳಿವೆ? __________

(ಆ) ತ್ರಿಭುಜದಲ್ಲಿ ಎಷ್ಟು ಶೃಂಗಗಳಿವೆ ? __________

SCERT TELANGANA

**ಇವನ್ನು ಮಾಡಿರಿ**


1. ನಿಮ್ಮ ಪರಿಸರದಲ್ಲಿ ತ್ರಿಭುಜಾಕಾರದಂತೆ ಇರುವ ವಸ್ತುಗಳು ಯಾವುವು? ಕೆಳಗಿನ ಗೆರೆಗಳ ಮೇಲೆ ಬರೆಯಿರಿ.

______________________________________________

______________________________________________

**ಆಲೋಚಿಸಿ-ಚರ್ಚಿಸಿ :**

1. ಕೆಳಗಿನವುಗಳಲ್ಲಿ ತ್ರಿಭುಜಗಳಾವುವು ಗುರುತಿಸಿ.



## ವೃತ್ತ :

ಲತ ತನ್ನ ಬಳೆ (Bangle) ತನ್ನ ತಾಯಿಯ ಬಳೆಯನ್ನು ಪೇಪರ್ (ಕಾಗದದ) ಮೇಲೆ ಇಟ್ಟು ಟ್ರೇಸ್ ಮಾಡುವುದರ ಮೂಲಕ ಕೆಳಗೆ ತೋರಿಸಿದ ವಿಧವಾಗಿ ಆಕೃತಿಗಳನ್ನು ಏರ್ಪಡಿಸಿದಳು.





ಈ ಆಕೃತಿಗಳನ್ನು ವೃತ್ತಗಳು ಎನ್ನುತ್ತಾರೆ.

(ಅ) ಈ ಆಕೃತಿಯಲ್ಲಿ ಬಾಹುಗಳು, ಶೃಂಗಗಳಿವೆಯಾ? ____________________

**ಇವನ್ನು ಮಾಡಿರಿ**

ನಿಮ್ಮ ಸುತ್ತಲೂ ಇರುವ ವಸ್ತುಗಳಲ್ಲಿ ಯಾವುವು ವೃತ್ತಾಕಾರದಲ್ಲಿವೆ? ಕೆಳಗೆ ಗೆರೆಗಳ ಮೇಲೆ ಬರೆಯಿರಿ.

______________________________________________

______________________________________________


SCERT TELANGANA

## ವಿವಿಧ ಆಕಾರಗಳಿಂದ ಚಿತ್ರಗಳನ್ನು ಎಳೆಯೋಣ.



ಆಕೃತಿ (ಆಕಾರ)ಗಳನ್ನು ಉಪಯೋಗಿಸಿ ಕನಿಷ್ಠ 50 ಚಿತ್ರಗಳು ಎಳೆಯಿರಿ. ನೀವು ಎಳೆಯುವ ಪ್ರತಿ ಚಿತ್ರದಲ್ಲಿ ಯಾವ ಆಕಾರವಾದರು, ಎಷ್ಟು ಬಾರಿಯಾಗಲಿ ಉಪಯೋಗಿಸಬಹುದು. ಯಾವ ಪ್ರಮಾಣದಲ್ಲಿಯಾದರು ಉಪಯೋಗಿಸಬಹುದು.

ಉದಾಹರಣೆಗಾಗಿ ಕೆಲವು ಚಿತ್ರಗಳನ್ನು ನಿಮಗೋಸ್ಕರ ಎಳೆಯಲಾಗಿದೆ.




ಕೆಳಗೆ ಕೊಟ್ಟಿರುವ ಸ್ಥಳವು ಕಡಿಮೆಯಾದರೆ ನಿಮ್ಮ ನೋಟ್ ಪುಸ್ತಕದಲ್ಲಿ ಎಳೆಯಿರಿ.

SCERT TELANGANA

## ಈ ಚುಕ್ಕೆಗಳನ್ನು ಉಪಯೋಗಿಸಿ ಆಕಾರಗಳನ್ನು ಎಳೆಯಬಲ್ಲಿರಾ?


ಕೆಳಗೆ ಕೊಟ್ಟಿರುವ ಚುಕ್ಕೆಗಳನ್ನು ಸೇರಿಸುವುದರ ಮೂಲಕ ವಿವಿಧ ಅಳತೆಗಳಿಂದ ಚೌಕ, ಆಯತ, ತ್ರಿಭುಜಾಕಾರಗಳು ಸಾಧ್ಯವಾಗುವಷ್ಟು ಎಳೆಯಿರಿ. ನಿಮಗೋಸ್ಕರ ಎರಡು ಆಕೃತಿಗಳು ಎಳೆದು ತೋರಿಸಲಾಗಿದೆ.



SCERT TELANGANA

**ಕೆಳಗೆ ಸೂಚಿಸಿದ ಬಣ್ಣಗಳಿಂದ ಕೊಟ್ಟಿರುವ ರಂಗೋಲಿಯನ್ನು ತುಂಬಿರಿ.**

ಹಸಿರು –ಚೌಕ, ಕೆಂಪು – ವೃತ್ತ, ಹಳದಿ – ತ್ರಿಭುಜ, ನೀಲಿ – ಆಯತ.



(ಅ) ನೀವು ಗಮನಿಸಿದ ಚೌಕಗಳು ಎಷ್ಟು? ____________________

(ಆ) ನೀವು ಗಮನಿಸಿದ ಆಯತಗಳು ಎಷ್ಟು? ____________________

(ಇ) ನೀವು ಗಮನಿಸಿದ ವೃತ್ತಗಳು ಎಷ್ಟು? ____________________

(ಈ) ನೀವು ಗಮನಿಸಿದ ತ್ರಿಭುಜಗಳು ಎಷ್ಟು? ____________________

**ಪ್ರಯತ್ನಿಸಿ**

1. ಮೇಲಿನ ಆಕಾರಗಳಿಂದ ನಿಮಗೆ ಇಷ್ಟವಾದ ರಂಗೋಲಿಯನ್ನು ಏರ್ಪಡಿಸಿ. ವಿವಿಧ ಆಕಾರಗಳಿಗೆ ವಿವಿಧ ಬಣ್ಣಗಳನ್ನು ಹಾಕಿರಿ.



SCERT TELANGANA

## ಅಭ್ಯಾಸ :

1. ಈ ಕೆಳಗಿನ ವಸ್ತುಗಳನ್ನು ಟ್ರೇಸ್ (Trace) ಮಾಡುವುದರ ಮೂಲಕ ಪಡೆಯುವ ಆಕಾರಗಳನ್ನು ಬರೆಯಿರಿ.

(ಅ) ಬೆಂಕಿ ಪೊಟ್ಟಣ : ______


(ಆ) ರಿಂಗ್ ಬಾಲ್ : ______

(ಇ) ವಿಕ್ಸ್ ಚಾಕ್ಲೆಟ್ : ______

(ಈ) ಪಠ್ಯ ಪುಸ್ತಕ : ______

(ಉ) ಡಸ್ಟರು (Duster) : ______


2. ಕೊಟ್ಟಿರುವ ಚಿತ್ರಗಳಲ್ಲಿನ ಆಕಾರ (ಆಕೃತಿ)ಗಳನ್ನು ಲೆಕ್ಕಿಸಿ, ಅವುಗಳ ಸಂಖ್ಯೆಯನ್ನು ಬರೆಯಿರಿ.



(ಅ) ಚೌಕಗಳ ಸಂಖ್ಯೆ ______

(ಆ) ತ್ರಿಭುಜಗಳ ಸಂಖ್ಯೆ ______

(ಇ) ಆಯತಗಳ ಸಂಖ್ಯೆ ______



ಚೌಕಗಳ ಸಂಖ್ಯೆ ______

ತ್ರಿಭುಜಗಳ ಸಂಖ್ಯೆ ______

ಆಯತಗಳ ಸಂಖ್ಯೆ ______


ವೃತ್ತಗಳ ಸಂಖ್ಯೆ ______

3. ಜೇಡಿಮಣ್ಣು ಉಪಯೋಗಿಸಿ ಚೌಕಗಳು, ಆಯತಗಳು, ತ್ರಿಭುಜಗಳು, ವೃತ್ತಗಳನ್ನು ವಿವಿಧ ಅಳತೆಗಳಲ್ಲಿ ತಯಾರಿಸಿ


SCERT TELANGANA

# 4 ಸಂಖ್ಯೆಗಳನ್ನು ತಿಳಿದುಕೊಳ್ಳೋಣ !


ಈ ದಿನ ತರಗತಿ ಕೊಠಡಿಯಲ್ಲಿ ರಮ ಟೀಚರ್ ಮಣಿ (ಗುಂಡು)ಗಳ ಸರವನ್ನು ತೂಗು ಹಾಕಿದರು. ಮಣಿಗಳ ಸರದಲ್ಲಿ ಎಷ್ಟು ಮಣಿಗಳ ನಂತರ ಬಣ್ಣ ಬದಲಾಗುತ್ತದೆ. ಆ ಮಣಿಗಳ ಸರದಲ್ಲಿ 10 ಮಣಿಗಳ ನಂತರ ಮತ್ತು 25 ಮಣಿಗಳ ನಂತರ ಕೆಳಗಿನ ಚಿತ್ರದಲ್ಲಿ ತೋರಿಸಿದ ಸಂಖ್ಯಾ ಸೂಚಕಗಳನ್ನು ತೂಗು ಹಾಕಿರುವರು. ನೀವು 50 ಮಣಿಗಳ ಬಳಿಕ ಒಂದು, 75 ಮಣಿಗಳ ನಂತರ ಮತ್ತೊಂದು 100 ಮಣಿಗಳ ನಂತರ ಮತ್ತೊಂದು ಸಂಖ್ಯಾ ಸೂಚಕಗಳು ತೂಗು ಹಾಕಿರಿ.





ಕೆಳಗೆ ಕೊಟ್ಟಿರುವ ಮಣಿಗಳ ಸರದಲ್ಲಿ ನೇತಾಕಿರುವ ಸೂಚಕಗಳಲ್ಲಿ (tags) ಸರಿಯಾದ ಸಂಖ್ಯೆಗಳು ಬರೆಯಿರಿ.




ಇಗಕೊಟ್ಟಿರುವ ಮಣಿಗಳ ಸರದ ಮೇಲೆ 27, 39, 45, 14 ಸಂಖ್ಯಾ ಸೂಚಕಗಳನ್ನು ತೂಗು ಹಾಕಿರಿ.




ಅದೇ ರೀತಿಯಾಗಿ 54, 78, 85, 63, 92 ಸಂಖ್ಯಾ ಸೂಚಕಗಳನ್ನು ಕೂಡ ಕೆಳಗಿನ ಸರದ ಮೇಲೆ ತೂಗು ಹಾಕಿರಿ.




**ನೀವು ಮಾಡಿರಿ :**


ಮೇಲೆ ಕೊಟ್ಟಿರುವ ಮಣಿಗಳ ಸರವನ್ನು ಗಮನಿಸುತ್ತಾ 100 ಮಣಿಗಳಿಂದ ಒಂದು ಮಣಿಯ ಸರವನ್ನು ತಯಾರುಮಾಡಿ.


ನಿಮಗೆ ಇಷ್ಟವಾದ ಕೆಲವು ಸಂಖ್ಯಾ ಸೂಚಕಗಳನ್ನು ತೂಗು ಹಾಕಿರಿ

SCERT TELANGANA

ಉದಾಹರಣೆ :-


ಸಂಧ್ಯ








**ಶಿಕ್ಷಕ :** ಸರೇ ಸಂಧ್ಯಾ! 37 ನ್ನು ಸಂಖ್ಯಾರೇಖೆಯ ಮೇಲೆ ಹೇಗೆ ತೋರಿಸುವಿರಿ ಹೇಳು.


**ಸಂಧ್ಯಾ :** ನಾನು 30 ಮತ್ತು 40ರ ಮಧ್ಯ, 30 ಕ್ಕಿಂತ 40 ಕ್ಕೆ ಹತ್ತಿರಕ್ಕೆ ಗುರ್ತಿಸುತ್ತೇನೆ.




**ಶಿಕ್ಷಕ :–** ಹೌದು, ಈ ರೀತಿಯಾಗಿ ಸಂಖ್ಯಾರೇಖೆಯ ಮೇಲೆ ಸಂಖ್ಯೆಗಳನ್ನು ಸೂಚಿಸುವುದು ಬಹಳ ಒಳ್ಳೆಯದು, ಈಗ 41, 59, 63, 75, 82, 99 ಸಂಖ್ಯೆಗಳನ್ನು ಸಂಖ್ಯಾರೇಖೆಯ ಮೇಲೆ ತೋರಿಸು. ಈ ಸಂಖ್ಯೆಗಳನ್ನು ಸಂಖ್ಯಾರೇಖೆಯ ಮೇಲೆ ಗುರುತಿಸಲು ಸಂಧ್ಯಾಗೆ ಸಹಾಯಮಾಡಿ.




ಕೆಳಗೆ ಕೊಟ್ಟಿರುವ ಸಂಖ್ಯಾರೇಖೆಯ ಮೇಲೆ ಸೂಚಿಸಲಾದ ಬಾಕ್ಸ್‌ಗಳಲ್ಲಿ ಸಂಖ್ಯೆಗಳನ್ನು ಗುರ್ತಿಸಿ ಬರೆಯಿರಿ.




SCERT TELANGANA

**ವಹೀದಾ ಕುಟುಂಬ :**

ವಹೀದಾಳ ಕುಟುಂಬ ಸದಸ್ಯರ ವಯಸ್ಸುಗಳು ಕೊಟ್ಟಿದೆ.


ಇಬ್ರಹೀಂ – 65


ರಜಿಯಾ –62


ರಫೀಕ್ – 42


ನಸೀಂ – 36


ಹಮೀದ್ – 38


ಷಾಹಿದಾ – 33


ವಹೀ ದಾ – 15


ಸುನೀರ್– 20


ಫಾತಿಮಾ – 8


ಫಹೀಂ – 8

(ಅ) ಈ ಕುಟುಂಬದಲ್ಲಿ ಹೆಚ್ಚು ವಯಸ್ಸು ಇರುವವರು ಯಾರು?______ ವಯಸ್ಸು______________

(ಆ) ಈ ಕುಟುಂಬದಲ್ಲಿ ಕಡಿಮೆ ವಯಸ್ಸು ಇರುವವರು ಯಾರು?______ ವಯಸ್ಸು ___________

(ಇ) ಇಬ್ರಹೀಂನ ಹಿರಿಯ ಮಗ ಯಾರು?__________________ ವಯಸ್ಸು ______

(ಈ) ಕುಟುಂಬದಲ್ಲಿನ ನಾಲ್ಕು ಜನ ಮಕ್ಕಳ ಹೆಸರುಗಳನ್ನು ಹೆಚ್ಚು ವಯಸ್ಸಿನಿಂದ ಕಡಿಮೆ ವಯಸ್ಸಿನ ಕ್ರಮದಲ್ಲಿ ಬರೆಯಿರಿ.

____________________________________________________________

____________________________________________________________

SCERT TELANGANA

## ಮಕ್ಕಳು ಕೂಡಿಟ್ಟು ಕೊಂಡ ಹಣವೆಷ್ಟು?

ಒಂದು ತಿಂಗಳಲ್ಲಿ 6 ಜನ ಮಕ್ಕಳು ಹಣವನ್ನು ಕೂಡಿಟ್ಟುಕೊಂಡರು. ಆ ತಿಂಗಳಿನ ಕೊನೆಯಲ್ಲಿ ಅವರು ಕೂಡಿಟ್ಟುಕೊಂಡ ಹಣವು ಕೆಳಗಿನ ಬಾಕ್ಸ್‌ಗಳಲ್ಲಿ ಕೊಟ್ಟಿದೆ.



| ತೇಜ | ದಿವ್ಯ | ಜಾನ್ | ರಹೀಂ | ಸಿಂಧು | ರಾಮು |
|---|---|---|---|---|---|
| ₹ 65 | ₹ 27 | ₹ 56 | ₹ 99 | ₹ 11 | ₹ 80 |

(ಅ) ಜಾನ್ ಬಚ್ಚಿಟ್ಟುಕೊಂಡ ಹಣವೆಷ್ಟು? ______________________________

(ಆ) ರೂ.50ಕ್ಕಿಂತ ಹೆಚ್ಚಿನ ಹಣವನ್ನು ಬಚ್ಚಿಟ್ಟುಕೊಂಡವರು ಯಾರು? ________________________

(ಇ) ಅವರಲ್ಲಿ ಹೆಚ್ಚು ಹಣವು ಕೂಡಿಟ್ಟು ಕೊಂಡವರು ಯಾರು? _________________________

(ಈ) ಒಂದು ವೇಳೆ ಜಾನ್ ₹10 ರೂಪಾಯಿಗಳ ನೋಟುಗಳನ್ನು, ಒಂದು ರೂಪಾಯಿ ನಾಣ್ಯವನ್ನು ಮಾತ್ರವೇ ಬಚ್ಚಿಟ್ಟುಕೊಂಡರೆ, ಅವನು ಕೂಡಿಟ್ಟು ಕೊಂಡ ಹಣದಲ್ಲಿ ಎಷ್ಟು ₹1 ರೂಪಾಯಿಗಳ ನೋಟುಗಳು, ಎಷ್ಟು ₹1 ರೂಪಾಯಿಯ ನಾಣ್ಯಗಳು ಇರಬಹುದು ______________________________

(ಉ) ಪ್ರತಿಯೊಬ್ಬರು ₹100 ರೂಪಾಯಿಗಳು ಉಳಿತಾಯ ಮಾಡುವುದಕ್ಕೆ ಇನ್ನೂ ಎಷ್ಟು ಬೇಕಾಗುತ್ತದೆ ಬರೆಯಿರಿ.



65 + ____________ = 100

27 + ____________ = 100

99 + ____________ = 100

11 + ____________ = 100


80 + ____________ = 100

56 + ____________ = 100

SCERT TELANGANA

ಸಂಖ್ಯಾರೇಖೆಯ ಮೇಲೆ 100ಕ್ಕಿಂತ ದೊಡ್ಡ ಸಂಖ್ಯೆಗಳನ್ನು ತೋರಿಸುವೆಯಾ?

ಇದಕ್ಕೂಮುನ್ನ ಸಂಧ್ಯಾ 100ರ ಒಳಗಿರುವ ಅನೇಕ ಸಂಖ್ಯೆಗಳನ್ನು ಸಂಖ್ಯಾರೇಖೆಯ ಮೇಲೆ ತೋರಿಸಿದ್ದಾಳೆ. ಈ ದಿನ ಆಕೆ ಒಂದು ಪ್ರತ್ಯೇಕವಾದ ಸಂಖ್ಯಾರೇಖೆಯನ್ನು ತಯಾರಿಸಿದ್ದಾಳೆ.





ಮೇಲಿನ ಸಂಖ್ಯಾರೇಖೆಯ ಮೇಲೆ 50 ಎಲ್ಲಿ ಇದೆ?

50 ಎನ್ನವುದು 0 ರಿಂದ 100ರ ನಡುವೆ ಇದೆ.

120 ಎಲ್ಲಿ ಇದೆ? ಅದು 100 ರಿಂದ 200 ರ ನಡುವೆ ಇರುತ್ತದೆ.


270 ಎಲ್ಲಿ ಇರಬಹುದು? ಇದು 200 ಮತ್ತು 300ರ ನಡುವೆ 300ಗೆ ಅತೀ ಸಮೀಪದಲ್ಲಿರುತ್ತದೆ.

ಈಗ 390, 410, 560, 750 ಗಳನ್ನು ಸಂಖ್ಯಾರೇಖೆಯ ಮೇಲೆ ತೋರಿಸಿ.






SCERT TELANGANA

ಅದೇ ರೀತಿಯಾಗಿ 90,180,240,360,550,820,910 ಗಳನ್ನು ಕೆಳಗೆ ಕೊಟ್ಟಿರುವ ಸಂಖ್ಯಾರೇಖೆಯ ಮೇಲೆ ತೋರಿಸಿ.



100ಕ್ಕಿಂತ ದೊಡ್ಡ ಸಂಖ್ಯೆಗಳನ್ನು ಮಾಧುರಿ ತನ್ನ ನೋಟ್ ಪುಸ್ತಕದಲ್ಲಿ ಬರೆದುಕೊಳ್ಳುತ್ತಾಳೆ.




**ಮೀನಾ :** ನೀವು ಈ ರೀತಿಯಾಗಿ ಎಲ್ಲಾ ಸಂಖ್ಯೆಗಳು – ಸಂಖ್ಯೆಗಳ ಹೆಸರುಗಳು ಬರೆಯಲು ಅಗತ್ಯವಿಲ್ಲ. 101 ಎನ್ನುವುದು ಒಂದು ನೂರಕ್ಕಿಂತ ಒಂದು ಹೆಚ್ಚು, ಇದನ್ನು ಒಂದುನೂರ ಒಂದು ಎಂದು ಓದುವುದು ಗುರ್ತಿಸಬೇಕು. ಅದೇ ರೀತಿಯಾಗಿ 105 ಎನ್ನುವುದು ಒಂದು ನೂರಕ್ಕಿಂತ 5 ಹೆಚ್ಚು, ಇದನ್ನು ಒಂದು ನೂರ ಐದು ಎಂದು ಓದುತ್ತೇವೆ. ಅದೇ ರೀತಿಯಾಗಿ 127 ಎನ್ನುವುದು ಕೂಡ ಒಂದುನೂರಕ್ಕಿಂತ 27 ಹೆಚ್ಚು ಇದನ್ನು ಒಂದುನೂರ ಇಪ್ಪತ್ತೇಳು ಎಂದು ಓದುತ್ತೇವೆ. ಇದೇ ರೀತಿಯಾಗಿ ಯಾವ ಸಂಖ್ಯೆಗಳಾದರು ಬರೆಯಬಹುದು, ಓದಬಹುದು.

ಈಗ ಕೊಟ್ಟಿರುವ ಸಂಖ್ಯೆಗಳ ಹೆಸರುಗಳು ಬರೆಯಿರಿ.

137 : ____________________

146 : ____________________

151 : ____________________

168 : ____________________

179 : ____________________

185 : ____________________

198 : ____________________

SCERT TELANGANA

**ಇವುಗಳನ್ನು ಮಾಡಿರಿ.**

1. ಕೆಳಗಿನ ಸಂಖ್ಯೆಗಳ ಹೆಸರುಗಳನ್ನು ಬರೆಯಿರಿ.

(ಅ) 247 : ಎರಡುನೂರ ನಲವತ್ತೇಳು,

(ಆ) 499 : ____________________

(ಇ) 391 : ____________________

(ಈ) 565: ____________________

(ಉ) 444 : ____________________

(ಊ) 288 : ____________________

(ಎ) 507 : ____________________

(ಏ) 307 : ____________________

(ಐ) 790 : ____________________


(ಒ) 972: ____________________

2. ಕೆಳಗಿನ ಅನುಕ್ರಮ ಸಂಖ್ಯೆಗಳನ್ನು ಪೂರ್ಣಗೊಳಿಸಿ.


| | | | | | | | | | | |
|---|---|---|---|---|---|---|---|---|---|---|
| (ಅ) | 100 | 125 | 150 | | | | | | | |
| (ಆ) | 200 | 210 | | | | | 260 | | | 290 |
| (ಇ) | 300 | 320 | | | | | 420 | | | |
| (ಈ) | 400 | 450 | | | | | 700 | | | |
| (ಉ) | 100 | 200 | | | | | 700 | | | 1000 |

SCERT TELANGANA


3. ಉದಾಹರಣೆಯಲ್ಲಿ ತೋರಿಸಿದ ವಿಧವಾಗಿ ಎದುರಿಗೆ ಇರುವ ಬಾಕ್ಸ್‌ಗಳಲ್ಲಿ ಸರಿಯಾದ ಸಂಖ್ಯೆಯನ್ನು ಬರೆಯಿರಿ.



462









SCERT TELANGANA

ಶಿಕ್ಷಕ ವಿದ್ಯಾರ್ಥಿಗಳಿಗೆ 399ನ್ನು ವಿಸ್ತರಣ ರೂಪದಲ್ಲಿ ಬರೆಯಲು ಹೇಳಿದಾಗ ಸಿದ್ದು, ಮೀನಾ, ಅಮರ್‌ರವರು ವಿವಿಧ ರೀತಿಯಲ್ಲಿ ಬರೆದರು.




ಆದರಂತೆ 399 = 300 + 90 + 9

= 3 ನೂರುಗಳು + 9 ಹತ್ತುಗಳು + 9 ಬಿಡಿಗಳು

= 3 x 100 + 9 x 10 + 9 x 1

**ಇವುಗಳನ್ನು ಮಾಡಿರಿ :**

1. ಕೆಳಗಿನ ಸಂಖ್ಯೆಗಳನ್ನು ಮೇಲೆ ತಿಳಿಸಿದ ಮೂರು ವಿಧವಾಗಿ ವಿಸ್ತರಿಸಿ ಬರೆಯಿರಿ.

(ಅ) 8 6 2 = ____________ + ____________ + _____

____________ + ____________ + _____

____________ + ____________ + _____

(ಆ) 6 0 2 = ____________ + ____________ + _____

____________ + ____________ + _____

____________ + ____________ + _____

SCERT TELANGANA

2. ಸಂಖ್ಯೆಯಲ್ಲಿ ಗೆರೆ ಎಳೆದಿರುವ ಅಂಕೆಯ ಸ್ಥಾನ ಬೆಲೆಯನ್ನು ◯ ಯಿಂದ ಸುತ್ತಿ.

(ಅ) 5 7 1    5, 500, 50

(ಆ) 1 4 8    800, 80, 8

(ಇ) 4 7 1    70, 700, 7

ಶೈಲಜ, ರಾಮು 1 ರಿಂದ 9 ರವರೆಗೆ ಇರುವ ಸಂಖ್ಯಾ ಕಾರ್ಡುಗಳಿಂದ ಕೆಳಗಿನ ವಿಧವಾಗಿ ಆಟವಾಡುತ್ತಿದ್ದಾರೆ.







ಕೆಳಗೆ ಕೊಟ್ಟಿರುವ ಅಂಕೆಗಳನ್ನು ಉಪಯೋಗಿಸಿ ನೀವು ಸಂಖ್ಯೆಗಳು ತಯಾರಿಸಿ :

(ಅ) 4, 5 : ______________________________

(ಆ) 7, 6 : ______________________________

(ಇ) 1, 2 : ______________________________

(ಈ) 9, 3 : ______________________________

ಶೈಲಜ : ಈಗ ನಾವು ಮೂರು ಕಾರ್ಡುಗಳಿಂದ ಸಂಖ್ಯೆಗಳನ್ನು ತಯಾರಿಸೋಣ.

ನಾನು 7, 2 ಮತ್ತು 3. ಅಂಕೆಗಳನ್ನು ಉಪಯೋಗಿಸಿ 723, 237 ಮತ್ತು 372 ಗಳನ್ನು ತಯಾರಿಸಿದ್ದೇನೆ.

ರಾಮು : ನಾನು ಅವುಗಳಿಂದಲೇ ಇನ್ನೂ ಮೂರು ಸಂಖ್ಯೆಗಳನ್ನು ತಯಾರಿಸಬಲ್ಲೆ.

ಆ ಸಂಖ್ಯೆಗಳಾವುವು ಬರೆಯಿರಿ? ________, ________, ________




SCERT TELANGANA


ಕೆಳಗೆ ಕೊಟ್ಟಿರುವ ಅಂಕೆಗಳಿಂದ ಸಾಧ್ಯವಾದಷ್ಟು ಸಂಖ್ಯೆಗಳು ತಯಾರಿಸಬಲ್ಲಿರಿ ಪ್ರಯತ್ನಿಸಿ.

(ಅ) 4, 5, 6 : ______________________________

(ಆ) 7, 1, 5 : ______________________________

(ಇ) 9, 2, 8 : ______________________________

## ವಿಶ್ವ ಟೆಸ್ಟು (Test) ಕ್ರಿಕೆಟ್‌ನಲ್ಲಿ ಉತ್ತಮ ಬೌಲರ್‌ಗಳು (Bowlers) :



ವಿಶ್ವ ಟೆಸ್ಟು ಕ್ರಿಕೆಟ್‌ನಲ್ಲಿ ಉತ್ತಮ ಬೌಲರ್‌ಗಳು, ಅವರು ಪಡೆದುಕೊಂಡ ವಿಕೆಟ್‌ಗಳು ಕೆಳಗಿನ ಪಟ್ಟಿಕೆಯಲ್ಲಿ ಕೊಡಲಾಗಿದೆ. ( 2012ಕ್ಕೆ) :

| ಬೌಲರ್ ಹೆಸರು | ಪಡೆದುಕೊಂಡ ವಿಕೆಟ್‌ಗಳು | ರಾಷ್ಟ್ರ |
|---|---|---|
| ಅನಿಲ್ ಕುಂಬ್ಳೆ | 619 | ಭಾರತ |
| ಕಪಿಲ್ ದೇವ್ | 434 | ಭಾರತ |
| ಮುರಳೀಧರನ್ | 800 | ಶ್ರೀಲಂಕ |
| ಷೇನ್‌ವಾರ್ನ್ | 708 | ಆಸ್ಟ್ರೇಲಿಯಾ |
| ರಿಚರ್ಡ್ ಹಾಡ್ಲೀ | 431 | ನ್ಯೂಜಿಲ್ಯಾಂಡ್ |

ಕೆಳಗಿನವುಗಳಿಗೆ ಉತ್ತರಗಳನ್ನು ಬರೆಯಿರಿ :-

ಅ) ಯಾವ ಬೌಲರ್ ಎಲ್ಲರಿಗಿಂತ ಹೆಚ್ಚು ವಿಕೆಟ್‌ಗಳು ಪಡೆದರು? ಅವನು ಯಾವ ರಾಷ್ಟ್ರಕ್ಕೆ ಸೇರಿದವನು?

(ಆ) 600ಗಿಂತ ಹೆಚ್ಚು ವಿಕೆಟ್‌ಗಳು ಪಡೆದಿರುವ ಬೌಲರ್‌ಗಳೆಷ್ಟು?____________

(ಇ) ಕಡಿಮೆ ವಿಕೆಟ್‌ಗಳು ಪಡೆದಿರುವವರಿಂದ ಹೆಚ್ಚು ವಿಕೆಟ್‌ಗಳು ಪಡೆದಿರುವವರ ಹೆಸರುಗಳ ಕ್ರಮದಲ್ಲಿ ಬರೆಯಿರಿ

____________ , ____________ , ____________ , ____________ , ____________ ,

(ಈ) 1000 ವಿಕೆಟ್‌ಗಳು ತೆಗೆದುಕೊಳ್ಳುವುದಕ್ಕೆ ಕೆಳಗಿನವರಿಗೆ ಇನ್ನು ಎಷ್ಟು ವಿಕೆಟ್‌ಗಳೂ ಬೇಕಾಗುತ್ತವೆ.

| | | | | | |
|---|---|---|---|---|---|
| ಮುರಳೀಧರನ್ | 800 | + | ____________ | = | 1000 |
| ಷೇನ್ ವಾರ್ನ್ | 708 | + | ____________ | = | 1000 |
| ಅನಿಲ್ ಕುಂಬ್ಳೆ | 619 | + | ____________ | = | 1000 |

SCERT TELANGANA

## ಪ್ರಯತ್ನಿಸಿ

1. 1000 ದಲ್ಲಿ ಎಷ್ಟು 100ಗಳಿವೆ? ----------

2. 1000 ದಲ್ಲಿ ಎಷ್ಟು 200ಗಳಿವೆ? ----------


3. 1000 ದಲ್ಲಿ ಎಷ್ಟು 500ಗಳಿವೆ? ----------

ನಂತರ ಬರುವ ಸಂಖ್ಯೆಗಳಿಂದ ಖಾಲಿ ಬಾಕ್ಸ್‌ಗಳಲ್ಲಿ ಬರೆಯಿರಿ.

| | | | | | | | | |
|---|---|---|---|---|---|---|---|---|
| 1. | 1000 | 1500 | | | | | 4000 | |
| 2. | 2000 | 3000 | | | | | 8000 | |
| 3. | 2000 | 4000 | | | | | | |


ಸರಿಯಾದ ಸಂಖ್ಯೆಯನ್ನು ಎದುರುಗಡೆ ಇರುವ ಬಾಕ್ಸ್‌ನಲ್ಲಿ ಬರೆಯಿರಿ.






SCERT TELANGANA






SCERT TELANGANA

**ಅಭ್ಯಾಸ :**

1. ಏಕದಿನಅಂತರ್‌ರಾಷ್ಟ್ರೀಯ ಕ್ರಿಕೆಟ್ ಮ್ಯಾಚ್‌ಗಳಲ್ಲಿ, ಒಂದು ಮ್ಯಾಚ್‌ನಲ್ಲಿ ಹೆಚ್ಚು ರನ್ನುಗಳು ಮಾಡಿದ ಕ್ರಿಕೆಟಿಗರ ವಿವರಗಳು ಕೆಳಗೆ ಕೊಡಲಾಗಿದೆ. (2012ಕ್ಕೆ)

| ಬ್ಯಾಟ್ಸ್‌ಮೆನ್ ಹೆಸರು | ಮಾಡಿದ ರನ್ನುಗಳು | ರಾಷ್ಟ್ರ |
|---|---|---|
| ಸಯೀದ್ ಅನ್ವರ್ | 194 | ಪಾಕಿಸ್ತಾನ್ |
| ಸಚಿನ್ ಟೆಂಡುಲ್ಕರ್ | 200 | ಭಾರತ |
| ವೀರೇಂದ್ರ ಸವ್ವಾಗ್ | 219 | ಭಾರತ |
| ಎಮ್.ಎಸ್.ಧೋನಿ | 183 | ಭಾರತ |
| ವಿವಿಯನ್ ರಿಚರ್ಡ್ಸ್ | 189 | ವೆಸ್ಟ್ ಇಂಡೀಸ್ |

(ಅ) ಅಂತರ್ ರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ, ಒಂದು ಮ್ಯಾಚ್‌ನಲ್ಲಿ ಹೆಚ್ಚು ರನ್ನುಗಳು ಮಾಡಿದ ಬ್ಯಾಟ್ಸ್‌ಮನ್ ಯಾರು? ಆತನು ಯಾವ ರಾಷ್ಟ್ರಕ್ಕೆ ಸೇರಿದವನು? ____________

(ಆ) 100ಕ್ಕಿಂತ ಹೆಚ್ಚು 200ಗೆ ಕಡಿಮೆ ರನ್ನುಗಳು ಮಾಡಿದ ಕ್ರಿಕೆಟಿಗರು ಯಾರ್‍ಯಾರು ? ____________

(ಇ) ಡಬಲ್ ಸೆಂಚುರಿ ಮಾಡಿದ ಕ್ರಿಕೆಟರ್ ಯಾರು? (ಸೆಂಚುರಿ = 100 ರನ್ನುಗಳು) ____________

(ಈ) ಹೆಚ್ಚು ರನ್ನುಗಳಿಂದ ಕಡಿಮೆ ರನ್ನುಗಳು ಮಾಡಿದ ಕ್ರಮದಲ್ಲಿ ಕ್ರಿಕೆಟಿಗರ ಹೆಸರುಗಳನ್ನು ಬರೆಯಿರಿ.

____________ , ____________ , ____________ , ____________ , ____________ .

2. ಕೆಳಗೆ; ಕೆಲವು ಪ್ರಾಣಿಗಳ ತೂಕ ಅಂದಾಜಿನಲ್ಲಿ ಕೊಡಲಾಗಿದೆ.







| **ಹೆಸರು** | **ತೂಕ ಕಿ.ಗ್ರಾಂಗಳಲ್ಲಿ** |
|---|---|
| ಕುದುರೆ | 500 |
| ಮೇಕೆ | 30 |
| ಕುರಿ | 45 |
| ಹಂದಿ | 120 |
| ನಾಯಿ | 15 |
| ತೋಳ | 80 |
| ಕರಡಿ | 350 |





(ಅ) ಮೇಲಿನ ಪಟ್ಟಿಕೆಯಲ್ಲಿ ಹೆಚ್ಚು ತೂಕ ಇರುವ ಪ್ರಾಣಿ ಯಾವುದು?

(ಆ) ಯಾವ ಪ್ರಾಣಿಯ ತೂಕ 100 ಕಿ.ಗ್ರಾಂ.ಕ್ಕಿಂತ ಹೆಚ್ಚಾಗಿದೆ ?

(ಇ) ತೂಕದ ಆಧಾರವಾಗಿ ಕಡಿಮೆಯಿಂದ ಹೆಚ್ಚಿನ ತೂಕದ ಕ್ರಮದಲ್ಲಿ ಪ್ರಾಣಿಗಳ ಹೆಸರುಗಳು ಬ ರೆಯಿರಿ.

(ಈ) ಎಷ್ಟು ಮೇಕೆಯ ತೂಕವು, ಒಂದು ಹಂದಿಯ ತೂಕಕ್ಕೆ ಸಮನಾಗುತ್ತದೆ ?

(ಉ) ಎಷ್ಟು ನಾಯಿಗಳ ತೂಕವು, ಒಂದು ಕುರಿಯ ತೂಕಕ್ಕೆ ಸಮನಾಗುತ್ತದೆ ?

3. ನಾನು ಒಂದು ಎರಡಂಕಿಗಳ ಸಂಖ್ಯೆ ಬಿಡಿಸ್ಥಾನದಲ್ಲಿ 6, ಹತ್ತುಗಳ ಸ್ಥಾನದಲ್ಲಿ 1 ಇವೆ. ಆದರೆ ನಾನು ಯಾರು?

4. ನಾನು 30 ಮತ್ತು 40ರ ಮಧ್ಯದಲ್ಲಿ ಇರುತ್ತೇನೆ. ಬಿಡಿ, ಹತ್ತುಗಳ ಸ್ಥಾನದಲ್ಲಿ ಒಂದೇ ಅಂಕಿ ಇರುತ್ತದೆ. ಆದರೆ ನಾನು ಯಾರು?

5. ಬಿಡಿಗಳ ಸ್ಥಾನದಲ್ಲಿರುವ ಅಂಕಿಗಿಂತ ಹತ್ತುಗಳ ಸ್ಥಾನದಲ್ಲಿರುವ ಅಂಕಿ ಎರಡರಷ್ಟರ ಎಲ್ಲ ಸಂಖ್ಯೆಗಳನ್ನು ಬರೆಯಿರಿ.

SCERT TELANGANA

6. ಬಿಡಿಸ್ಥಾನ, ಹತ್ತರ ಸ್ಥಾನಗಳಲ್ಲಿ ಒಂದೇ ರೀತಿಯ ಅಂಕಿಗಳಿರುವ ಎರಡಂಕಿಗಳ ಸಂಖ್ಯೆಗಳೆಲ್ಲವನ್ನು ಬರೆಯಿರಿ.

7. ನಾನೊಬ್ಬ ಮೂರಂಕಿಗಳ ಸಂಖ್ಯೆ ನನ್ನದು ನೂರರ ಸ್ಥಾನದಲ್ಲಿ 6, ಹತ್ತುಗಳ ಸ್ಥಾನದಲ್ಲಿ 0 ಮತ್ತುಬಿಡಿ ಸ್ಥಾನದಲ್ಲಿ 9 ಇವೆ. ಆದರೆ ನಾನು ಯಾರು?

8. ನೂರರ ಸ್ಥಾನದಲ್ಲಿರುವ ಅಂಕಿ ಬಿಡಿ ಸ್ಥಾನದಲ್ಲಿರುವ ಅಂಕಿಗಿಂತ 3 ರ ರಷ್ಟು ಇದ್ದು, ಹತ್ತುಗಳ ಸ್ಥಾನದಲ್ಲಿ 1 ಇರುವ ಎಲ್ಲ ಮೂರಂಕಿಗಳ ಸಂಖ್ಯೆಗಳನ್ನು ಬರೆಯಿರಿ.

9. 500 ಮತ್ತು 600 ನಡುವೆ ಇದ್ದು ಹತ್ತುಗಳ ಸ್ಥಾನದಲ್ಲಿರುವ ಅಂಕಿಯೇ ಬಿಡಿಯ ಸ್ಥಾನದಲ್ಲಿರುವ ಎಲ್ಲ ಸಂಖ್ಯೆಗಳನ್ನು ಬರೆಯಿರಿ.

10. ಗೌರಿಯ ಹತ್ತಿರ ಒಂದು ಸಾವಿರ ರೂಪಾಯಿ ನೋಟು, ಎರಡು ಹತ್ತು ರೂಪಾಯಿ ನೋಟುಗಳಿವೆ. ಆದರೆ ಗೌರಿ ಹತ್ತಿರ ಇರುವ ರೂಪಾಯಿಗಳೆಷ್ಟು?

11. ಕೆಳಗಿನ ಸಂಖ್ಯೆಗಳನ್ನು ವಿಸ್ತರಣಾ ರೂಪದಲ್ಲಿ ಬರೆಯಿರಿ.

(ಅ) 347 = ______ + ______ + ______
______ + ______ + ______
______ + ______ + ______

(ಆ) 804 = ______ + ______ + ______
______ + ______ + ______
______ + ______ + ______

(ಇ) 532 = ______ + ______ + ______
______ + ______ + ______
______ + ______ + ______

12. ಕೆಳಗೆ ಖಾಲಿ ಜಾಗಗಳನ್ನು ಭರ್ತಿಮಾಡಿ.

(ಅ) 456 = ನಾಲ್ಕುನೂರ ಐವತ್ತಾರು

(ಆ) 631 = ____________

(ಇ) ____________ = ಎಂಟುನೂರ ಎಪ್ಪತ್ತಾರು.

(ಈ) ____________ = ಒಂಬತುತಿನೂರ ಅರವತ್ತೆಂಟು.

13 ಕೆಳಗೆ ಕೊಟ್ಟಿರುವ ಅಂಕಿಗಳನ್ನು ಉಪಯೋಗಿಸಿ, ಅತಿದೊಡ್ಡ ಸಂಖ್ಯೆ ಹಾಗೂ ಅತಿಚಿಕ್ಕ ಸಂಖ್ಯೆಗಳನ್ನು ಬರೆಯಿರಿ.


(ಅ) 7, 6, 3 ____________ , ____________

(ಆ) 3, 4, 2, 9 ____________ , ____________ .


SCERT TELANGANA

# 5 ಎಷ್ಟು ಹೆಚ್ಚು - ಎಷ್ಟು ಕಡಿಮೆ

ಟೀಚರ್, ಮಣಿಗಳ ಸರವನ್ನು ತರಗತಿಯ ಕೊಠಡಿಯಲ್ಲಿ ಪ್ರದರ್ಶಿಸುತ್ತಾ ಕಪ್ಪು ಹಲಗೆಯ ಮೇಲೆ ಈ ಸಮಸ್ಯೆಯನ್ನು ಬರೆದರು. ಮಣಿಗಳ ಸರವನ್ನು ಉಪಯೋಗಿಸಿ ಈ ಸಮಸ್ಯೆಯನ್ನು ಸಾಧಿಸಿ ಎಂದು ಹೇಳಿದರು.





ಮಣಿಗಳ ಸರದಿಂದ ವಿದ್ಯಾರ್ಥಿಗಳು, ಶಿಕ್ಷಕ ಬರೆದ ಲೆಕ್ಕಕ್ಕೆ ವಿವಿಧ ರೀತಿಯಲ್ಲಿ ಉತ್ತರ ಕಂಡುಹಿಡಿದರು.
ಸುಧ ಈ ವಿಧವಾಗಿ ಮಾಡಿದಳು




12 + 28 = 12 + 8 + 10 + 10 = 40 ಎಂದು ಬರೆದಳು.


**ಕರುಣ ಈ ವಿಧವಾಗಿ ಮಾಡಿದಳು.**




12 + 28 = 12 + 10 + 10 + 8 = 40 ಎಂದು ಬರೆದಳು.

SCERT TELANGANA


ರಾಜೇಂದ್ರ ಈ ರೀತಿಯಾಗಿ ಮಾಡಿದನು.





12 + 28 = 12 + 20 + 8 = 40 ಎಂದು ಬರೆದನು

ಮಣಿಗಳ ಸರವನ್ನು ಉಪಯೋಗಿಸಿ, ಕೆಳಗಿನ ಸಮಸ್ಯೆಗಳನ್ನು ನೀವು ಇಷ್ಟಪಡುವ ಪದ್ಧತಿಯಲ್ಲಿ ಕೂಡಿ ಮೊತ್ತವನ್ನು ಕಂಡುಹಿಡಿಯಿರಿ.


1. 34+ 16 =





2. 25+23 =




3. 41+23 =




4. 53+37 =





SCERT TELANGANA

ಶಿಕ್ಷಕ ಕಪ್ಪು ಹಲಗೆಯ ಮೇಲೆ ವ್ಯವಕಲನದ ಸಮಸ್ಯೆಯನ್ನು ಬರೆದರು.





ಈ ವ್ಯವಕಲನವು ಸಹ ವಿದ್ಯಾರ್ಥಿಗಳು ಮಣಿಗಳ ಸರದ ಮೇಲೆ ವಿವಿಧ ರೀತಿಯಲ್ಲಿ ಮಾಡಿದರು.

!ಸುಧಾ ಈರೀತಿ ಮಾಡಿದಳು.




37 - 19 = 37 - 10 - 7 - 2 = 18 ಎಂದು ಬರೆದಳು


ಕರುಣ ಈ ರೀತಿಯಾಗಿ ಮಾಡಿದಳು





37 - 19 = 37 - 20 + 1 = 18 ಎಂದು ಬರೆದಳು.

ನೀವು ಮಣಿಗಳ ಸರ ಉಪಯೋಗಿಸಿ ವ್ಯವಕಲನವನ್ನು ಇಷ್ಟಪಡುವ ಪದ್ಧತಿಯಲ್ಲಿ ಮಾಡಿ.


(ಅ) 42-12 =




(ಆ) 35-27 =




(ಇ) 62-18 =





SCERT TELANGANA

ಶಿಕ್ಷಕರು, ಮಕ್ಕಳಿಗೆ ಈ ಕೆಳಗಿನ ಸಮಸ್ಯೆಗಳನ್ನು ನಿಮ್ಮ ನೋಟ್ ಪುಸ್ತಕದಲ್ಲಿ ಬರೆದುಕೊಂಡು ಬಿಡಿಸಿ ಎಂದು ಹೇಳಿದ್ದಾರೆ.


(ಅ) 49 + 17 (ಆ) 83 - 24

ಸುಧ ಈರೀತಿ ಮಾಡಿದಳು-





49 + 17 = 49 + 10 + 1 + 6 = 66

ಕಮಲ ಈರೀತಿ ಮಾಡಿದಳು





49 + 17 = 49 + 20 - 3 = 66

ಸುಧ ವ್ಯವಕಲನವನ್ನು ಈರೀತಿಯಾಗಿ ಮಾಡಿದಳು.




83 - 24 = 83 - 20 - 3 - 1 = 59

ಕಮಲ ವ್ಯವಕಲನವನ್ನು ಈರೀತಿಯಾಗಿ ಮಾಡಿದಳು.




83 - 20 - 4 = 59

**ಇವುಗಳನ್ನು ಮಾಡಿರಿ :**

1. ಕೆಳಗಿನ ಸಮಸ್ಯೆಗಳನ್ನು ಸಂಖ್ಯಾರೇಖೆಯ ಸಹಾಯದಿಂದ ಸಾಧಿಸಿ.

(ಅ) 46 + 37 = ?

(ಆ) 63 - 35 = ?

(ಇ) 77 - 29 = ?

(ಈ) 42 + 38 = ?

SCERT TELANGANA

## ಲಂಡನ್ ಒಲಂಪಿಕ್ಸ್‌ನಲ್ಲಿ ಪದಕ ಗೆದ್ದವರು - 2012



ಲಂಡನ್‌ನಲ್ಲಿ ನಡೆದ 2012 ಒಲಂಪಿಕ್ ಪ್ರಶಸ್ತಿ ಪದಕ ಪಟ್ಟಿಕೆ ಅಪೂರ್ಣವಾಗಿದೆ. ಆ ಪಟ್ಟಿಕೆಯನ್ನು ಅವಗಾಹನೆ ಮಾಡಿಕೊಂಡು ಖಾಲಿ ಜಾಗದಲ್ಲಿ ಸರಿಯಾದ ಸಂಖ್ಯೆಯಿಂದ ತುಂಬಿರಿ.

| ರಾಷ್ಟ್ರ | ಬಂಗಾರ | ಬೆಳ್ಳಿಯ | ಕಂಚು | ಮೊತ್ತ |
|---|---|---|---|---|
| ಅಮೇರಿಕ | 46 | 29 | 29 | |
| ಚೈನಾ | 38 | 27 | 23 | |
| ಬ್ರಿಟನ್ | 29 | 17 | | 65 |
| ರಷ್ಯಾ | 24 | | 32 | 82 |
| ಕೊರಿಯಾ | 13 | 8 | | 28 |
| ಪ್ರಾನ್ಸ್ | | 11 | 12 | 34 |
| ಆಸ್ಟ್ರೇಲಿಯಾ | 7 | 16 | 12 | |
| ಇಟಲೀ | 8 | | 11 | 28 |
| ಹಂಗೇರಿ | | 4 | 5 | 17 |
| ಜಪಾನ್ | . | | | |

(ಅ) ಇಟಲೀಗಿಂತ ಅಮೆರಿಕಾ ಎಷ್ಟು ಪ್ರಶಸ್ತಿಪದಕಗಳು ಹೆಚ್ಚು ಪಡೆದಿದೆ?

(ಆ) ರಷ್ಯಾಗಿಂತ ಕೊರಿಯಾ ಎಷ್ಟು ಪ್ರಶಸ್ತಿಪದಕಗಳನ್ನು ಕಡಿಮೆ ಪಡೆದಿದೆ?

(ಇ) ಅಮೆರಿಕಾ ಪಡೆದ ಪ್ರಶಸ್ತಿ ಪದಕಗಳ ಸಮ ಆಗುವುದಕ್ಕೆ ಚೈನಾಗೆ ಇನ್ನೂ ಎಷ್ಟು ಪ್ರಶಸ್ತಿ ಪದಕಗಳು ಅಗತ್ಯ ?

(ಈ) ಮೇಲಿನ ಪಟ್ಟಿಕೆಯಿಂದ ಇನ್ನೂ ಕೆಲವು ಸಂಕಲನ, ವ್ಯವಕಲನದ ಸಮಸ್ಯೆಗಳನ್ನು ತಯಾರು ಮಾಡಿ.

### ಪ್ರಯತ್ನಿಸಿ :-

1. ಈ ಸಮಸ್ಯೆಗಳನ್ನು ಸಾಧಿಸಿ, ಖಾಲಿ ಸ್ಥಳವನ್ನು ತುಂಬಿರಿ. ಒಂದು ಉದಾಹರಣೆ ಕೆಳಗೆ ಕೊಟ್ಟಿದೆ.

(ಅ) 27 + 52 = 79

79 - 52 = ____

(ಇ) 73 - 41 = 32

32 + ____ = 73

(ಆ) 36 + 56 = 92

92 - ____ = 56

(ಈ) 91 - 37 = 54

____ + 37 = 91

SCERT TELANGANA

**ಅಂದಾಜು ಹಾಕೋಣ!**

ಶ್ರೀಧರ್, ಗಾಯತ್ರಿ ಜಾತ್ರೆಗೆಹೋಗಿದ್ದಾರೆ. ಅಲ್ಲಿ ಅವರು ಏನು ತೆಗೆದುಕೊಂಡಿದ್ದಾರೆಯೋ ನೋಡೋಣ.ಅಲ್ಲಿ ಶ್ರೀಧರ್ ₹ 68 ಆಹಾರಕ್ಕೆ, ₹ 99 ಆಟದ ಸಾಮಾನುಗಳು ತೆಗೆದುಕೊಳ್ಳುವುದಕ್ಕೆ ಖರ್ಚು ಮಾಡಿದ್ದಾನೆ. ಆದರೆ ಶ್ರೀಧರ್ ಎಷ್ಟು ರೂಪಾಯಿಗಳು ಖರ್ಚುಮಾಡಿದ್ದಾನೆ.

ಸಂಖ್ಯೆಗಳನ್ನು ಅವುಗಳ ಸಮೀಪಕ್ಕೆ ಹತ್ತುಗಳಿಗೆ ಸವರಿಸಿ ಕೂಡಿಸುವುದು ಸುಲಭ. 68 ಎನ್ನುವುದು 70 ಕ್ಕೆ ಸಮೀಪದಲ್ಲಿದೆ ಆದರೆ ನಾನು ₹ 70 ಆಹಾರಕ್ಕೆ ಖರ್ಚುಮಾಡಿದ್ದೇನೆ. ಅದೇ ವಿಧವಾಗಿ ₹ 100 ಆಟದ ಸಾಮಾನುಗಳಿಗೆ ಖರ್ಚುಮಾಡಿದ್ದೇನೆ. ಆದ್ದರಿಂದ 70 + 100 = ₹ 170 ನಾನು ಜಾತ್ರೆಯಲ್ಲಿ ಖರ್ಚುಮಾಡಿದ್ದೇನೆ.





ಜಾತೆಗೆ ಹೋಗುವ ಮುಂಚೆ ನನ್ನ ಹತ್ತಿರ ₹100 ಇದೆ. ಅಲ್ಲಿ ನಾನು ₹40 ಖರ್ಚು ಮಾಡಿದ್ದೇನೆ. ಆದ್ದರಿಂದ ಆಕೆಯ ಹತ್ತಿರ ₹60 ಉಳಿದಿದೆ.

ಗಾಯತ್ರಿ ಹತ್ತಿರ ಇರುವ ₹ 98ಗಳಲ್ಲಿ, ₹ 42 ಜಾತ್ರೆಯಲ್ಲಿ ಖರ್ಚುಮಾಡಿದ್ದಾಳೆ. ಆಕೆಯ ಹತ್ತಿರ ಎಷ್ಟು ರೂಪಾಯಿಳು ಉಳಿದಿವೆ?

**ಇವುಗಳನ್ನು ಮಾಡಿರಿ :**

ಈ ಸಮಸ್ಯೆಗಳಿಗೆ ಉತ್ತರ ಕೊಡುವುದಕ್ಕೆ ಅಂದಾಜು ಮಾಡಿರಿ.

(ಅ) ಸಂಧ್ಯ ₹ 91ಗಳಿಗೆ ಹಣ್ಣುಗಳು ಮತ್ತು ₹ 82 ಗಳಿಗೆ ತರಕಾರಿಗಳು ತೆಗೆದುಕೊಳ್ಳುವುದಕ್ಕೆ ಖರ್ಚುಮಾಡಿದ್ದಾಳೆ. ಆದರೆ ಆಕೆ ಖರ್ಚುಮಾಡಿದ ಒಟ್ಟು ಮೊತ್ತವೆಷ್ಟು?

(ಆ) ಗೋಪಾಲ್ ಸಂತೆಗೆ ಹೋಗುವಾಗ ₹ 78 ತೆಗೆದುಕೊಂಡು ಹೋಗಿದ್ದಾನೆ. ಅಲ್ಲಿ ₹ 29ಗಳನ್ನು ಖರ್ಚುಮಾಡಿದರೆ, ಆತನಿಗೆ ಉಳಿಯುವ ಹಣವೆಷ್ಟು?

(ಇ) ಸೋಮಯ್ಯ ಸೋಮವಾರದ ದಿನ ₹ 89, ಮಂಗಳವಾರದ ದಿನ ₹ 57 ಸಂಪಾದಿಸಿದರೆ, ಆತನು ಒಟ್ಟು ಎಷ್ಟು ಹಣ ಸಂಪಾದಿಸಿದ್ದಾನೆ?

(ಈ) ಒಂದು ತೋಟದಲ್ಲಿ 87 ಗಿಡಗಳಿವೆ. ತುಫಾನುನಿಂದ 28 ಗಿಡಗಳು ಮುರಿದು ಬಿದ್ದರೆ, ಇನ್ನೂ ಎಷ್ಟು ಗಿಡಗಳಿರುತ್ತವೆ?

SCERT TELANGANA


(ಉ) 58 ಮತ್ತು 33 ಗಳ ಒಟ್ಟು ಮೊತ್ತ ಎಷ್ಟಾಗುತ್ತದೆ?


(ಊ) 91 ಮತ್ತು 33 ಗಳ ವ್ಯತ್ಯಾಸ ಎಷ್ಟಾಗುತ್ತದೆ?

(ಎ) ಕಮಲ್ ದೀಪಾವಳಿಗಾಗಿ ಕೊಂಡ 84 ಮೇಣದ ಬತ್ತಿಗಳಲ್ಲಿ 28 ಮೇಣ ಬತ್ತಿಗಳನ್ನು ದೀಪಾವಳಿ ಮುಂಚೆ ಬಳಸಿದನು. ದೀಪಾವಳಿಕಗೋಸ್ಕರ ಆತನ ಹತ್ತಿರ ಎಷ್ಟು ಮೇಣದ ಬತ್ತಿಗಳು ಉಳಿದಿರುತ್ತವೆ.


**ದೊಡ್ಡ ಸಂಖ್ಯೆಗಳಿಂದ ಸಂಕಲನ, ವ್ಯವಕಲನ ಮಾಡೋಣ!**


ಈ ದಿನ ದೊಡ್ಡ ಸಂಖ್ಯೆಗಳ ಕೂಡಿವಿಕೆಯ ಲೆಕ್ಕಗಳು ಹೇಳುವುದಕ್ಕೆ ಶಿಕ್ಷಕ ಕಪ್ಪು ಹಲಗೆಯ ಮೇಲೆ ಸಮಸ್ಯೆಯನ್ನು ಬರೆದರು.








ವಿದ್ಯಾರ್ಥಿಗಳು ತಮ್ಮ ನೋಟ್ ಬುಕ್‌ಗಳಲ್ಲಿ ಕೆಳಗಿನ ವಿಧವಾಗಿ ಮಾಡಿದರು.




SCERT TELANGANA










**ಶಿಕ್ಷಕ :** ನೀವಿಬ್ಬರು ವಿವಿಧ ಪದ್ಧತಿಗಳಲ್ಲಿ ಕೂಡಿದರೂ ಇಬ್ಬರಿಗೆ ಸರಿಯಾದ ಉತ್ತರವೇ ಬಂದಿದೆ.


ನಿಮ್ಮ ಸ್ನೇಹಿತರಿಗೆ ಮೇಲಿರುವ ಎರಡು ಪದ್ಧತಿಗಳ ಬಗ್ಗೆ ಚರ್ಚಿಸಿರಿ.

ಮಾರನೆಯ ದಿನ ಶಿಕ್ಷಕ ವ್ಯವಕಲನದ ಲೆಕ್ಕಗಳನ್ನು ಮಾಡಬೇಕೆಂದುಕೊಂಡರು. ಕಪ್ಪು ಹಲಗೆಯ ಮೇಲೆ ಕೆಳಗಿನ ವಿಧವಾಗಿ ಬರೆದರು.








SCERT TELANGANA

ಶಿಕ್ಷಕ ಸಂಖ್ಯೆಗಳನ್ನು ಬದಲಾವಣೆ ಮಾಡಿ ಮತ್ತು ಸಮಸ್ಯೆಯನ್ನು ಬಿಡಿಸು ಎಂದು ವಿದ್ಯಾರ್ಥಿಗಳಿಗೆ ಹೇಳಿದರು.






276 ರಿಂದ 149 ಕಳೆಯಬೇಕು. ಆದ್ದರಿಂದ 276ರ ಕೆಳಗೆ 149 ನ್ನು ನೂರರ ಸ್ಥಾನದ ಕೆಳಗೆ ನೂರುಗಳು, ಹತ್ತರ ಸ್ಥಾನದ ಕೆಳಗೆ ಹತ್ತುಗಳು, ಬಿಡಿಯ ಸ್ಥಾನದ ಕೆಳಗೆ ಬಿಡಿಗಳಿರುವಂತೆ ಬರೆದನು. ಮೊದಲು ಬಿಡಿಯ ಸ್ಥಾನದಲ್ಲಿರುವ ಅಂಕಿಗಳನ್ನು ಕಳೆಯಲು ಪ್ರಾರಂಭಿಸಿದ್ದೇನೆ.

6 ರಿಂದ 9 ಕಳೆಯಲು ಸಾಧ್ಯವಿಲ್ಲ ಆದರೆ ಹತ್ತರ ಸ್ಥಾನದಿಂದ ಒಂದು ಹತ್ತನ್ನು ಬಿಡಿಗಳಾಗಿ ಬದಲಾಯಿಸಿ 6 ಕೂಡಿಸಿದರೆ 16 ಬಿಡಿಗಳಾದವು. ಆದ್ದರಿಂದ 9ನ್ನು ಕಳೆದಾಗ 7 ಬಂದಿದೆ.

ನಂತರ 6 ಹತ್ತರಿಂದ 4 ಹತ್ತುಗಳನ್ನು ಕಳೆದಾಗ 2 ಹತ್ತುಗಳು ಬರುತ್ತದೆ. 2 ನೂರರಿಂದ 1 ನೂರು ಕಳೆದಾಗ 1 ನೂರು ಬರುತ್ತದೆ.

**ಇವುಗಳನ್ನು ಮಾಡಿರಿ**

1. ಕವಿತ ಪರ್ಸ್‌ನಲ್ಲಿ ₹ 73 ಇದೆ. ಆಕೆಯ ಸ್ನೇಹಿತಳು ಸಾಲ ತೆಗೆದುಕೊಂಡ ₹ 28 ತಿರುಗಿಕೊಟ್ಟರೆ. ಈಗ ಕವಿತ ಹತ್ತಿರ ಎಷ್ಟು ರೂಪಾಯಿಗಳವೆ?
2. ಸೋಮಯ್ಯ ಒಂದು ದಿನಕ್ಕೆ ₹92 ಸಂಪಾದಿಸಿದ್ದಾನೆ. ಅದರಲ್ಲಿ ₹67 ಮನೆಯ ಖರ್ಚಿಗಾಗಿ ಬಳಸುತ್ತಾನೆ ಹಾಗಾದರೆ ಆತನ ಹತ್ತಿರ ಉಳಿದ ಹಣವೆಷ್ಟು?
3. ಒಂದು ವರ್ಷದಲ್ಲಿ 234 ಚಲನಚಿತ್ರಗಳು ಬಂದಿವೆ. ಅದೇ ವರ್ಷದಲ್ಲಿ ತೆಲುಗು ಚಲನ ಚಿತ್ರಗಳು, ತಮಿಳ್ ಚಲನಚಿತ್ರಗಳಿಗಿಂತ 67 ಹೆಚ್ಚು ಬಂದಿದೆ, ಆದರೆ ತೆಲುಗು ಚಲನಚಿತ್ರಗಳು ಎಷ್ಟು?
4. ಒಂದು ಕ್ರಿಕೆಟ್ ಪಂದ್ಯದಲ್ಲಿ ಸಚಿನ್ 184 ರನ್ನುಗಳು ಮಾಡಿದನು. ಯುವರಾಜ್ ಸಿಂಗ್ ಆತನಿಗಿಂತ 48 ರನ್ನುಗಳು ಕಡಿಮೆ ಮಾಡಿದರೆ, ಯುವರಾಜ್ ಮಾಡಿದ ರನ್ನುಗಳೆಷ್ಟು?
5. ಒಂದು ಗೋಡೌನ್ (ಗೋದಾಮು)ದಲ್ಲಿ 545 ಕಿ.ಗ್ರಾಂ.ಗಳ ಅಕ್ಕಿಯ ಸ್ಟಾಕ್ ಇದೆ. 228 ಕಿ.ಗ್ರಾಂ.ಗಳ ಅಕ್ಕಿ ವಿವಿಧ ಅಂಗಡಿಗಳಿಗೆ ಕಳುಹಿಸಿದಾಗ, ಗೋಡಾನ್‌ದಲ್ಲಿರುವ ಅಕ್ಕಿಯ ಸ್ಟಾಕೆಷ್ಟು?
6. ವಸುಧ, ಅವಳ ಅಮ್ಮನ ಜೊತೆಗೆ ಬಟ್ಟೆಗಳುಕೊಂಡುಕೊಳ್ಳುವುದಕ್ಕೆ ಹೋದಳು. ₹ 512ಗಳಿಗೆ ಒಂದು ಸೀರೆ, ₹ 309ಗಳಿಗೆ ಡ್ರೆಸ್ ಮೆಟಿರಿಯಲ್ ತೆಗೆದುಕೊಂಡರೆ, ಅವರು ಖರ್ಚು ಮಾಡಿದೆಷ್ಟು?
7. ಶ್ರೇಯ ಪರ್ಸ್‌ನಲ್ಲಿ ₹ 149 ಇದೆ. ಆಕೆ ಅಂಗಡಿಯವನಿಗೆ ₹ 268 ಕೊಡಬೇಕಾಗಿದೆ. ಆದರೆ ಶ್ರೇಯಗೆ ಇನ್ನೂ ಎಷ್ಟು ರೂಪಾಯಿಗಳು ಅಗತ್ಯವಾಗಿದೆ?

SCERT TELANGANA

**ಅಂದಾಜು ಮಾಡೋಣ !**

ಲಕ್ಷ್ಮಿ ಸಂತೆಗೆ ಹೋಗುವ ಮುಂಚೆ ₹ 348 ರೂಪಾಯಿಗಳಿವೆ. ಅವಳು ₹ 106 ಖರ್ಚುಮಾಡಿದಳು. ಅವಳ ಹತ್ತಿರ ಉಳಿದಿರುವ ರೂಪಾಯಿಗಳೆಷ್ಟು?

ಸಂಖ್ಯೆಗಳನ್ನು ಹತ್ತಿರದ 10 ಗಳಿಗೆ ಅಂದಾಜಿಸಿ ಕಳೆಯುವಹಾಗೆ, ಹತ್ತಿರದ 100ಗಳಿಗೆ ಸಹ ಅಂದಾಜಿಸಿ ಕಳೆಯುವುದು ಸುಲಭ. ಲಕ್ಷ್ಮಿ ಸುಮಾರು ₹ 400 ಸಂತೆಗೆ ತೆಗೆದುಕೊಂಡು ಬಂದರೆ, ಅವಳು ಖರ್ಚುಮಾಡಿದ್ದು ಸುಮಾರು ₹ 100 ಆದರೆ, ಲಕ್ಷ್ಮಿ ಹತ್ತಿರ ಸುಮಾರು ₹ 300 ಉಳಿದಿವೆ.

ಈಗ, ಕೆಳಗಿನ ಸಮಸ್ಯೆಗಳಿಗೆ ಸರಿಯಾದ ಉತ್ತರವನ್ನು ಅಂದಾಜು ಮಾಡಿ, ಸಮೀಪ ಉತ್ತರ ಬರೆಯಿರಿ.

| | | | | |
|---|---|---|---|---|
| ಅ) | ರಾಜೇಂದ್ರನ ಹತ್ತಿರ ₹ 618 ಆತನ' ತಮ್ಮನ ಹತ್ತಿರ ₹ 331 ಇವೆ. ಸುಮಾರಾಗಿ ಇಬ್ಬರಹತ್ತಿರವಿರುವ ರೂಪಾಯಿಗಳೆಷ್ಟು? | 800 | 900 | 1000 |
| (ಆ) | ರಂಗ ಒಂದು ದಿನಕ್ಕೆ ₹ 268 ಸಂಪಾದಿಸಿದ್ದಾನೆ. ಆತನು ಆಹಾರಕ್ಕೆ ₹ 99 ಖರ್ಚುಮಾಡಿದ, ಸುಮಾರಾಗಿ ಆತನು ಉಳಿತಾಯ ಮಾಡಿದ ಹಣ ಎಷ್ಟು? | 100 | 200 | 300 |
| (ಇ) | 418 ಗಿಂತ 904ಸುಮಾರು ಎಷ್ಟು ಹೆಚ್ಚು? | 400 | 500 | 600 |
| (ಈ) | ಒಂದು ಗೋಡೌನ್‌ನಲ್ಲಿ 467 ಕಿ.ಗ್ರಾಂ.ಗಳ ಗೋದಿ, 376 ಕಿ.ಗ್ರಾಂಗಳ ಅಕ್ಕಿ ಇವೆ. ಆದರೆ ಸುಮಾರು ಆ ಗೋಡೌನ್ನಲ್ಲಿರುವ ಧಾನ್ಯವೆಷ್ಟು? | 800 | 900 | 1000 |
| (ಉ) | 218, 589 ಗಳ ಒಟ್ಟು ಸುಮಾರು ಎಷ್ಟು? | 800 | 900 | 1000 |
| (ಊ) | 298 ಗಿಂತ 386ಸುಮಾರು ಎಷ್ಟು ಹೆಚ್ಚು? | 50 | 100 | 150 |

**ಪ್ರಯತ್ನಿಸಿ**

9 + 8 = 8 + 9 ಆಗುತ್ತದೆಯಾ? 14 + 7 = 7 + 14 ಆಗುತ್ತದೆಯಾ? 29 + 42 = 42 + 29 ಆಗುತ್ತದೆಯಾ? ಯಾವುದಾದರು ಎರಡು ಸಂಖ್ಯೆಗಳನ್ನು ತೆಗೆದುಕೊಂಡು ಕೂಡಿಸಿ ನೋಡಿರಿ. ಮೇಲಿನ ನಿಯಮದ ಪ್ರಕಾರ ಸತ್ಯವಾಗಿದೆಯೇ?

ಖಾಲಿ ಬಿಟ್ಟ ಜಾಗಗಳನ್ನು ಭರ್ತಿಮಾಡಿರಿ.

(ಅ) 12 + 9 = ____ + 12

(ಆ) 17 + 14 = 14 + ____

(ಇ) 40 + 50 = ____ + 40

(ಈ) 39 + 67 = ____ + 39

(ಉ) 97 + 101 = 101 + ____

(ಊ) 125 + ____ = 143 + 125

(ಋ) ____ + 315 = 315 + 270

SCERT TELANGANA

## ಅಭ್ಯಾಸ :


1. ಒಂದು ಬಸ್ಸಿನಲ್ಲಿ 36 ಜನ ಪ್ರಯಾಣ ಮಾಡುತ್ತಿದ್ದರೆ ಮೊದಲು ಬಸ್ಸು ನಿಲ್ಲುವ ಸ್ಥಳದಲ್ಲಿ 8 ಜನ ಕೆಳಗೆ ಇಳಿದು, 9 ಜನ ಬಸ್ಸಿನಲ್ಲಿ ಏರಿದರು. ಆದರೆ ಬಸ್ಸಿನಲ್ಲಿ ಎಷ್ಟು ಜನ ಇದ್ದಾರೆ? ಅನಂತರ ಬಸ್ಸು ನಿಲ್ಲು ವ ಸ್ಥಳದಲ್ಲಿ 14 ಜನ ಇಳಿದು 6 ಜನ ಬಸ್ಸಿನಲ್ಲಿ ಏರಿದರು. ಈಗ ಬಸ್ಸಿನಲ್ಲಿ ಎಷ್ಟು ಜನ ಇದ್ದಾರೆ?
2. ಸುಧ ಹತ್ತಿರ ₹ 75 ಗಳಿವೆ. ರಾಧಾಳ ಹತ್ತಿರ , ಸುಧಾಳ ಹತ್ತಿರ ಇರುವುದಕ್ಕಿಂತ ₹ 19ಗಳು ಕಡಿಮೆ ಇವೆ. ರಾಧ ಹತ್ತಿರ ಎಷ್ಟು ರೂಪಾಯಿಗಳಿವೆ. ಇಬ್ಬರಲ್ಲಿರುವ ಒಟ್ಟು ರೂಪಾಯಿಗಳೆಷ್ಟು?
3. ಕುಮಾರ್ ಹತ್ತಿರ ₹ 37 ಮತ್ತು ಆತನ ತಂಗಿ ಲತ ಹತ್ತಿರ ₹56ಗಳಿವೆ. ಇಬ್ಬರ' ಹತ್ತಿರ ಇರುವ ಒಟ್ಟು ಹಣವೆಷ್ಟು? ಇಬ್ಬರು ಸೇರಿ ₹ 90 ಖರ್ಚುಮಾಡಿದರೆ, ಅವರ ಹತ್ತಿರ ಉಳಿದ ಹಣ ಎಷ್ಟು?
4. ಒಂದು ಚುನಾವಣೆಯಲ್ಲಿ ಗೆದ್ದವ ವ್ಯಕ್ತಿಗೆ 273 ಓಟುಗಳು ಬಂದಿದೆ. ಸೋತ ವ್ಯಕ್ತಿಗೆ ಗೆದ್ದ ವ್ಯಕ್ತಿಗಿಂತ 45 ಓಟುಗಳು ಕಡಿಮೆ ಬಂದಿವೆ. ಸೋತ ವ್ಯಕ್ತಿಗೆ ಬಂದಿರುವ ಓಟುಗಳೆಷ್ಟು?
5. 

   ತಂದೆ, ತನ್ನ ಮಗನಿಗೋಸ್ಕರ ಒಂದು ಪ್ಯಾಂಟು, ಒಂದು ಅಂಗಿಯನ್ನು ₹ 349ಗಳಿಗೆ, ಮಗಳಿಗೋಸ್ಕರ ₹ 399 ಗಳಿಂದ ಒಂದು ಗೌನು ಕೊಂಡನು. ಆತನು ಅಂಗಡಿಯವನಿಗೆ ₹ 1000ಗಳ ನೋಟು ಕೊಟ್ಟಿದ್ದಾನೆ. ಅಂಗಡಿಯವನು ಮರಳಿ ಅವನಿಗೆ ಎಷ್ಟು ಹಣ ಕೊಡುತ್ತಾನೆ?

   
6. ಒಬ್ಬ ಹಣ್ಣಿನ ವ್ಯಾಪಾರಿ ಮಂಗಳವಾರದ ದಿನ 840 ಬಾಳೇ ಹಣ್ಣುಗಳನ್ನು ಕೊಂಡನು. ಆ ವ್ಯಾಪಾರಿ 612 ಬಾಳೇ ಹಣ್ಣುಗಳನ್ನು ಅದೇ ವಾರದಲ್ಲಿ ಮಾರಿದನು. 18 ಬಾಳೇಹಣ್ಣುಗಳು ಕೆಟ್ಟಿವೆ. ಇನ್ನೂ ಆ ವ್ಯಾಪಾರಿಯ ಹತ್ತಿರ ಎಷ್ಟು ಬಾಳೆ ಹಣ್ಣುಗಳು ಉಳಿದಿವೆ?
7. ಸೋಮಯ್ಯ ₹175ಗಳು, ಅವನ ಹೆಂಡತಿ ₹ 125ಗಳು ಸೋಮವಾರದ ದಿನ ಸಂಪಾದಿಸಿದರು. ಅವರು ₹ 25 ಗಳಿಗೆ ಅಕ್ಕಿ, ₹ 18 ಗಳಿಗೆ ತರಕಾರಿಗಳು, ಮತ್ತು ₹57 ಗಳಿಗೆ ಇತರ ವಸ್ತುಗಳು ಕೊಂಡರು. ಆ ದಿನ ಅವರು ಉಳಿಸಿದ ಹಣವೆಷ್ಟು?
8. ಒಂದು ಟೆಸ್ಟು ಕ್ರಿಕೆಟ್‌ನಲ್ಲಿ ಭಾರತ ಆಟಗಾರರ ತಂಡ 517 ರನ್ನುಗಳನ್ನು ಮಾಡಿದ್ದಾರೆ. ಲಕ್ಷ್ಮಣ್ 317 ರನ್ನುಗಳು, ದ್ರಾವಿಡ್ 165 ರನ್ನುಗಳು ಮಾಡಿದರು. ಉಳಿದ ಆಟಗಾರರೆಲ್ಲರೂ ಸೇರಿ ಎಷ್ಟು ರನ್ನುಗಳು ಮಾಡಿದರು?
9. ರಾಜಯ್ಯನಿಗೆ 348 ಕುರಿಗಳಿವೆ. ಮಲ್ಲಯ್ಯನಿಗೆ ರಾಜಯ್ಯನ ಹತ್ತಿರ ಇರುವ ಕುರಿಗಳಿಗಿಂತ 49 ಕಡಿಮೆ ಇವೆ. ರಾಜಯ್ಯನ ಹತ್ತಿರ, ಮಲ್ಲಯ್ಯನ ಹತ್ತಿರ ಸೇರಿಸಿ ಒಟ್ಟು ಎಷ್ಟು ಕುರಿಗಳು ಇರುವವೋ ಸೋಮಯ್ಯನ ಹತ್ತಿರ ಅಷ್ಟೇ ಕುರಿಗಳಿವೆ. ಆದರೆ ಸೋಮಯ್ಯನ ಹತ್ತಿರ ಇರುವ ಕುರಿಗಳು ಎಷ್ಟು? ಮೂವರಲ್ಲಿರುವ ಒಟ್ಟು ಕುರಿಗಳು ಎಷ್ಟು?

SCERT TELANGANA

# 6 ಎಷ್ಟು ಪಟ್ಟು?




**1 ಡಜನ್ = 12.**

1. ಅಂಗಡಿಯಲ್ಲಿ ಎಷ್ಟು ಸೇಬಿನ ಹಣ್ಣುಗಳುಇವೆ?

   ಸೇಬುಹಣ್ಣುಗಳು ಎಷ್ಟು ಸಾಲುಗಳಲ್ಲಿವೆ ? ______________

   ಒಂದು ಸಾಲಿನಲ್ಲಿರುವ ಸೇಬುಗಳ ಸಂಖ್ಯೆ ______________

   ಒಟ್ಟು ಸೇಬಿನ ಹಣ್ಣುಗಳ ಸಂಖ್ಯೆ ________________

2. ಸೇಬಿನ ಹಣ್ಣಿನ ಬೆಲೆ, ಮಾವಿನಹಣ್ಣಿನ ಬೆಲೆಗೆ ಎಷ್ಟು ಪಟ್ಟಿದೆ?

3. ರಾಜು ಅಂಗಡಿಗೆ ಬಂದು 2 ಡಜನ್ ಬಾಳೆಹಣ್ಣು ಕೊಂಡನು. ಹಣ್ಣಿನ ವ್ಯಾಪಾರಿಗೆ ಅವನು ಕೊಡಬೇಕಾದ ಹಣವೆಷ್ಟು?


4. ಕರುಣ, ಅಂಗಡಿಗೆ ಬಂದು 3 ಕಿ.ಗ್ರಾಂ. ಮಾವಿನ ಹಣ್ಣು ಮತ್ತು ಒಂದು ಕಿ.ಗ್ರಾಂ. ಸೇಬಿನ ಹಣ್ಣನ್ನು ಕೊಂಡಳು. ಹಾಗಾದರೆ ಆಕೆ ಹಣ್ಣಿನವ್ಯಾಪಾರಿಗೆ ಎಷ್ಟು ಹಣ ಕೊಡಬೇಕಾಗಿರುತ್ತದೆ ?

ಈಗ ನೀವು ಇಂತಹುವೇ ಇನ್ನಷ್ಟು ಪ್ರಶ್ನೆಗಳನ್ನು ಮೇಲಿನ ಚಿತ್ರದಲ್ಲಿ ಕೊಟ್ಟ ಮಾಹಿತಿಗೆ ಅನುಗುಣವಾಗಿ ಮಾಡಬಲ್ಲಿರಾ?

SCERT TELANGANA

**ಲಾಲ್ ಟೇಕ್‌ಡಿ ಗ್ರಾಮದ ಮ್ಯಾಜಿಕ್ ಕೊಳವೆಗಳು :**

ಲಾಲ್ ಟೇಕ್‌ಡಿ ಗ್ರಾಮದಲ್ಲಿ ನಾಲ್ಕು ಮ್ಯಾಜಿಕ್ ಕೊಳವೆಗಳಿದ್ದವು.
ಅವುಗಳ ಮೂಲಕ ಯಾವುದೇ ಹೋದರು ಎರಡು ಪಟ್ಟು ಹೆಚ್ಚುತ್ತಿದ್ದವು.




ಆ ಕೊಳವೆಯ ಮುಖಾಂತರ ಒಂದು ಬೆಕ್ಕು ಹೋದರೆ 2 ಬೆಕ್ಕುಗಳು ಹೊರ ಬರುತ್ತಿದ್ದವು.

4 ಚೆಂಡುಗಳನ್ನು ಅದರ ಮೂಲಕ ಎಸೆದಾಗ 8 ಚೆಂಡುಗಳು ಹೊರಬರುತ್ತಿದ್ದವು.

(ಅ) ಒಂದು ವೇಳೆ 6 ಪಕ್ಷಿಗಳು ಕೊಳವೆಯಲ್ಲಿ ಹೋದರೆ, ಎಷ್ಟು ಪಕ್ಷಿಗಳು ಹೊರ ಬರುತ್ತಿದ್ದವು? ________


ಮತ್ತೊಂದು ಕೊಳವೆಯಲ್ಲಿ ಯಾವುದೇ ಹೋದರು ಮೂರು ಪಟ್ಟು ಹೆಚ್ಚುತ್ತಿದ್ದವು.



ಇದರ ಮೂಲಕ 2 ಕಪ್ಪೆಗಳು ಜಿಗಿದರೆ 6 ಕಪ್ಪೆಗಳು ಹೊರಬರುತ್ತಿದ್ದವು.

(ಅ) ಒಂದು ವೇಳೆ 6 ಹಂದಿಗಳು ಒಳ ನಡೆದರೆ, ಎಷ್ಟು ಹಂದಿಗಳು ಹೊರ ಬರುತ್ತಿದ್ದವು? ____________________

ಮತ್ತೊಂದು ಕೊಳವೆಯಲ್ಲಿ ಯಾವುದೇ ಹೋದರು 6 ಪಟ್ಟು ಹೆಚ್ಚುತ್ತಿದ್ದವು?




(ಅ) 7 ಪಕ್ಷಿಗಳು ಕೊಳವೆಯೊಳಗೆ ಹೋದರೆ, ಎಷ್ಟು ಪಕ್ಷಿಗಳು ಹೊರಬರುತ್ತಿದ್ದವು?_______________

(ಆ) 8 ನಾಯಿಗಳು ಕೊಳವೆಯೊಳಗೆ ಹೋದರೆ, ಎಷ್ಟು ನಾಯಿಗಳು ಹೊರ ಬರುತ್ತವೆ?___________

SCERT TELANGANA

ಈ ಕೊಳವೆಯಲ್ಲಿ ಯಾವುದೇ ಹೋದರು 8 ಪಟ್ಟು ಹೆಚ್ಚುತ್ತದೆ.



(ಅ) ಒಂದು ವೇಳೆ 9 ಜೇಡರ ಹುಳು ಹೋದರೆ, ಎಷ್ಟು ಜೇಡರ ಹುಳುಗಳು ಹೊರಬರುತ್ತವೆ?-------

(ಆ) 8 ಇರುವೆಗಳು ಕೊಳವೆ ಮೂಲಕ ಹೋದರೆ, ಎಷ್ಟು ಇರುವೆಗಳು ಹೊರ ಬರುತ್ತವೆ?------------

**ಸಂಖ್ಯೆಗಳನ್ನು ಬಿಡಿಸಿ ಗುಣಿಸೋಣ!**

ಶ್ರಾವಿಕ ಮತ್ತು ವಂಶಿ ಇಬ್ಬರೂ ಒಬ್ಬರಿಗೊಬ್ಬರು ಗುಣಾಕಾರದ ಮಗ್ಗಿಗಳಿಂದ ಆಡುತ್ತಿದ್ದರು.




ವಂಶಿ : ಎಂಟು ಏಳುಗಳು ಎಷ್ಟು?


ಶ್ರಾವಿಕ : 56

ಶ್ರಾವಿಕ : ಹದಿಮೂರು ಆರಲಿ ಎಷ್ಟು?


ವಂಶಿ : ನನಗೆ ತಿಳಿಯದು ನನಗೆ 10ರ ವರೆಗೆ ಮಾತ್ರ ಮಗ್ಗಿಗಳು ತಿಳಿದಿವೆ.

SCERT TELANGANA

ಶ್ರಾವಿಕ : 13ರ ಮಗ್ಗಿ ತಿಳಿಯದಿದ್ದರೂ ನೀನು ಉತ್ತರಿಸಬಹುದು. 13 ನ್ನು 10+ 3 ಎಂದು ಬಿಡಿಸಿ ಇವುಗಳನ್ನು 6ರಿಂದ ಗುಣಿಸು. ಬಂದ ಲಬ್ಧಗಳು ಎರಡನ್ನು ಸೇರಿಸಬೇಕು. ಇದನ್ನು ನೋಟ್ ಪುಸ್ತಕದಲ್ಲಿ ಮಾಡಿ ನೋಡಿಸುತ್ತೇನೆ.




ವಂಶಿ : ಹೌದು ಸರಿಯೇ! 13 ನ್ನು 5 + 8 ಎಂದು ಬಿಡಿಸಬಹುದು ಅಲ್ಲವೆ?




ಶ್ರಾವಿಕ : ಹೌದು, ದೊಡ್ಡ ಸಂಖ್ಯೆಗಳನ್ನು ಬಿಡಿಸಿ ಗುಣಿಸುವುದು ತುಂಬಾ ಸುಲಭ.

SCERT TELANGANA

**ಇವನ್ನು ಮಾಡಿರಿ**

1. ನಿಮಗೆ ಅನಿಸಿದಂತೆ ಸಂಖ್ಯೆಗಳನ್ನು ಬಿಡಿಸಿ ಗುಣಿಸಿರಿ. ಹಾಗೂ ನಿಮ್ಮ ಸ್ನೇಹಿತರು ಹೇಗೆ ಗುಣಿಸಿರುವರೋ ನೋಡಿರಿ.

   ಲೆಕ್ಕಗಳು

   (ಅ) 18 x 9 (ಆ) 17 x 6 (ಇ) 19 x 8 (ಈ) 26 x 7

2. ಒಂದು ತೋಟದಲ್ಲಿ 12 ಸಾಲುಗಳಲ್ಲಿ ಮಾವಿನ ಗಿಡಗಳಿವೆ. ಪ್ರತಿ ಸಾಲಿನಲ್ಲಿ 10 ಮರಗಳಿದ್ದರೆ, ತೋಟದಲ್ಲಿರುವ ಮಾವಿನ ಮರಗಳೆಷ್ಟು?

3. ಒಂದು ಬಸ್ಸಿನಲ್ಲಿ 18 ಸಾಲುಗಳಿವೆ. ಒಂದು ಸಾಲಿನಲ್ಲಿ 5 ಜನ ಕೂಡಬಹುದು. ಬಸ್ಸಿನಲ್ಲಿ ಎಷ್ಟು ಜನರು ಕೂಡಬಹುದು? ಅಂತಹ 3 ಬಸ್ಸಿನಲ್ಲಿ ಕುಳಿತುಕೊಳ್ಳಬಹುದಾದ ಪ್ರಯಾಣಿಕರ ಸಂಖ್ಯೆ ಎಷ್ಟು?

4. ರಾಣಿಯ ವಯಸ್ಸು 9 ವರ್ಷ. ಅವಳ ತಾಯಿಯ ವಯಸ್ಸು ಅವಳ ವಯಸ್ಸಿಗೆ 3 ಪಟ್ಟು, ರಾಣಿಯ ತಾಯಿಯ ವಯಸ್ಸು ಎಷ್ಟು?

5. ತರಗತಿಯಲ್ಲಿ ಒಂದು ಬೆಂಚಿನ ಮೇಲೆ 4 ಮಕ್ಕಳು ಕುಳಿತರೆ, 22 ಬೆಂಚುಗಳಲ್ಲಿ ಎಷ್ಟು ಜನ ಮಕ್ಕಳು ಕುಳಿತುಕೊಳ್ಳಬಹುದು?

6. ಒಂದು ಪೆನ್ನಿನ ಬೆಲೆ ₹8, ಆದರೆ 48 ಪೆನ್ನುಗಳ ಬೆಲೆ ಎಷ್ಟು?

**ಪೆನ್ಸಿಲ್ ಪಾಕೆಟ್‌ಗಳು ಮತ್ತು ಪೆನ್ಸಿಲ್ಲುಗಳು.**

ಒಂದು ಪೆನ್ಸಿಲ್ ಬಾಕ್ಸ್‌ನಲ್ಲಿ 10 ಪೆನ್ಸಿಲ್‌ಗಳಿವೆ.

(ಅ) 2 ಪಾಕೆಟ್‌ನಲ್ಲಿ ಎಷ್ಟು ಪೆನ್ಸಿಲ್ಲುಗಳಿವೆ? 2 x 10 = 20

(ಆ) 3 ಪಾಕೆಟ್‌ನಲ್ಲಿ ಎಷ್ಟು ಪೆನ್ಸಿಲ್ಲುಗಳಿವೆ? 3 x 10 = 30

(ಇ) 4 ಪಾಕೆಟ್‌ನಲ್ಲಿ ಎಷ್ಟು ಪೆನ್ಸಿಲ್ಲುಗಳಿವೆ? 4 x 10 = 40

(ಈ) 8 ಪಾಕೆಟ್‌ನಲ್ಲಿ ಎಷ್ಟು ಪೆನ್ಸಿಲ್ಲುಗಳಿವೆ? ______________

(ಉ) 10 ಪಾಕೆಟ್‌ನಲ್ಲಿ ಎಷ್ಟು ಪೆನ್ಸಿಲ್ಲುಗಳಿವೆ? ______________

(ಊ) 14 ಪಾಕೆಟ್‌ನಲ್ಲಿ ಎಷ್ಟು ಪೆನ್ಸಿಲ್ಲುಗಳಿವೆ? ______________

(ಎ) 26 ಪಾಕೆಟ್‌ನಲ್ಲಿ ಎಷ್ಟು ಪೆನ್ಸಿಲ್ಲುಗಳಿವೆ? ______________

(ಏ) 57 ಪಾಕೆಟ್‌ನಲ್ಲಿ ಎಷ್ಟು ಪೆನ್ಸಿಲ್ಲುಗಳಿವೆ? ______________




SCERT TELANGANA

**ಒಂದು ಪೆಟ್ಟಿಗೆಯಲ್ಲಿ 10 ಪೆನ್ಸಿಲ್ ಪಾಕೆಟ್‌ಗಳಿವೆ. ಅಂತಹ 10 ಪೆಟ್ಟಿಗೆಯಲ್ಲಿ ಎಷ್ಟು ಪೆನ್ಸಿಲ್‌ಗಳಿವೆ.**
**10 x 10 = 100**


(ಅ) 2 ಪೆಟ್ಟಿಗೆಯಲ್ಲಿ ಎಷ್ಟು ಪೆನ್ಸಿಲ್‌ಗಳು ಹಿಡಿಯುತ್ತವೆ? 2 x 100 = 200

(ಆ) 4 ಪೆಟ್ಟಿಗೆಯಲ್ಲಿ ಎಷ್ಟು ಪೆನ್ಸಿಲ್‌ಗಳು ಹಿಡಿಯುತ್ತವೆ? 4 x 100 = 400

(ಇ) 6 ಪೆಟ್ಟಿಗೆಯಲ್ಲಿ ಎಷ್ಟು ಪೆನ್ಸಿಲ್‌ಗಳು ಹಿಡಿಯುತ್ತವೆ? ____________

(ಈ) 8 ಪೆಟ್ಟಿಗೆಯಲ್ಲಿ ಎಷ್ಟು ಪೆನ್ಸಿಲ್‌ಗಳು ಹಿಡಿಯುತ್ತವೆ? ____________

(ಉ) 10 ಪೆಟ್ಟಿಗೆಯಲ್ಲಿ ಎಷ್ಟು ಪೆನ್ಸಿಲ್‌ಗಳು ಹಿಡಿಯುತ್ತವೆ? ____________




**ಕೆಳಗಿನ ಜೋಡಣೆಗಳನ್ನು ಪರಿಶೀಲಿಸಿ, ಖಾಲೀ ಸ್ಥಳಗಳನ್ನು ತುಂಬಿರಿ.**

| | | |
|---|---|---|
| 2 x 20 = 40 | 2 x 30 = 60 | 2 x 40 = 80 |
| 3 x 20 = 60 | 3 x 30 = 90 | 3 x 40 = 120 |
| 4 x 20 = 80 | 4 x 30 = 120 | 4 x 40 = 160 |
| 5 x 20 = 100 | 5 x 30 = 150 | 5 x 40 = 200 |
| 6 x 20 = _____ | 6 x 30 = _____ | 6 x 40 = _____ |
| 7 x 20 = _____ | 7 x 30 = _____ | 7 x 40 = _____ |
| 8 x 20 = _____ | 8 x 30 = _____ | 8 x 40 = _____ |
| 9 x 20 = _____ | 9 x 30 = _____ | 9 x 40 = _____ |
| 10 x 20 = _____ | 10 x 30 = _____ | 10 x 40 = _____ |
| 11 x 20 = _____ | 11 x 30 = _____ | 11 x 40 = _____ |
| 12 x 20 = _____ | 12 x 30 = _____ | 12 x 40 = _____ |

**ಪ್ರಯತ್ನಿಸಿರಿ**

ಯಾವುದಾದರೂ ಅನುಕ್ರಮ ಸಂಖ್ಯೆಗಳನ್ನು 50, 60 ಮತ್ತು 70ರಿಂದ ಗುಣಿಸಿ. ಮೇಲಿನಂತೆ ಯಾವುದಾದರೂ ಜೋಡಣೆಯನ್ನು ಗುರ್ತಿಸಿದ್ದೀರಾ?

SCERT TELANGANA

**ಇವು ಸಮಾನವೇ?**

| | | |
|---|---|---|
| (ಅ) 2 x 8 = _____ | (ಆ) 6 x 7 = _____ | (ಇ) 9 x 8 = _____ |
| 8 x 2 = _____ | 7 x 6 = _____ | 8 x 9 = _____ |
| (ಈ) 10 x 5 = _____ | (ಉ) 12 x 3 = _____ | (ಊ) 13 x 5 = _____ |
| 5 x 10 = _____ | 3 x 12 = _____ | 5 x 13 = _____ |

ಯಾವುದಾದರೂ ಎರಡು ಸಂಖ್ಯೆಗಳನ್ನು ತೆಗೆದುಕೊಂಡು ಮೇಲಿನಂತೆ ಗುಣಿಸಿರಿ.
ಅವು ಮೇಲಿನಂತೆ ಸಮವಾಗುತ್ತದೆಯೇ? ಇನ್ನಷ್ಟು ಸಂಖ್ಯೆಗಳೊಂದಿಗೆ ಪ್ರಯತ್ನಿಸಿರಿ. ನೀವೇನು ಗಮನಿಸಿದಿರಿ?


## ಇವನ್ನು ಮಾಡಿರಿ

1. ಖಾಲಿ ಸ್ಥಳಗಳನ್ನು ತುಂಬಿರಿ.


| | |
|---|---|
| (ಅ) 8 x 9 = ______ x 8 | (ಆ) 4 x 10 = ____ x _____ |
| (ಇ) 7 x 10 = ______ x ______ | (ಈ) 16 x 5 = 5 x ______ |
| (ಉ) 9 x ______ = 15 x 9 | (ಊ) 9 x 70 = _________ |
| (ಋ) 12 x 50 = ____ x _____ | (ಎ) ____ x _____ = 8 x 23 |

2. ಉದಾಹರಣೆಗಳನ್ನು ನೋಡಿ ಖಾಲಿ ಸ್ಥಳ ತುಂಬಿರಿ


(ಅ)





(ಆ)




(ಇ)





(ಈ)






SCERT TELANGANA

(ಉ)





(ಊ)





(ಏ)




## ಇವನ್ನು ಮಾಡಿರಿ

1. ಈ ಕೆಳಗಿನ ಚಿತ್ರಗಳ ಮಾಹಿತಿಯನ್ನು ಉಪಯೋಗಿಸಿ ಗುಣಾಕಾರದ ಮೇಲೆ ಬರವಣಿಗೆಯ ಲೆಕ್ಕಗಳನ್ನು ತಯಾರಿಸಿರಿ.


(ಅ)



(ಆ)




(ಇ)



(ಈ)



SCERT TELANGANA

## ದೊಡ್ಡ ಸಂಖ್ಯೆಗಳನ್ನು ಗುಣಿಸೋಣ !


ಉಪಾಧ್ಯಾಯರು ಕಪ್ಪು ಹಲಗೆಯ ಮೇಲೆ ಈ ಸಮಸ್ಯೆಯನ್ನು ಬರೆದಿದ್ದಾರೆ.


ಒಂದು ಅಕ್ಕಿ ಚೀಲದ ಬೆಲೆ 325 ಆದರೆ 3 ಅಕ್ಕಿ ಚೀಲಗಳ ಬೆಲೆ ಎಷ್ಟು?

**325 x 3 = ?**


ಸೀತ ಮತ್ತು ಧರ್ಮ ಲೆಕ್ಕವನ್ನು ಬೇರೆ ಬೇರೆ ರೀತಿಯಲ್ಲಿ ಬಿಡಿಸಿದ್ದಾರೆ?


ಸೀತ ಹೀಗೆ ಬಿಡಿಸಿದ್ದಾಳೆ.






SCERT TELANGANA

ಶಿಕ್ಷಕರು ಈ ಲೆಕ್ಕವನ್ನು ಕಪ್ಪು ಹಲಗೆಯ ಮೇಲೆ ಬರೆದರು.

**45 x 23 = ?**

ಸೀತ ಈ ರೀತಿಯಲ್ಲಿ ಮಾಡಿದಳು

| 40 | 5 | |
|---|---|---|
| 800 | 100 | 20 |
| 120 | 15 | 3 |

45 x 23 = 800 + 100 + 120 + 15 = 1035

ಸೀತ 23, 45ನ್ನು ಎರಡನ್ನು ಬಿಡಿಸಿ ಗುಣಿಸಿದಳು.

ಧರ್ಮ ಈ ರೀತಿಯಲ್ಲಿ ಮಾಡಿದನು.

$$\begin{array}{r} ^{1}\\ 45 \\ \times\ 23 \\ \hline 135 \\ 900 \\ \hline 1035 \\ \hline \end{array}$$

**ಶಿಕ್ಷಕರು :** ಗುಡ್! ಎಲ್ಲರೂ ಬೇರೆ ಬೇರೆ ಪದ್ಧತಿಗಳಲ್ಲಿ ಮಾಡಿದ್ದೀರಿ. ನಿಮ್ಮ ಎಲ್ಲರ ಉತ್ತರವೂ ಸರಿಯಾಗಿದೆ. ಈ ಪದ್ಧತಿಗಳನ್ನು ನಿಮ್ಮ ಸ್ನೇಹಿತರೊಂದಿಗೆ ಚರ್ಚಿಸಿರಿ.

**ಇವನ್ನು ಮಾಡಿರಿ.**

1. ಕೆಳಗಿನ ಲೆಕ್ಕಗಳನ್ನು ಸೀತ ಮತ್ತು ಧರ್ಮ ಮಾಡಿದ ವಿಧಾನದಲ್ಲಿ ಮಾಡಿರಿ.

   ಅ) 85 x 21 ಆ) 157 x 4

2. ಒಂದು ಫಂಕ್ಷನ್ ಹಾಲಿನಲ್ಲಿ ಕುರ್ಚಿಗಳನ್ನು 35 ಸಾಲುಗಳಲ್ಲಿ ಜೋಡಿಸಿದ್ದಾರೆ. ಸಾಲಿಗೆ 19ರಂತೆ ಕುರ್ಚಿಗಳೇದ್ದರೆ ಫಂಕ್ಷನ್ ಹಾಲಿನಲ್ಲಿರುವ ಕುರ್ಚಿಗಳು ಎಷ್ಟು?
3. ಒಂದು ಅಕ್ಕಿ ಚೀಲದ ತೂಕ 50 ಕಿ.ಗ್ರಾಂ. ಆದರೆ 17 ಚೀಲಗಳ ತೂಕವೆಷ್ಟು?
4. ಒಂದು ಮೇಕೆಯ ಭಾರವು 27 ಕಿ.ಗ್ರಾಂ. ಕುದುರೆಯ ತೂಕವು ಮೇಕೆಗಿಂತಲೂ 18 ಪಟ್ಟು ಹೆಚ್ಚಾದರೆ ಕುದುರೆಯ ಭಾರವೆಷ್ಟು?
5. ನಲ್ಗೊಂಡದಿಂದ ಮಿರ್ಯಾಲ ಗೂಡದವರೆಗೆ ಬಸ್ಸಿನ ಪ್ರಯಾಣದರ ₹ 38 ಆದರೆ 42 ಜನ ಬಸ್ಸಿನಲ್ಲಿ ಪ್ರಯಾಣಿಸಿದರೆ ಎಷ್ಟು ಹಣ ಸಲ್ಲಿಸಬೇಕು?
6. ಒಂದು ಯಂತ್ರವು ಪ್ರತಿ ಗಂಟೆಗೆ 235 ಬೊಂಬೆಗಳ ಪೆಟ್ಟಿಗೆಗಳನ್ನು ಪ್ಯಾಕಿಂಗ್ ಮಾಡುತ್ತದೆ. 4 ಗಂಟೆಯಲ್ಲಿ ಆ ಯಂತ್ರವು ಎಷ್ಟು ಪ್ಯಾಕಿಂಗ್ ಮಾಡಬಲ್ಲದು?
7. ಒಂದು ಟ್ರಕ್ಕು 140 ಸಿಮೆಂಟ್ ಚೀಲಗಳನ್ನು ಸಾಗಿಸಬಲ್ಲದು. ಐದು ಟ್ರಕ್ಕುಗಳು ಎಷ್ಟು ಚೀಲ ಸಿಮೆಂಟನ್ನು ಸಾಗಿಸಬಲ್ಲವು?

SCERT TELANGANA

**ನಿಖರವಾದ ಉತ್ತರವಲ್ಲ! ಅಂದಾಜಿಸಿ**

ಟೀಚರ್ ಸುಧಾಳನ್ನು ನಿಮ್ಮ ಗ್ರಾಮದಲ್ಲಿ ಸುಮಾರು ವಾಸಿಸುತ್ತಿರುವ ಜನಸಂಖ್ಯೆ ಎಷ್ಟೆಂದು ಕೇಳಿದರು.

ನಮ್ಮ ಊರಿನಲ್ಲಿ 40 ಕುಟುಂಬಗಳಿವೆ. ಕೆಲವು ಕುಟುಂಬಗಳಲ್ಲಿ 3 ಅಥವಾ ಅದಕ್ಕಿಂತ ಕಡಿಮೆ ಜನರು ಇದ್ದಾರೆ.
ಕೆಲವು ಕುಟುಂಬ ಗಳಲ್ಲಿ 4 ರಿಂದ 5 ಜನರಿದ್ದಾರೆ.
ಪ್ರತಿ ಕುಟುಂಬದಲ್ಲಿ 4 ಜನರಿದ್ದಾರೆಂದು ತಿಳಿಯೋಣ.



ಆದ್ದರಿಂದ ಸುಮಾರು 40 x 4 = 160 ಜನರು ನಮ್ಮ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ.

(ಅ) ನೀವು ನಿಮ್ಮ ಗ್ರಾಮದ ಜನ ಸಂಖ್ಯೆಯನ್ನು ಅಂದಾಜಿಸಬಲ್ಲಿರಾ?

ಶಿಕ್ಷಕರು ಕೆಳಗಿನಂತೆ ಲೆಕ್ಕವನ್ನು ಬೋರ್ಡಿನ ಮೇಲೆ ಬರೆದು ಉತ್ತರಕ್ಕೆ ಸಮೀಪವಿರುವ ಸಂಖ್ಯೆಯನ್ನು ಅಂದಾಜಿಸಿ ಟಿಕ್ ಹಾಕಲು ಹೇಳಿದರು.






₹9 ಕ್ಕಿಂತಲೂ ಕಡಿಮೆ ಬೆಲೆಗೆ ಪುಸ್ತಕವನ್ನು ಕೊಳ್ಳಲು ಸಾಧ್ಯವಿಲ್ಲ.
ಒಂದು ವೇಳೆ ₹10 ನ್ನು ತೆಗೆದುಕೊಂಡರೆ ಸುಲಭವಾಗಿ ಗುಣಿಸಬಹುದು 22 x 10=220.

ಆದ್ದರಿಂದ, ಸುಧ ಸರಿಯಾಗಿ ₹220 ಕ್ಕೆ ಟಿಕ್ ಹೊಡೆದಳು.

SCERT TELANGANA

**ಇವನ್ನು ಮಾಡಿರಿ :**

**ಗುಣಲಬ್ದಕ್ಕೆ ಹತ್ತಿರವಾದ ಸಂಖ್ಯೆಯನ್ನು ಅಂದಾಜು ಮಾಡಬಲ್ಲಿರಾ?**

(ಅ) ಪ್ರತಿಯೊಂದು ಬುಟ್ಟಿಯಲ್ಲಿ 26 ಮಾವಿನ ಹಣ್ಣಿನಂತೆ, 19 ಬುಟ್ಟಿಗಳಲ್ಲಿ ಎಷ್ಟು ಮಾವಿನ ಹಣ್ಣುಗಳಿವೆ?

460 480 500

(ಆ) ಸಿನಿಮ ಟಿಕೆಟ್ ದರ ₹ 25. ಒಂದು ತರಗತಿಯಲ್ಲಿ 28 ಮಕ್ಕಳು ಸಿನಿಮಾಗೆ ಹೋಗಲು ಎಷ್ಟು ಹಣ ಬೇಕಾಗುತ್ತದೆ?

₹ 800 ₹ 750 ₹ 900

(ಇ) ಸತ್ತಯ್ಯನ ತೋಟದಲ್ಲಿ 26 ಸಾಲುಗಳಿವೆ, ಪ್ರತಿ ಸಾಲಿನಲ್ಲಿ 27 ರಂತೆ ಸಸಿಗಳನ್ನು ನೆಡಬೇಕಾದರೆ ಎಷ್ಟು ಸಸಿಗಳು ಬೇಕಾಗುತ್ತದೆ?

600 780 900

(ಈ) ಒಂದು ಮಡಚುವ ಕುರ್ಚಿಯ ಬೆಲೆ ₹ 175 ಆದರೆ 5 ಮಡಚುವ ಕುರ್ಚಿಗಳ ಬೆಲೆ ಎಷ್ಟು?

₹ 500 ₹ 1000 ₹ 1500

**ಅಭ್ಯಾಸ**

1. ಒಂದು ಸ್ಕೂಲ್ ಬ್ಯಾಗಿನ ಬೆಲೆ ₹ 75. ಆದರೆ 3 ಬ್ಯಾಗುಗಳ ಬೆಲೆ ಎಷ್ಟು?
2. ಶಾಲೆಯಲ್ಲಿ ಪ್ರಾರ್ಥನೆಗಾಗಿ ವಿದ್ಯಾರ್ಥಿಗಳು ಸಾಲಿಗೆ 15 ರಂತೆ, 7 ಸಾಲುಗಳಲ್ಲಿ ನಿಂತರೆ ಪ್ರಾರ್ಥನೆಗೆ ಹಾಜರಾದ ವಿದ್ಯಾರ್ಥಿಗಳೆಷ್ಟು?
3. ಒಂದು ಸೇಬಿನ ಪೆಟ್ಟಿಗೆಯಲ್ಲಿ 6 ಅರೆಗಳಲ್ಲಿ (ಅಂತಸ್ತು) ಒಂದೊಂದರಲ್ಲಿ 24 ಸೇಬಿನಂತೆ ಜೋಡಿಸಿದರೆ ಪೆಟ್ಟಿಗೆಯಲ್ಲಿನ ಒಟ್ಟು ಹಣ್ಣುಗಳೆಷ್ಟು?
4. ಒಂದು ಆಟೋ ಟ್ರಾಲಿಯಲ್ಲಿ 64 ಮಾವಿನ ಹಣ್ಣಿನ ಚೀಲಗಳಿವೆ. ಪ್ರತಿಯೊಂದರಲ್ಲಿ 36 ಹಣ್ಣುಗಳಿದ್ದರೆ, ಟ್ರಾಲಿಯಲ್ಲಿರುವ ಒಟ್ಟು ಹಣ್ಣುಗಳೆಷ್ಟು?
5. ಒಂದು ಲೀಟರ್ ಹಾಲಿನ ಬೆಲೆ ₹30 ಆದರೆ 85 ಲೀಟರ್ ಹಾಲಿನ ಬೆಲೆ ಎಷ್ಟು?
6. ಒಂದು ಸ್ಕೇಲಿನ ಉದ್ದ 15 ಸೆಂ.ಮೀ. ವಿದ್ಯುತ್ ಸ್ಥಂಭದ ಎತ್ತ ರ ಸ್ಕೇಲಿನ ಎತ್ತರದ 50 ಪಟ್ಟು ಹೆಚ್ಚು ಆಗಿದೆ. ಹಾಗಾದರೆ ಆ ಸ್ಥಂಭದ ಎತ್ತರವೇನು?
7. ರವಿ ಒಂದು ದಿನದಲ್ಲಿ ₹ 175 ಸಂಪಾದಿಸಿದ್ದಾನೆ. ರವಿಯ ಅಕ್ಕ ಅವನಿಗಿಂತ ಮೂರು ಪಟ್ಟು ಹೆಚ್ಚು ಸಂಪಾದಿಸಿದರೆ ಆಕೆಯ ಸಂಪಾದನೆ ಎಷ್ಟು?

SCERT TELANGANA

# 7 ಸಮಾನ ಭಾಗಗಳು – ಸಮಾನ ರಾಶಿಗಳು

ರಜಿತ ರವರ ತಂದೆ ಮನೆಯಲ್ಲಿ ಮೇಣದ ಬತ್ತಿಗಳನ್ನು ತಯಾರಿಸಿ ಸಂತೆಯಲ್ಲಿ ಮಾರುತ್ತಾನೆ. ರಜಿತ ತನ್ನ ತಂದೆಗೆ ಮೇಣದ ಬತ್ತಿಗಳನ್ನು ಪ್ಯಾಕಿಂಗ್ ಮಾಡುವುದರಲ್ಲಿ ಸಹಾಯ ಮಾಡುತ್ತಾಳೆ. ಸೋಮವಾರದಂದು ತಂದೆ 30 ಮೇಣದ ಬತ್ತಿಗಳನ್ನು ತಯಾರಿಸಿದನು. ಆತನು ರಜಿತಳಿಗೆ ಒಂದೊಂದು ಪಾಕೆಟ್ಟಿನಲ್ಲಿ 5 ಕ್ಯಾಂಡಲ್‌ಗಳಂತೆ ಪ್ಯಾಕ್ ಮಾಡಲು ತಿಳಿಸಿದರು. ಹಾಗಾದರೆ ರಜಿತ ತಯಾರಿಸಿದ ಪ್ಯಾಕೆಟ್‌ಗಳೆಷ್ಟು?






ರಜಿತ ಒಟ್ಟು ಮೇಣದ ಬತ್ತಿಗಳನ್ನು ಪ್ರತಿ ರಾಶಿಗೆ 5 ಇರುವಂತೆ ವಿಂಗಡಿಸಿದಳು

$$30 \div 5 = 6$$

ಆದ್ದರಿಂದ ಆಕೆಯು 6 ಪ್ಯಾಕೆಟ್ಟುಗಳನ್ನು ಮಾಡಿದಳು.

(ಅ) ರಜಿತಳ ತಂದೆ ಒಂದೊಂದು ಪಾಕೆಟ್ಟಿನಲ್ಲಿ 6 ಕ್ಯಾಂಡಲ್ ಇರುವಂತೆ ಪ್ಯಾಕ್ ಮಾಡಲು ಹೇಳಿದರೆ ಆಕೆಯು ಎಷ್ಟು ಪಾಕೆಟ್ ತಯಾರಿಸಬಹುದು? ____________








(ಆ) ಒಂದು ವೇಳೆ ಆಕೆಯು 10 ಮೇಣದ ಬತ್ತಿಗಳು ಒಂದು ಪ್ಯಾಕೆಟ್ಟಿನಲ್ಲಿರುವಂತೆ ಹೇಳಿದರೆ ತಯಾರುಮಾಡಬಲ್ಲ ಪಾಕೆಟ್ಟುಗಳೆಷ್ಟು?

____________

SCERT TELANGANA

ಮಂಗಳವಾರದ ದಿನ ಅವಳ ತಂದೆ 24 ಮೇಣದ ಬತ್ತಿಗಳನ್ನು ತಯಾರಿಸಿದ. ಅವುಗಳನ್ನು ಸಮವಾಗಿ 3 ಪ್ಯಾಕೆಟ್ ಮಾಡಲು ಹೇಳಿದನು.




(ಇ) ಒಂದೊಂದು ಪ್ಯಾಕೆಟ್ಟಿನಲ್ಲಿ ಎಷ್ಟು ಮೇಣದ ಬತ್ತಿಗಳು ಇರುತ್ತವೆ? ________

ರಜಿತ ಎಲ್ಲ ಮೇಣದ ಬತ್ತಿಗಳನ್ನು 3 ರಾಶಿಗಳಾಗಿ ವಿಂಗಡಿಸಿದಳು.

$24 \div 3 = 8$

ಆದ್ದರಿಂದ ಒಂದೊಂದು ಪಾಕೆಟ್ಟಿನಲ್ಲಿ 8 ಮೇಣದ ಬತ್ತಿಗಳನ್ನು ಪ್ಯಾಕ್ ಮಾಡಿದಳು.

(ಈ) ಒಂದು ವೇಳೆ ಅವಳ ತಂದೆ 8 ಪ್ಯಾಕೆಟ್‌ಗಳಲ್ಲಿ ಸಮಾನವಾಗಿ ಮೇಣದ ಬತ್ತಿಗಳನ್ನು ಇರಿಸಲು ಹೇಳಿದರೆ,ಒಂದು ಪ್ಯಾಕೆಟ್ಟಿನಲ್ಲಿ ಎಷ್ಟು ಮೇಣದ ಬತ್ತಿ ಗಳಿರುತ್ತವೆ? __________

(ಉ) ಒಂದು ವೇಳೆ ತಂದೆ 12 ಪಾಕೆಟ್ಟುಗಳಲ್ಲಿ ಸಮಾನವಾಗಿ ಮೇಣದ ಬತ್ತಿಗಳನ್ನು ಇರಿಸಲು ಹೇಳಿದರೆ, ಒಂದೊಂದು ಪಾಕೆಟ್ಟಿನಲ್ಲಿ ಎಷ್ಟು ಮೇಣದ ಬತ್ತಿಗಳಿರುತ್ತವೆ? ______________________________

**ಇವು ಮಾಡಿರಿ.**


1. ಒಂದು ಜೀಪಿನಲ್ಲಿ 8 ಜನ ಆರಾಮವಾಗಿ ಕುಳಿತುಕೊಳ್ಳಬಲ್ಲರು. ಒಂದು ಊರಿನಿಂದ ಮತ್ತೊಂದು ಊರಿಗೆ ಸಂತೆಗೆ ಹೋಗಲು 48 ಜನ ಆರಾಮವಾಗಿ ಕುಳಿತುಕೊಳ್ಳಲು ಎಷ್ಟು ಜೀಪುಗಳ ಅಗತ್ಯವಿದೆ?
2. 6 ಕಿತ್ತಳೆ ಹಣ್ಣಿನ ಬೆಲೆ ₹ 54 ಆದರೆ ಒಂದರ ಬೆಲೆ ಎಷ್ಟು?
3. ಒಂದು ತರಗತಿಯಲ್ಲಿ 42 ಜನ ವಿದ್ಯಾರ್ಥಿಗಳಿದ್ದಾರೆ. 7 ಸಾಲುಗಳಲ್ಲಿ ಸಮಾನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಕುಳಿತರೆ ಒಂದೊಂದು ಸಾಲಿನಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?
4. ಎರಡು ಸಂಖ್ಯೆಗಳ ಗುಣಲಬ್ಧ 56. ಅವುಗಳಲ್ಲಿ ಒಂದು ಸಂಖ್ಯೆ 7 ಆದರೆ ಮತ್ತೊಂದು ಸಂಖ್ಯೆ ಯಾವುದು?

**ಭಾಗಿಸಿ ಹಾಗೂ ಗುಣಿಸಿರಿ.**

ಭಾಗಿಸುವಾಗ ನಾವು ಗುಣಾಕಾರವನ್ನು ಬಳಸಿಕೊಳ್ಳುತ್ತೇವೆ.

ಕೆಳಗಿನ ಚಿತ್ರಗಳಿಗೆ ಅನುಗುಣವಾಗಿ ಒಂದು ಗುಣಾಕಾರ ಮತ್ತು ಒಂದು ಭಾಗಾಕಾರ ರೂಪದಲ್ಲಿ ಬರೆಯಿರಿ. ನಿಮಗಾಗಿ ಒಂದು ಉದಾಹರಣೆ ನೀಡಲಾಗಿದೆ.

(ಅ)





$12 \div 2 = 6$ $2 \times 6 = 12$

(ಆ)



SCERT TELANGANA

(ಇ) 

(ಈ) 

ನಾವು ಮಾಡಿದ ಭಾಗಾಕಾರವು ಸರಿಯಾಗಿದೆಯೋ ಇಲ್ಲವೋ ಗುಣಾಕಾರದ ಮೂಲಕ ತಾಳೆ ನೋಡಬಹುದು. ಸುಧಾ ತಾನು ಮಾಡಿದ ಭಾಗಾಕಾರವನ್ನು ಗುಣಿಸುವುದರ ಮೂಲಕ ಹೀಗೆ ಸರಿನೋಡಿದಳು.

$84 \div 4$

```
                    21 ——— ಭಾಗಲಬ್ಧ
ಭಾಜಕ  ———  4)84 ——— ಭಾಜ್ಯ
                     8
                    ---
                    04
                    04
                    ---
                     0
```

ತಾಳೆ ನೋಡುವುದು

```
  21
 ×4
----
  84
----
```

ಆದ್ದರಿಂದ $84 \div 4 = 21$

ಮತ್ತು $21 \times 4 = 84$

**ಇವು ಮಾಡಿರಿ.**

1. ಭಾಗಿಸಿ, ಗುಣಾಕಾರದ ಮೂಲಕ ತಾಳೆನೋಡಿರಿ.

   (ಅ) $75 \div 5$ (ಆ) $84 \div 7$ (ಇ) $96 \div 6$

2. ರಾಜೇಂದ್ರ ₹ 96ಕ್ಕೆ ಕೆಲವು ಪುಸ್ತಕಗಳನ್ನು ಕೊಂಡನು. ಪ್ರತಿ ಪುಸ್ತಕದ ಬೆಲೆ ₹ 8 ಆದರೆ, ರಾಜೇಂದ್ರ ಕೊಂಡ ಪುಸ್ತಕಗಳೆಷ್ಟು?

3. ₹ 95ರಲ್ಲಿರುವ ₹ 5ರ ನೋಟುಗಳೆಷ್ಟು?



4. ಒಬ್ಬ ದರ್ಜಿ ಪ್ರತಿ ಅಂಗಿಗೆ 6ಗುಂಡಿಗಳಂತೆ ಹೊಲಿದನು. ಆತನ ಹತ್ತಿರ ಒಟ್ಟು 84 ಗುಂಡಿಗಳಿದ್ದಲ್ಲಿ ಅವನ್ನು ಎಷ್ಟು ಅಂಗಿಗಳಿಗೆ ಹಾಕಬಲ್ಲನು.

5. ಎರಡು ಸಂಖ್ಯೆಗಳ ಗುಣಲಬ್ಧ 77 ಅವುಗಳಲ್ಲಿ ಒಂದು ಸಂಖ್ಯೆ 7ಆದರೆ ಎರಡನೇ ಸಂಖ್ಯೆ ಎಷ್ಟು?

6. ದಸರಾ ಹಬ್ಬ ಬರಲು 28 ದಿನಗಳಿವೆ. ಹಾಗಾದರೆ ಎಷ್ಟು ವಾರಗಳ ನಂತರ ದಸರಾ ಬರುತ್ತದೆ?

7. ನಾನೊಂದು ಸಂಖ್ಯೆ ನನ್ನನ್ನು 7 ರಿಂದ ಗುಣಿಸಿದಾಗ 91 ಬರುತ್ತದೆ ಹಾಗಾದರೆ ನಾನು ಯಾರು?

SCERT TELANGANA


2.

8. ಕೆಳಗೆ ಕೊಟ್ಟಿರುವ ಚಿತ್ರಗಳ ಆಧಾರಾಗಿ ನಿಮಗೆ ಇಷ್ಟವಾದ ಭಾಗಾಕಾರ ಲೆಕ್ಕವನ್ನು ತಯಾರಿಸಿ.

(ಅ)



(ಆ)



(ಇ)



**7 ಚೆಂಡುಗಳನ್ನು ಇಬ್ಬರು ಮಕ್ಕಳಿಗೆ ಸಮವಾಗಿ ಹಂಚಬಹುದೇ?**

**7** ಚೆಂಡುಗಳನ್ನು ಇಬ್ಬ ರು ವಿದ್ಯಾರ್ಥಿಗಳಿಗೆ ಹಂಚಿದರೆ ಪ್ರತಿಯೊಬ್ಬರಿಗೆ **3** ಚೆಂಡುಗಳು ಬಂದು ಇನ್ನೊಂದು ಚೆಂಡು ಉಳಿದಿರುತ್ತದೆ. ಈಗ ಇದನ್ನು ಭಾಗಾಕಾರ ರೂಪದಲ್ಲಿ ನೋಡೋಣ.

```
    3
2) 7
   6
  ---
   1
  ---
```

3 ಎಂಬುದು ಭಾಗಲಬ್ದ

1 ಎಂಬುದು ಶೇಷ

ಭಾಗಿಸಿರಿ, ಶೇಷವನ್ನು ಕಂಡು ಹಿಡಿಯಿರಿ.

(ಅ) 14 ಪುಸ್ತಕಗಳನ್ನು 4 ಸಮೂಹಗಳಿಗೆ ಸಮವಾಗಿ ವಿಭಜಿಸಿರಿ

ಒಂದೊಂದು ಗುಂಪಿಗೆ ಬರುವ ಪುಸ್ತಕಗಳ ಸಂಖ್ಯೆ ______________

ವಿಭಜಿಸಿದ ನಂತರ ಉಳಿದ ಪುಸ್ತಕಗಳ ಸಂಖ್ಯೆ ______________

(ಆ) 9 ಬಲ್ಬುಗಳನ್ನು ಸಮವಾಗಿ 2 ಕೊಠಡಿಗಳಲ್ಲಿ ಹಾಕಿರಿ

ಒಂದೊಂದು ಕೊಠಡಿಯಲ್ಲಿ ಜೋಡಿಸಿದ ಬಲ್ಬುಗಳ ಸಂಖ್ಯೆ ______________

ಅಳವಡಿಸಿದ ನಂತರ ಉಳಿದ ಬಲ್ಬುಗಳ ಸಂಖ್ಯೆ______________



(ಇ) 15 ಪೆನ್ಸಿಲ್ ಗಳನ್ನು ಸಮವಾಗಿ ನಾಲ್ವರಿಗೆ ಹಂಚಿರಿ.

SCERT TELANGANA

ಪ್ರತಿಯೊಬ್ಬರಿಗೆ ಬರುವ ಪೆನ್ಸಿಲ್‌ಗಳ ಸಂಖ್ಯೆ ______________

ಹಂಚಿದ ನಂತರ ಉಳಿದ ಪೆನ್ಸಿಲ್‌ಗಳ ಸಂಖ್ಯೆ ______________

ಈಗ 68 ಕಿತ್ತಳೆ ಹಣ್ಣನ್ನು 6 ಜನರಿಗೆ ಸಮವಾಗಿ ಹಂಚಿರಿ.

```
     11  ——— ಭಾಗಲಬ್ಧ
  6)68
    6 ↓
   ----
    08
    06
   ----
    02  ——— ಶೇಷ
   ----
```

11 ಎಂಬುದು ಭಾಗಲಬ್ಧ
2 ಎಂಬುದು ಶೇಷ

**ಇವನ್ನು ಮಾಡಿರಿ**

1. ಕೆಳಗಿನ ಭಾಗಾಕಾರಗಳನ್ನು ಮಾಡಿರಿ. ಭಾಗಲಬ್ಧ, ಶೇಷವನ್ನು ತಿಳಿಸಿರಿ.

(ಅ) $63 \div 5$ (ಆ) $49 \div 3$ (ಇ) $54 \div 4$

(ಈ) $67 \div 5$ (ಉ) $85 \div 4$ (ಊ) $68 \div 4$

2. ಒಂದು ನಿಂಬೆ ಹಣ್ಣಿನ ಬೆಲೆ ₹ 3 ಆದರೆ ₹ 50 ಗಳಿಗೆ ಎಷ್ಟು ನಿಂಬೆ ಹಣ್ಣುಗಳನ್ನು ಕೊಳ್ಳಬಹುದು? ಕೊಂಡನಂತರ ಏನಾದರೂ ಹಣ ಉಳಿಯುತ್ತದೆಯೆ?

3. ನಾನು 30 ಮತ್ತು 40ರ ನಡುವೆ ಇರುವೆನು. ನನ್ನನ್ನು 5ರಿಂದ ಭಾಗಿಸಿದಾಗ 3 ಶೇಷ ಬರುತ್ತದೆ, ಆದರೆ ನಾನು ಯಾರು?

4. 74 ಸೇಬಿನ ಹಣ್ಣನ್ನು 9 ಪೆಟ್ಟಿಗೆಗಳಲ್ಲಿ ಸಮಾನವಾಗಿ ಜೋಡಿಸಿದರೆ, ಒಂದೊಂದು ಪೆಟ್ಟಿಗೆಯಲ್ಲಿ ಎಷ್ಟು ಸೇಬಿನ ಹಣ್ಣಿರುತ್ತದೆ? ಜೋಡಿಸಿದ ನಂತರ ಉಳಿದ ಹಣ್ಣುಗಳೆಷ್ಟು?

5. ₹ 93 ರಲ್ಲಿ ಎಷ್ಟು ₹ 10 ಗಳು ಇವೆ? ಎಷ್ಟು ₹ 1 ಇವೆ?

6. ನಾನು 50ಕ್ಕೂ 60ಕ್ಕೂ ನಡುವೆ ಇರುವೆನು. ನನ್ನನ್ನು 7 ರಿಂದ ಭಾಗಿಸಿದರೆ ಶೇಷ 1 ಬಂದಿತು. ಹಾಗಾದರೆ ನಾನಾರು?

7. ತರಗತಿ ಶಿಕ್ಷಕರು 75 ನೋಟ್ ಪುಸ್ತಕಗಳನ್ನು ತಂದರು. ಪ್ರತಿಯೊಬ್ಬ ವಿದ್ಯಾರ್ಥಿಗೆ 4 ನೋಟ್ ಪುಸ್ತಕಗಳಂತೆ ಹಂಚಿದರೆ ಎಷ್ಟು ಜನಕ್ಕೆ ಹಂಚಬಹುದು? ಇನ್ನು ಎಷ್ಟು ಪುಸ್ತಕಗಳು ಉಳಿಯುತ್ತವೆ?

SCERT TELANGANA

**ದೊಡ್ಡ ಸಂಖ್ಯೆಗಳ ಭಾಗಾಕಾರ :**

**250 ÷ 2**

ಕೇಶವ ಶಿಕ್ಷಕರು ಒಂದು ಸಮಸ್ಯೆಯನ್ನು ಬೋರ್ಡಿನ ಮೇಲೆ ಬರೆದರು.
ಎಂದಿನಂತೆ ವಿದ್ಯಾರ್ಥಿಗಳು ಸಮಸ್ಯೆಯನ್ನು ವಿವಿಧ ವಿಧಾನಗಳಲ್ಲಿ ಮಾಡಿದರು.

ವಿಮಲ ಕೆಳಗಿನಂತೆ ಮಾಡಿದಳು.

```
     100 + 25
2)    250
      200
      ----
       50
       50
      ----
        0
      ----
```

ಯಾವ ಸಂಖ್ಯೆಯನ್ನು 2 ರಿಂದ ಗುಣಿಸಿದಾಗ 250 ಹತ್ತಿರ ಬರುತ್ತದೆ.
ಯಾವ ಸಂಖ್ಯೆಯನ್ನು 2 ರಿಂದ ಗುಣಿಸಿದಾಗ 50 ಕ್ಕೆ ಸಮೀಪವಿರುತ್ತದೆ.

125 ಎಂಬುದು ಭಾಗಲಬ್ಧ
0 ಎಂಬುದು ಶೇಷ

ಸುಧ ಈ ರೀತಿ ಮಡಿದ್ದಾಳೆ.

```
   125
2)250
  2 ↓
  ---
  05
   4
  ---
   10
   10
  ---
    0
```

ಯಾವ ಸಂಖ್ಯೆಗೆ 2 ಪಟ್ಟು 2 ಕ್ಕೆ ಹತ್ತಿರ ಆಗುತ್ತದೆ.
ಯಾವ ಸಂಖ್ಯೆಗೆ 2 ಪಟ್ಟು 5 ಕ್ಕೆ ಹತ್ತಿರ ಆಗುತ್ತದೆ.
ಯಾವ ಸಂಖ್ಯೆಗೆ 2 ಪಟ್ಟು 10 ಕ್ಕೆ ಹತ್ತಿರ ಆಗುತ್ತದೆ.

125 ಎಂಬುದು ಭಾಗಲಬ್ಧ
0 ಎಂಬುದು ಶೇಷ

ನಿಮ್ಮ ಸ್ನೇಹಿತರು, ಶಿಕ್ಷಕರೊಂದಿಗೆ ಮೇಲಿನ ಪದ್ದತಿಗಳಲ್ಲಿ ಇರುವ ವ್ಯತ್ಯಾಸವನ್ನು ಚರ್ಚಿಸಿರಿ.

SCERT TELANGANA

ಕೇಶವ ಶಿಕ್ಷಕರು ಮತ್ತೊಂದು ಲೆಕ್ಕವನ್ನು ಬೋರ್ಡಿನ ಮೇಲೆ ಬರೆದಿದ್ದಾರೆ.

**398 ÷ 4 = ?**

ಈ ಲೆಕ್ಕವನ್ನು ಸಹ ವಿದ್ಯಾರ್ಥಿಗಳು ಬೇರೆ ಬೇರೆ ವಿಧಾನದಲ್ಲಿ ಮಾಡಿದ್ದಾರೆ.
ರಮಾ ಹೀಗೆ ಮಾಡಿದ್ದಾಳೆ.

```
     50 + 40 + 9
4)  398
    200
    ---
    198
    160
    ---
     38
     36
    ---
      2
```

ಭಾಗಲಬ್ಧ = 99

ಶೇಷ =2

ಯಾವ ಸಂಖ್ಯೆಗೆ 4 ಪಟ್ಟು 398 ಕ್ಕೆ ಸಮೀಪವಾಗುತ್ತಿದೆ.

ವಿಮಲ ಈ ರೀತಿಯಲ್ಲಿ ಮಾಡಿದ್ದಾಳೆ

```
     90 + 9
4)  398
    360
    ---
     38
     36
    ---
      2
```

ಭಾಗಲಬ್ಧ = 99

ಶೇಷ =2

ಯಾವ ಸಂಖ್ಯೆಗೆ 4 ಪಟ್ಟು 38 ಕ್ಕೆ ಹತ್ತಿರ?

ಸುಧ ಈ ವಿಧಾನದಲ್ಲಿ ಮಾಡಿದ್ದಾಳೆ.

```
     99
4)  398
    36
    ---
     38
     36
    ---
      2
```

ಭಾಗಲಬ್ಧ = 99

ಶೇಷ = 2

ಯಾವ ಸಂಖ್ಯೆಗೆ 4 ಪಟ್ಟು 3 ಕ್ಕೆ ಹತ್ತಿರ ವಿರುತ್ತದೆ?
ಯಾವ ಸಂಖ್ಯೆಗೆ 4 ಪಟ್ಟು 39 ಕ್ಕೆ ಹತ್ತಿರ ವಿರುತ್ತದೆ?
ಯಾವ ಸಂಖ್ಯೆಗೆ 4 ಪಟ್ಟು 38 ಕ್ಕೆ ಹತ್ತಿರ ವಿರುತ್ತದೆ?

ನಿಮ್ಮ ಸ್ನೇಹಿತರು, ಉಪಾಧ್ಯಾಯರೊಂದಿಗೆ ಮೇಲಿನ ವಿಧಾನಗಳಲ್ಲಿರುವ ವ್ಯತ್ಯಾಸಗಳನ್ನು ಚರ್ಚಿಸಿರಿ.

SCERT TELANGANA

ಕೇಶವ ಶಿಕ್ಷಕರು ಮತ್ತೊಂದು ಲೆಕ್ಕವನ್ನು ಬೋರ್ಡಿನ ಮೇಲೆ ಬರೆದರು. ವಿದ್ಯಾರ್ಥಿಗಳನ್ನು ವಿವಿಧ ರೀತಿಗಳಲ್ಲಿ ಲೆಕ್ಕ ಬಿಡಿಸಲು ಹೇಳಿದರು.

**$350 \div 10 = ?$**

ರಮ ಈ ವಿಧವಾಗಿ ಮಾಡಿದಳು.

```
      30
10)  305
     300
     ---
       5
     ---
```

ಭಾಗಲಬ್ಧ = 30
ಶೇಷ = 5

ಯಾವ ಸಂಖ್ಯೆಗೆ 10 ಪಟ್ಟು 300ಕ್ಕೆ ಸಮೀಪವಾಗುತ್ತದೆ.

ಸುಧ ಈ ವಿಧವಾಗಿ ಮಾಡಿದ್ದಾಳೆ.

```
      30
10)  305
     30↓
     ---
       5
     ---
```

ಭಾಗಲಬ್ಧ = 30
ಶೇಷ = 5

ಯಾವ ಸಂಖ್ಯೆಗೆ 10 ಪಟ್ಟು 3ಕ್ಕೆ ಹತ್ತಿರವಾಗುತ್ತದೆ.
ಯಾವ ಸಂಖ್ಯೆಗೆ 10 ಪಟ್ಟು 10ಕ್ಕೆ ಹತ್ತಿರವಾಗುತ್ತದೆ.
ಯಾವ ಸಂಖ್ಯೆಗೆ 10 ಪಟ್ಟು 5ಕ್ಕೆ ಹತ್ತಿರವಾಗುತ್ತದೆ.

ಕಮಲ ಈ ವಿಧವಾಗಿ ಮಾಡಿದ್ದಾಳೆ.

```
       3
10)  305
     30↓
     ---
       5
     ---
```

ಭಾಗಲಬ್ಧ = 3
ಶೇಷ = 5

305ನ್ನು 10 ರಿಂದ ಭಾಗಿಸಿದರೆ ಒಂದೊಂದು ಭಾಗವು 3 ಆಗುತ್ತದೆಯೇ?

ಎಲ್ಲ ಉತ್ತರಗಳು ಸರಿಯಾದುವೇ? ಕಮಲ ಮಾಡಿರುವ ತಪ್ಪೇನು?

**ಪ್ರಯತ್ನಿಸಿರಿ :-**

1. ಜಯ ಹತ್ತಿರವಿರುವ ಮಾವಿನ ಹಣ್ಣುಗಳನ್ನು ಇಬ್ಬರು ಮಕ್ಕಳಿಗೆ ಸಮವಾಗಿ ಹಂಚಿದಾಗ ಏನು ಉಳಿಯಲಿಲ್ಲ. ಮೂವರಿಗೆ ಸಮವಾಗಿ ಹಂಚಿದಾಗ ಒಂದು ಹಣ್ಣು ಉಳಿಯಿತು. ಹಾಗಾದರೆ ಜಯ ಹತ್ತಿರ ಇದ್ದ ಹಣ್ಣುಗಳೆಷ್ಟು?

SCERT TELANGANA

**ಭಾಗಿಸಬೇಡಿ! ಅಂದಾಜಿಸಿ:**

₹ 97 ನ್ನು ಐದು ಜನರಿಗೆ ಸಮಾನವಾಗಿ ಹಂಚಿದರೆ ಪ್ರತಿಯೊಬ್ಬರಿಗೆ ಎಷ್ಟು ಬರುತ್ತದೆ?

97 ಎಂಬುದು 100ಕ್ಕೆ ಹತ್ತಿರವಾಗಿದೆ ಮತ್ತು 100ನ್ನು 5ರಿಂದ ಸುಲಭವಾಗಿ ಭಾಗಿಸಬಹುದು. ಆದ್ದರಿಂದ ಒಂದೊಂದು ವ್ಯಕ್ತಿಗೆ ಸುಮಾರು 100 ÷ 5 = ₹ 20 ಬರುತ್ತದೆ.
ಈಗ ಕೆಳಗಿನ ಸಮಸ್ಯೆಗಳನ್ನು ಭಾಗಾಕಾರ ಮಾಡದಯೇ ಅಂದಾಜಿಸಿ ಹತ್ತಿರದ ಉತ್ತರಕ್ಕೆ ಟಿಕ್ ಹಾಕಿರಿ.

(ಅ) 73 ಗೋಲಿಗಳನ್ನು ನಾಲ್ಕು ಮಕ್ಕಳಿಗೆ ಸಮವಾಗಿ ಹಂಚಬೇಕಾದಲ್ಲಿ ಪ್ರತಿಯೊಬ್ಬರಿಗೆ ಎಷ್ಟೆಷ್ಟು ಗೋಲಿಗಳು ಬರುತ್ತವೆ?

50 20 70

(ಆ) 92 ಪೆನ್ಸಿಲ್ಲುಗಳನ್ನು 9 ಮಕ್ಕಳಿಗೆ ಸಮವಾಗಿ ಹಂಚಿದರೆ ಪ್ರತಿಯೊಬ್ಬರಿಗೆ ಎಷ್ಟು ಪೆನ್ಸಿಲ್ಲುಗಳು ಬರುತ್ತವೆ?

8 10 12

(ಇ) 187 ಲಡ್ಡುಗಳನ್ನು ಒಂದೊಂದು ಬಾಕ್ಸಿನಲ್ಲಿ 6ರಂತೆ ಇರಿಸಿದರೆ ಎಷ್ಟು ಬಾಕ್ಸುಗಳು ಬೇಕಾಗುತ್ತದೆ?

20 30 40

(ಈ) ₹ 131ನ್ನು 7 ಜನರಿಗೆ ಸಮವಾಗಿ ಹಂಚಿದರೆ ಪ್ರತಿಯೊಬ್ಬರಿಗೆ ಬರುವ ಹಣವೆಷ್ಟು?

20 15 10

(ಉ) ₹ 461 ನ್ನು 8 ಜನರಿಗೆ ಸಮಾನವಾಗಿ ಹಂಚಿದರೆ ಪ್ರತಿಯೊಬ್ಬರಿಗೆ ಎಷ್ಟು ರೂಪಾಯಿ ಬರುತ್ತದೆ?

50 60 70

**ಅಭ್ಯಾಸ :**

1. ನನ್ನನ್ನು 4ರಿಂದ ಗುಣಿಸಿದಾಗ ಗುಣಲಬ್ದವು 48 ಬರುತ್ತದೆ. ಹಾಗಾದರೆ ನಾನು ಯಾರು?
2. ಒಂದು ಕಾರು 3 ಗಂಟೆಗಳಲ್ಲಿ 96 ಕಿ.ಮೀ.ದೂರವನ್ನು ಪ್ರಯಾಣಿಸಬಲ್ಲದು. ಪ್ರತಿ ಗಂಟೆಗೆ ಸಮಾನ ದೂರವನ್ನು ಪ್ರಯಾಣಿಸಿದರೆ ಒಂದು ಗಂಟೆಗೆ ಎಷ್ಟು ದೂರ ಪ್ರಯಾಣಿಸುತ್ತದೆ?
3. ಒಬ್ಬ ಶಿಕ್ಷಕರು 98 ನೋಟ್ ಪುಸ್ತಕಗಳನ್ನು ಕೊಂಡರು. ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರತಿಯೊಬ್ಬರಿಗೆ 4 ರಂತೆ ಹಂಚಿದರೆ ಎಷ್ಟು ಜನ ವಿದ್ಯಾರ್ಥಿಗಳಿಗೆ ಪುಸ್ತಕಗಳು ಹಂಚಲಾಯಿತು?
4. ಎರಡು ಸಂಖ್ಯೆಗಳ ಗುಣಲಬ್ದವು 72, ಅವುಗಳಲ್ಲಿ ಒಂದು ಸಂಖ್ಯೆ 12 ಆದರೆ ಎರಡನೇ ಸಂಖ್ಯೆ ಯಾವುದು?
5. 91 ಮೀ ಉದ್ದವಿರುವ ಹಗ್ಗವನ್ನು 7 ಮೀ ಉದ್ದವಿರುವ ಎಷ್ಟು ತುಂಡುಗಳಾಗಿ ಕತ್ತರಿಸಬಹುದು?

SCERT TELANGANA



6. ನನ್ನನ್ನು 9 ರಿಂದ ಗುಣಿಸಿದಾಗ ಗುಣಲಬ್ಧವು 729 ಬಂದಿತು. ಹಾಗಾದರೆ ನಾನು ಯಾರು?
7. 648 ಜನ ,ಒಂದು ರೈಲಿನಲ್ಲಿ 9 ಬೋಗಿಗಳಲ್ಲಿ ಸಮವಾಗಿ ಕುಳಿತರೆ ಒಂದೊಂದು ಬೋಗಿಯಲ್ಲಿ ಕುಳಿತವರ ಸಂಖ್ಯೆ ಎಷ್ಟು?
8. 783 ಸೀರೆಗಳನ್ನು 9 ಪೆಟ್ಟಿಗೆಯಲ್ಲಿ ಸಮವಾಗಿ ಜೋಡಿಸಿದರೆ, ಪ್ರತಿಯೊಂದು ಪೆಟ್ಟಿಗೆಯಲ್ಲಿರುವ ಸೀರೆಗಳು ಎಷ್ಟು?
9. ಒಂದು ವಿಹಾರ ಯಾತ್ರೆಗೆ 352 ಜನ ವಿದ್ಯಾರ್ಥಿಗಳು ಹೊರಟರು. ಒಂದೊಂದು ಡೇರೆಯಲ್ಲಿ 8 ವಿದ್ಯಾರ್ಥಿಗಳಂತೆ ಮಲಗಿಕೊಂಡರೆ ಎಷ್ಟು ಡೇರೆಗಳು ಬೇಕಾಗುತ್ತದೆ?
10. ಸಮಾನ ಭಾರವಿರುವ 7 ಅಕ್ಕಿ ಚೀಲಗಳ ತೂಕವು 350 ಕಿ.ಗ್ರಾಂ. ಆದರೆ ಒಂದೊಂದು ಚೀಲದ ಭಾರವೆಷ್ಟು?
11. ಒಂದು ವರ್ಷದಲ್ಲಿ ಎಷ್ಟು ವಾರಗಳಿರುತ್ತವೆ? (ಒಂದು ವರ್ಷಕ್ಕೆ 365 ದಿನ, ಒಂದು ವಾರಕ್ಕೆ 7 ದಿನಗಳು)
12. ಒಂದು ಸೇಬಿನ ಬೆಲೆ ₹ 14 ಆದರೆ ₹ 590 ಕ್ಕೆ ಎಷ್ಟು ಸೇಬುಗಳನ್ನು ಕೊಳ್ಳಬಹುದು? ಕೊಂಡಮೇಲೆ ಏನಾದರು ಹಣ ಉಳಿಯುತ್ತದೆಯೇ? ಎಷ್ಟು?
13. 675 ಸೇಬುಗಳನ್ನು 15 ಡಬ್ಬಗಳಲ್ಲಿ ಸಮವಾಗಿ ಇರಿಸಿದರೆ ಪ್ರತಿ ಡಬ್ಬದಲ್ಲಿರುವ ಸೇಬುಗಳೆಷ್ಟು?
14. ಒಬ್ಬ ಹುಡುಗನು ಒಂದು ದಿನದಲ್ಲಿ 17 ಪುಟಗಳನ್ನು ಓದಬಲ್ಲನು. ಹಾಗಾದರೆ 340 ಪುಟಗಳನ್ನು ಆತನು ಎಷ್ಟು ದಿನಗಳಲ್ಲಿ ಓದಬಲ್ಲನು?
15. ಒಂದು ತೋಟದಲ್ಲಿ 15 ಸಾಲುಗಳಲ್ಲಿ ಒಟ್ಟು 105 ನಿಂಬೆ ಗಿಡಗಳಿವೆ. ಹಾಗಾದರೆ ಒಂದೊಂದು ಸಾಲಿನಲ್ಲಿ ಎಷ್ಟು ನಿಂಬೆಗಿಡಗಳಿವೆ?
16. ಒಂದು ಶಾಲೆಯಲ್ಲಿನ 280 ಜನ ವಿದ್ಯಾರ್ಥಿಗಳು ಪ್ರವಾಸಕ್ಕಾಗಿ ಹೊರಟಿದ್ದಾರೆ. ಒಂದು ಬಸ್ಸಿನಲ್ಲಿ 35 ಜನರಂತೆ ವಿದ್ಯಾರ್ಥಿಗಳು ಕುಳಿತುಕೊಳ್ಳಲು ಸಾಧ್ಯವಾದರೆ ಎಷ್ಟು ಬಸ್ಸುಗಳು ಬೇಕಾಗುತ್ತದೆ?
17. ಒಂದು ನೀರಿನ ಟ್ಯಾಂಕಿನಲ್ಲಿ 500 ಲೀಟರ್ ನೀರಿದೆ. ಈ ನೀರಿನಿಂದ 22 ಲೀಟರ್ ಕ್ಯಾನ್‌ಗಳನ್ನು ಎಷ್ಟು ತುಂಬಬಹುದು? ಟ್ಯಾಂಕಿನಲ್ಲಿ ಉಳಿದಿರುವ ನೀರು ಎಷ್ಟಾಗಿರುತ್ತದೆ?




SCERT TELANGANA


# 8 ಇದು ಎಷ್ಟು ಉದ್ದ ಇದೆ?

ನೀವು ಸ್ಕೇಲನ್ನು ಉಪಯೋಗಿಸಿ ಪೆನ್ಸಿಲ್‌ನ ಉದ್ದಗಳನ್ನು 3ನೇ ತರಗತಿಯಲ್ಲಿ ಅಳೆದಿರುವಿರಿ. ನಿಮ್ಮ ಹತ್ತಿರ ಇರುವ ಸ್ಕೇಲನ್ನು ನೋಡಿರಿ. ಆ ಸ್ಕೇಲ್‌ನ ಮೇಲೆ ಎಷ್ಟು ಸೆಂಟಿಮೀಟರುಗಳನ್ನು ಗುರ್ತಿಸಲಾಗಿದೆ? ಸೆಂಟಿಮೀಟರ್‌ಗಳನ್ನು, ಸೆಂ.ಮೀ ಅಥವಾ cm ಎಂದು ಸಹ ಬರೆಯುತ್ತೇವೆಂದು ನೀವು ಕಲಿತಿದ್ದೀರಲ್ಲವೇ!


ನಿಮ್ಮ ಕೈಯಲ್ಲಿರುವ ಪೆನ್ಸಿಲ್ ಅಥವಾ ಚಾಕ್‌ಪೀಸ್ ಎಷ್ಟು ಸೆಂಟಿಮೀಟರ್‌ಗಳ ಉದ್ದ ಇದೆ? ಅದನ್ನು ಸ್ಕೇಲ್‌ನ ಪಕ್ಕದಲ್ಲಿಟ್ಟು ಅದರ ಉದ್ದವನ್ನು ಅಳೆಯಿರಿ.




ಕೆಳಗೆ ಎಳೆದಿರುವ ವಸ್ತುಗಳ ಉದ್ದ ಎಷ್ಟು?




ಇವೇ ವಸ್ತುಗಳ ಉದ್ದವನ್ನು ಈ ರೀತಿ ಅಳೆಯೋಣ.





ಎರಡನೇ ಬಗೆಯಲ್ಲಿ ಉದ್ದಗಳನ್ನು ಅಳೆಯುವುದು ಸುಲಭವಾಗಿದೆಯೇ? ಆದರೆ ಸುಲಭವಾಗಿ ಇದೆಯೆಂದು ನೀನೇಕೆ ಭಾವಿಸುವೆ?

SCERT TELANGANA

**ಉದ್ದಗಳನ್ನು ಅಂದಾಜಿಸುವುದು – ಅಳೆದು ನೋಡಿರಿ.**



ನಿನ್ನ ಹೆಬ್ಬೆರಳಿನ ಉದ್ದವೆಷ್ಟೆಂದುಕೊಂಡಿರುವೆ? ___________ ಸೆಂ.ಮೀ.



ಈಗ ನಿನ್ನ ಹೆಬ್ಬೆರಳಿನ ಉದ್ದ ಅಳೆಯಿರಿ. ನಿನ್ನ ಹೆಬ್ಬೆರಳಿನ ಉದ್ದ ಎಷ್ಟು? ___________ ಸೆಂ.ಮೀ.



ನಿನ್ನ ಕಿರುಬೆರಳಿನ ಉದ್ದವೆಷ್ಟೆಂದುಕೊಂಡಿರುವೆ?___________ ಸೆಂ.ಮೀ.

ಈಗ ನಿನ್ನ ಕಿರುಬೆರಳಿನ ಉದ್ದವನ್ನು ಅಳೆಯಿರಿ. ಅಳೆಯುವುದರ ಮೂಲಕ ಕಿರುಬೆರಳಿನ ಉದ್ದವೆಷ್ಟು? ___________ ಸೆಂ.ಮೀ.



ನಿನ್ನ ಅಂಗೈ ಉದ್ದವೆಷ್ಟೆಂದುಕೊಂಡಿರುವೆ? ___________ ಸೆಂ.ಮೀ.

ಈಗ ಅಳೆದು ನಿನ್ನ ಅಂಗೈನ ಉದ್ದ ಎಷ್ಟೋ ಬರೆಯಿರಿ ___________ ಸೆಂ.ಮೀ.





ನಿನ್ನ ಮಣಿಕಟ್ಟಿನ ಅಳತೆ ಎಷ್ಟೆಂದುಕೊಳ್ಳುವೆ ___________ ಸೆಂ.ಮೀ.

ಈಗ ಚಿತ್ರದಲ್ಲಿ ತೋರಿಸಿದಂತೆ ಈ ವಿಧವಾಗಿ ದಾರದಿಂದ ಅಳೆದು ಅಳತೆಯನ್ನು ಬರೆಯಿರಿ.

___________ ಸೆಂ.ಮೀ.

**ಇವು ಮಾಡಿರಿ**

1. ಒಂದು ಸೆಂಟಿಮೀಟರ್‌ಗಿಂತ ಕಡಿಮೆ ಇರುವ 5 ವಸ್ತುಗಳ ಹೆಸರುಗಳನ್ನು ಬರೆಯಿರಿ.

___________________________________________

2. ಅಂದಾಜು 15 ಸೆಂ.ಮೀ. ಉದ್ದವಿರುವ ಯಾವುದಾದರೂ 3 ವಸ್ತುಗಳ ಹೆಸರುಗಳನ್ನು ಬರೆಯಿರಿ.

___________________________________________

SCERT TELANGANA

3. ಕೆಳಗೆ ಕೊಟ್ಟಿರುವ ವಸ್ತುಗಳ ಉದ್ದಗಳನ್ನು ಅಂದಾಜಿಸಿ ಬರೆಯಿರಿ. ನಂತರ ಸ್ಕೇಲ್ ನಿಂದ ಅವುಗಳ ಉದ್ದಗಳನ್ನು ಅಳೆಯಿರಿ. ಈ ಎರಡು ಅಳತೆಗಳನ್ನು ಪಟ್ಟಿಯಲ್ಲಿ ನಮೋದಿಸಿ.

| ವಸ್ತು | ಅಂದಾಜಿಸಿದ ಉದ್ದ | ಅಳೆದಾಗ ಬಂದ ಉದ್ದ |
|---|---|---|
| ಚಾಕ್‌ಪೀಸ್ | | |
| ನಿನ್ನ ಪೆನ್ಸಿಲ್ | | |
| ಬಾಚಣಿಕೆ | | |
| ರಬ್ಬರು | | |
| ಹಲಗೆ (ಸ್ಲೇಟ್) | | |
| ಗಣಿತ ಪುಸ್ತಕ | | |
| ನೋಟ್ ಪುಸ್ತಕ | | |

4. ಇರುವೆಗೆ ಆಹಾರವನ್ನು ಸೇರಲು ಅತಿ ಕಡಿಮೆ ಇರುವ ದೂರವನ್ನು ಕಂಡುಹಿಡಿಯಲು ಸಹಕರಿಸಿ.




(ಅ) ಮೇಲಿನ ನಾಲ್ಕು ದಾರಿಗಳಲ್ಲಿ ಇರುವೆ ಆಹಾರವನ್ನು ಸೇರಲು ಅತಿ ಕಡಿಮೆ ಇರುವ ದೂರ ಇರುವ ದಾರಿಯಾವುದು?

(ಆ) ಮೇಲಿನ ನಾಲ್ಕು ದಾರಿಗಳಿಗಿಂತ ಬೇರೆ ಯಾವುದಾದರೂ ಹತ್ತಿರದ ದಾರಿ ಇದೆಯಾ? ಆದರೆ ಅದನ್ನು ಎಳೆಯಿರಿ.

**ನಿಮ್ಮ ಎತ್ತರಗಳನ್ನು ಅಳೆಯಿರಿ.**

ನಿಮ ಸ್ಕೇಲನ್ನು ಮತ್ತೊಂದು ಬಾರಿ ಪರಿಶೀಲಿಸಿ. ಅದರ ಮೇಲೆ ಒಂದು ಕಡೆ ಸೆಂಟಿಮೀಟರ್‌ಗಳಿದ್ದರೆ ಮತ್ತೊಂದು ಕಡೆ ಇಂಚುಗಳಿವೆ.




(ಅ) ಒಂದು ಇಂಚು ಒಂದು ಸೆಂಟಿಮೀಟರ್‌ಗಿಂತ ದೊಡ್ಡದೇನಾ? ________


(ಆ) ಎಷ್ಟು ಸೆಂಟಿ ಮೀಟರ್‌ಗಳಾದರೆ ಒಂದು ಇಂಚ್ ಆಗುವುದು? ________

SCERT TELANGANA

ಈಗ ನಿಮ್ಮ ಸ್ನೇಹಿತರಲ್ಲಿ ಮೂವರ ಎತ್ತರಗಳನ್ನು ಸ್ಕೇಲು ಅಥವಾ ಅಳತೆ ಟೇಪನ್ನು ಉಪಯೋಗಿಸಿ ಸೆಂಟಿಮೀಟರ್‌ಗಳಲ್ಲಿ ಇಂಚುಗಳಲ್ಲಿ ಅಳೆದು ಕೆಳಗಿನ ಪಟ್ಟಿಕೆಯಲ್ಲಿ ನಮೋದಿಸಿ.




| ಸ್ನೇಹಿತನ ಹೆಸರು | ಎತ್ತರ (ಸೆಂ.ಮೀಗಳಲ್ಲಿ) | ಎತ್ತರ (ಇಂಚುಗಳಲ್ಲಿ) |
|---|---|---|
| | | |
| | | |
| | | |
| | | |



## ಕಡಿಮೆ ಉದ್ದಗಳಿಂದ ಹೆಚ್ಚು ಉದ್ದಗಳು

ತರಗತಿ ಕೊಠಡಿಯ ಉದ್ದವನ್ನು ಸೆಂಟಿಮೀಟರ್‌ಗಳಲ್ಲಿ ಅಳೆಯುವುದು ಸುಲಭವೇ? ಹಾಗೆ ನೀವು ಧರಿಸಿದ ಬಟ್ಟೆಗಳನ್ನು ಹೊಲಿಯಲು ಉಪಯೋಗಿಸುವ ಬಟ್ಟೆಗಳ ಉದ್ದಗಳನ್ನು ಹೇಗೆ ಅಳೆಯುವರು?

ಹೆಚ್ಚು ಉದ್ದಗಳನ್ನು ಸುಲಭವಾಗಿ ಅಳೆಯಲು ನಮಗೆ ದೊಡ್ಡ ಪ್ರಮಾಣಗಳು ಅವಶ್ಯಕ.
ಷಾನು ಬಟ್ಟೆಯನ್ನು ತೆಗೆದುಕೊಂಡು ದರ್ಜಿ ಹತ್ತಿರ ಹೋದಳು.




ಷಾನು ತಂದ ಬಟ್ಟೆಯನ್ನು ದರ್ಜಿ ತನ್ನ ಹತ್ತಿರ ಇರುವ ಅಳತೆಪಟ್ಟಿಯನ್ನು ಉಪಯೋಗಿಸಿ ಅಳೆದನು. ಅಳತೆಪಟ್ಟಿಯನ್ನು ನೀವು ಯಾವಾಗಾದರೂ ನೋಡಿರುವಿರಾ? ಅದರ ಮೇಲೆ ಒಂದು ಕಡೆ ಸೆಂಟಿಮೀಟರ್‌ಗಳು ಮತ್ತೊಂದು ಕಡೆ ಇಂಚುಗಳು ಗುರ್ತಿಸಲ್ಪಟ್ಟಿರುತ್ತವೆ.

100ಸೆಂಟಿಮೀಟರ್‌ಗಳಾದರೆ ಒಂದು ಮೀಟರಾಗುತ್ತದೆ.

1 ಮೀಟರ್ (ಮೀ) = 100ಸೆಂಟಿಮೀಟರ್‌ಗಳು (ಸೆಂ.ಮೀ)

ನಿಮ್ಮ ಶಿಕ್ಷಕರನ್ನು ಒಂದು ಮೀಟರ್ ಇರುವ ಹಗ್ಗವನ್ನು ಕತ್ತರಿಸಿ ಕೊಡುವಂತೆ ಕೇಳಿ. ಇದರಿಂದ ಬಗೆಬಗೆಯ ಉದ್ದಗಳನ್ನು ಅಳೆಯಿರಿ.

**ಚಟುವಟಿಕೆ :**

ಒಂದು ದಿನಪತ್ರಿಕೆಯನ್ನು ತೆಗೆದುಕೊಂಡು ಅದರ ಅಂಚುಗಳೊಂದಿಗೆ 20 ಸೆಂ.ಮೀ., 25 ಸೆಂ.ಮೀ. 50 ಸೆಂ.ಮೀ. ಮತ್ತು 1 ಮೀಟರು ಉದ್ದ ಇರುವ ಕಾಗದದ ತುಂಡುಗಳನ್ನು ಕತ್ತರಿಸಿ.

20 ಸೆಂ.ಮೀ. ಇರುವ ಕಾಗದದ ತುಂಡುಗಳು ಎಷ್ಟಾದರೆ ಒಂದು ಮೀಟರಾಗುವುದು? ______________

25 ಸೆಂ.ಮೀ ಇರುವ ಕಾಗದದ ತುಂಡುಗಳು ಎಷ್ಟಾದರೆ ಒಂದು ಮೀಟರಾಗುವುದು ? ______________

50 ಸೆಂ.ಮೀ. ಇರುವ ಕಾಗದದ ತುಂಡುಗಳು ಎಷ್ಟಾದರೆ ಒಂದು ಮೀಟರಾಗುವುದು? ______________

### ಇವು ಮೀಟರ್‌ಗಿಂತ ಉದ್ದವಾದವುಗಳೇನಾ?

ಕೆಳಗೆ ಕೊಟ್ಟಿರುವವು ಮೀಟರ್‌ಗಿಂತ ಹೆಚ್ಚು ಅಥವಾ ಮೀಟರ್‌ಗಿಂತ ಕಡಿಮೆಯೇನಾ ಅಂದಾಜಿಸಿ. ಪಟ್ಟಿಕೆಯಲ್ಲಿ ಟಿಕ್ ಮಾಡಿರಿ. ನಂತರ ಮೀಟರ್ ಹಗ್ಗದಿಂದ ಅಳೆಯಿರಿ. ಮೀಟರ್‌ಗಿಂತ ಕಡಿಮೆ ಉದ್ದಗಳನ್ನು ಅಳೆಯಲು ಸ್ಕೇಲನ್ನು ಉಪಯೋಗಿಸಿ.

| ವಸ್ತು | ಅಂದಾಜಿನ ಉದ್ದ | ಅಳತೆ ಮಾಡಿದಾಗಿನ ಉದ್ದ |
|---|---|---|
| ನಿಮ್ಮ ತರಗತಿಯಲ್ಲಿನ ಕಪ್ಪುಹಲಗೆಯ ಉದ್ದ | ಮೀಟರ್‌ಗಿಂತ ಹೆಚ್ಚು/ ಮೀಟರ್‌ಗಿಂತ ಕಡಿಮೆ | |
| ನಿಮ್ಮ ತರಗತಿಯಲ್ಲಿನ ಕಪ್ಪುಹಲಗೆಯ ಆಗಲ | ಮೀಟರ್‌ಗಿಂತ ಹೆಚ್ಚು/ ಮೀಟರ್‌ಗಿಂತ ಕಡಿಮೆ | |
| ನಿಮ್ಮ ಶಿಕ್ಷಕರೆದುರು ಇರುವ ಮೇಜಿನ ಉದ್ದ | ಮೀಟರ್‌ಗಿಂತ ಹೆಚ್ಚು/ ಮೀಟರ್‌ಗಿಂತ ಕಡಿಮೆ | |
| ನಿಮ್ಮ ಶಿಕ್ಷಕರೆದುರು ಇರುವ ಮೇಜಿನ ಅಗಲ | ಮೀಟರ್‌ಗಿಂತ ಹೆಚ್ಚು/ ಮೀಟರ್‌ಗಿಂತ ಕಡಿಮೆ | |
| ನಿಮ್ಮ ತರಗತಿಯ ಕಿಟಕಿಯ ಉದ್ದ | ಮೀಟರ್‌ಗಿಂತ ಹೆಚ್ಚು/ ಮೀಟರ್‌ಗಿಂತ ಕಡಿಮೆ | |
| ನಿಮ್ಮ ತರಗತಿಯ ಕಿಟಕಿಯ ಅಗಲ | ಮೀಟರ್‌ಗಿಂತ ಹೆಚ್ಚು/ ಮೀಟರ್‌ಗಿಂತ ಕಡಿಮೆ | |

**ಇವನ್ನು ಮಾಡಿರಿ.**

1. ಅಂದಾಜು ಮೀಟರ್ ಉದ್ದವಿರುವ 5 ವಸ್ತುಗಳ ಹೆಸರುಗಳನ್ನು ತಿಳಿಸಿ.
2. ನಿಮ್ಮ ತರಗತಿಯ ಕೊಠಡಿಯ ಉದ್ದವೆಷ್ಟು? ಅಗಲವೆಷ್ಟು? ಅಂದಾಜಿಸಿ ಹೇಳಿ. ಮೀಟರ್ ಹಗ್ಗದ ಸಹಾಯದಿಂದ ಅಳೆದು ನಿಮ್ಮ ಅಂದಾಜನ್ನು ತಾಳೆನೋಡಿ.

SCERT TELANGANA

3. ಕೆಳಗಿನವುಗಳಲ್ಲಿ ಯಾವುದನ್ನು ಮೀಟರ್‌ಗಳಲ್ಲಿ ಯಾವುವನ್ನು ಸೆಂಟಿಮೀಟರ್‌ಗಳಲ್ಲಿ ಅಳೆಯುತ್ತಾರೆ.




__________



__________




__________



__________

**ಕ್ರೀಡಾ ದಿನೋತ್ಸವ:**

ಕ್ರೀಡಾ ದಿನೋತ್ಸವ ಅಂಗವಾಗಿ ಶಾಲೆಯಲ್ಲಿ 4 ನೇ ತರಗತಿ ವಿದ್ಯಾರ್ಥಿಗಳಿಗೆ 100 ಮೀಟರ್‌ಗಳ ಓಟ ಸ್ಪರ್ಧೆಯನ್ನು ನಿರ್ವಹಿಸಲಾಗಿದೆ. ಗಮ್ಯ ಸ್ಥಾನದಲ್ಲಿ ಎಳೆದ ಗೆರೆಗೆ ಸರಸ್ವತಿ ಅತಿ ಹತ್ತಿರದಲ್ಲಿ ಇದ್ದಾಳೆ. ಆಕೆ ಗಮ್ಯ ಸ್ಥಾನಕ್ಕೆ 6 ಮೀಟರ್‌ಗಳ ದೂರದಲ್ಲಿ ಇದ್ದಾಳೆ. ದುರ್ಗ ಎರಡನೇ ಸ್ಥಾನ ಮತ್ತು ಮಹದೇವ ಮೂರನೇ ಸ್ಥಾನದಲ್ಲಿ ಇದ್ದಾನೆ.




**ಅಂದಾಜಿಸಿ :**


(ಅ) ದುರ್ಗ, ಸರಸ್ವತಿಗೆ ಎಷ್ಟು ಮೀಟರ್ ದೂರದಲ್ಲಿ ಇರಬಹುದು? ಮಹದೇವ್ ಗಮ್ಯ ಸ್ಥಾನಕ್ಕೆ ಇವನು ಎಷ್ಟು ದೂರದಲ್ಲಿ ಇರಬಹುದು?

(ಆ) ಒಬ್ಬರ ನಿವಾಸಕ್ಕೆ ಮತ್ತೊಬ್ಬರ ನಿವಾಸ ಎಷ್ಟು ದೂರ?

SCERT TELANGANA

**ರಾಮು ಮತ್ತು ಜಾರ್ಜ್‌ರ ನಿವಾಸಗಳು ಶಾಲೆಯ ಇಬ್ಭಾಗದಲ್ಲಿ ಇವೆ.**

ರಾಮು ನಿವಾಸಕ್ಕೆ, ಜಾರ್ಜ್ ನಿವಾಸಕ್ಕೆ ಮಧ್ಯೆ ಇರುವ ದೂರವೆಷ್ಟು?




(ಅ) ರಾಮು ನಿವಾಸಕ್ಕೆ, ಜಾರ್ಜ್ ನಿವಾಸಕ್ಕೆ ಮಧ್ಯೆ ಇರುವ ದೂರವೆಷ್ಟು?

**ಜಾವೆಲಿನ್ ತ್ರೋ:**

2012 ಒಲಂಪಿಕ್ ಕ್ರೀಡೆಗಳು ಲಂಡನ್‌ನಲ್ಲಿ ನಡೆದವು. ಜಾವೆಲಿನ್ ತ್ರೋ ಮಹಿಳೆಯರ ವಿಭಾಗದಲ್ಲಿ ಬಂಗಾರ, ಬೆಳ್ಳಿ ಮತ್ತು ಕಂಚಿನ ಪದಕಗಳ ವಿಜೇತರ ವಿವರಗಳನ್ನು ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

| ಪದಕ | ವಿಜೇತರ ಹೆಸರು | ದೇಶ | ಜಾವೆಲಿನ್ ಎಸೆದ ದೂರ |
|---|---|---|---|
| ಬಂಗಾರ | ಬಾರ್ಬ್ಬಾರಾಸ್ವಾತಕೋವಾ | ಜೆಕೋಸ್ಲೋವೇಕಿಯಾ | 69 ಮೀ 55 ಸೆಂ.ಮೀ |
| ಬೆಳ್ಳಿ | ಕ್ರಿಸ್ಟಿನಾ ಒಬರ್ ಫೋಲ್ | ಜರ್ಮನಿ | 65 ಮೀ. 16 ಸೆಂ.ಮೀ |
| ಕಂಚು | ಲಿಂಡಾಸ್ಟಾಲ್ | ಜರ್ಮನಿ | 64 ಮೀ. 91 ಸೆಂ.ಮೀ |

(ಅ) ಜಾವೆಲಿನ್ ಎಸೆತದ ದೂರದಲ್ಲಿ ಬಾರ್ಬ್ಬಾರಾಗೆ ಕ್ರಿಸ್ಟಿನಾಗೆ ಇರುವ ವ್ಯತ್ಯಾಸ ಎಷ್ಟು?

(ಆ) ಜಾವೆಲಿನ್ ಎಸೆದ ದೂರದಲ್ಲಿ ಬಾರ್ಬ್ಬಾರಾಗೆ ಲಿಂಡಾಗೆ ಇರುವ ವ್ಯತ್ಯಾಸ ಎಷ್ಟು?

(ಇ) ಬಾರ್ಬ್ಬಾರಾ ಸ್ವಾತಕೋವ್ ಜಾವೆಲಿನ್ ಎಸೆತದಲ್ಲಿ 72 ಮೀ., 28 ಸೆಂ.ಮೀ ದೂರ ಎಸೆದು ಪ್ರಪಂಚ ದಾಖಲೆ ಸ್ಥಾಪಿಸಿದ್ದರು. ಬಾರ್ಬ್ಬಾರಾ ತಾನೇ ದಾಖಲಿಸಿದ ಜಾವೆಲಿನ್ ಎಸೆತ ಪ್ರಪಂಚ ದಾಖಲೆಗಿಂತ, ಲಂಡನ್ ಒಲಪಿಂಕ್‌ನಲ್ಲಿ ಎಸೆದ ದೂರಕ್ಕಿಂತ ಎಷ್ಟು ಕಡಿಮೆ ಇದೆ?



SCERT TELANGANA

## ಪ್ರಯತ್ನಿಸಿ :

**ಚಾರ್ಮಿನಾರ್ ಎತ್ತರ ಎಷ್ಟು?**



ಹೈದರಾಬಾದ್‌ನಲ್ಲಿರುವ ಚಾರಿತ್ರಾತ್ಮಕ ಕಟ್ಟಡ ಚಾರ್ಮಿನಾರ್‌ನ ಎತ್ತರ 56 ಮೀಟರು? ನಿಮ್ಮ ಶಾಲೆ ಕೊಠಡಿಯ ಎತ್ತರ ಎಷ್ಟು?
ನಿಮ್ಮ ಶಾಲೆಯ ಕೊಠಡಿಗಳನ್ನು ಒಂದರ ಮೇಲೊಂದು ಇರಿಸಿದರೆ, ಎಷ್ಟು ಕೊಠಡಿಗಳ ಎತ್ತರ ಚಾರ್ಮಿನಾರ್ ಎತ್ತರಕ್ಕೆ ಸಮಾನವಾಗುವುದು?

## ಅಭ್ಯಾಸ

1. ಅ) 4 ಮೀ. ರಿಬ್ಬನ್ = __________ ಸೆಂ.ಮೀ. ರಿಬ್ಬನ್

   ಆ) 9 ಮೀ ಪೈಪು = __________ ಸೆಂ.ಮೀ. ಪೈಪು

   ಇ) 450ಸೆಂ.ಮೀ. ಬಟ್ಟೆ = __________ ಮೀ __________ ಸೆಂ.ಮೀ. ಬಟ್ಟೆ.

   ಈ) 750 ಸೆಂ.ಮೀ. ಹಗ್ಗ = __________ ಮೀ __________ ಸೆಂ.ಮೀ. ಹಗ್ಗ.

2. ನಾನು ಅಂಗಡಿಗೆ ಹೋಗಿ 2 ಮೀ 50 ಸೆಂ.ಮೀ ಬಟ್ಟೆಯನ್ನು ಜುಬ್ಬ ಹೊಲಿಸಲು, 3 ಮೀ 75 ಸೆಂ.ಮೀ ಬಟ್ಟೆಯನ್ನು ಪೈಜಾಮಾ ಹೊಲಿಸಲು ಕೊಂಡೆನು. ಆದರೆ ನಾನು ಕೊಂಡ ಬಟ್ಟೆಯ ಒಟ್ಟು ಉದ್ದವೆಷ್ಟು?

3. ಧ್ವಜ ಸ್ಥಂಭದ ನೆರಳಿನ ಉದ್ದ ಬೆಳಿಗ್ಗೆ 8 ಗಂಟೆಗೆ 3 ಮೀಟರ್ 45 ಸೆಂ.ಮೀ. ಮಧ್ಯಾಹ್ನ ಒಂದು ಗಂಟೆಗೆ ಅದೇ ನೆರಳಿನ ಉದ್ದ 1 ಮೀಟರ್ 65 ಸೆಂ.ಮೀ.ಬೆಳಗಿನ ಮತ್ತು ಮಧ್ಯಾಹ್ನದ ಸಮಯಗಳಲ್ಲಿ ಉಂಟಾದ ಧ್ವಜಸ್ಥಂಭದ ನೆರಳಿನ ಉದ್ದಗಳಲ್ಲಿ ವ್ಯತ್ಯಾಸ ಎಷ್ಟು?

4. ರಯನ್ ಮನೆಯ ಬಾಗಿಲಿಗೆ, ಕಿಟಕಿಗಳಿಗೆ ಪರದೆಗಳನ್ನು ಹೊಲಿಸಲು 12 ಮೀ 50 ಸೆಂ.ಮೀ ಮಂಗಳಗಿರಿ ಕಾಟನ್, 10 ಮೀ. 25 ಸೆಂ.ಮೀ. ಪೋಚಂಪಲ್ಲಿ ಕಾಟನ್ ಬಟ್ಟೆಯನ್ನು ಒಂದು ಅಂಗಡಿಯಲ್ಲಿ ಕೊಂಡನು. ರಮನ್ ಕೊಂಡ ಒಟ್ಟು ಬಟ್ಟೆಯ ಉದ್ದ ಎಷ್ಟು?

5. ಒಬ್ಬ ದರ್ಜಿಯ ಹತ್ತಿರ 4 ಮೀ. 45 ಸೆಂ.ಮೀ ಬಟ್ಟೆ ಇದೆ. ಅವನು ಅದರಿಂದ 3 ಮೀ 95 ಸೆಂ.ಮೀ. ಬಟ್ಟೆಯನ್ನು ಕತ್ತರಿಸಿ ಒಂದು ಜೊತೆ ಪ್ಯಾಂಟುಗಳನ್ನು ಹೊಲಿದನು. ದರ್ಜಿಯ ಹತ್ತಿರ ಇನ್ನೂ ಉಳಿದ ಬಟ್ಟೆಯ ಉದ್ದ ಎಷ್ಟು?

6. ಪ್ರಸಾದು 20 ಮೀಟರ್‌ಗಳ ಉದ್ದದ ಹಗ್ಗಕೊಂಡನು. ಅದರಿಂದ 12 ಮೀ 30 ಸೆಂ.ಮೀ. ಇರುವ ಒಂದು ತುಂಡನ್ನು 7 ಮೀ 45 ಸೆಂ.ಮೀ ಇರುವ ಮತ್ತೊಂದು ತುಂಡನ್ನು ಕತ್ತರಿಸಿ ಬಟ್ಟೆಗಳು ಒಣಗಿಸುವ ದಾರಗಳಾಗಿ ಕಟ್ಟಿದನು. ಅವನು ಉಪಯೋಗಿಸಿದ ಹಗ್ಗದ ಉದ್ದ ಎಷ್ಟು? ಇನ್ನು ಎಷ್ಟು ಉದ್ದದ ಹಗ್ಗ ಉಳಿದಿದೆ?

7. ಒಬ್ಬ ಬಟ್ಟೆಗಳ ವ್ಯಾಪಾರಿ 140 ಮೀ ಉದ್ದವುಳ್ಳ ಪೋಚಂಪಲ್ಲಿ ಕಾಟನ್ ಕೊಂಡನು. ಅದರಿಂದ 46 ಮೀ. 85 ಸೆಂ.ಮೀ. ಬಟ್ಟೆಯನ್ನು ಮಾರಿದರೆ, ಇನ್ನೂ ಉಳಿದ ಬಟ್ಟೆ ಎಷ್ಟು?

SCERT TELANGANA

8. ಶಾಲೆಯ ಮುಖ್ಯೋಪಾಧ್ಯಾಯಿನಿ ಜಯ 18 ಮೀಟರ್‌ಗಳ ರಿಬ್ಬನ್ ಕೊಂಡರು. ಅವರು ಒಬ್ಬೊಬ್ಬ ವಿದ್ಯಾರ್ಥಿನಿಗೆ 25 ಸೆಂ.ಮೀ ಉದ್ದದ ರಿಬ್ಬನ್‌ನನ್ನು ಕೊಡಲು ನಿಶ್ಚಯಿಸಿದರು. ಅವರು ಒಟ್ಟು ಎಷ್ಟು ವಿದ್ಯಾರ್ಥಿಗಳಿಗೆ ರಿಬ್ಬನ್ ಹಂಚಬಲ್ಲರು?

9. ಷಾಟ್‌ಪುಟ್

ಲಂಡನ್‌ನಲ್ಲಿ ನಡೆದ ಒಲಂಪಿಕ್ಸ್, ಕ್ರೀಡೆಯಲ್ಲಿ ಷಾಟ್‌ಪುಟ್ ಮಹಿಳೆ ವಿಭಾಗದಲ್ಲಿ ಬಂಗಾರ, ಬೆಳ್ಳಿ, ಕಂಚಿನ ಪದಕಗಳನ್ನು ಪಡೆದವರ ವಿವರಗಳನ್ನು ಕೆಳಗೆ ಕೊಡಲಾಗಿದೆ.



| ಪದಕ | ವಿಜೇತರ ಹೆಸರು | ದೇಶ | ಷಾಟ್‌ಪುಟ್ ಎಸೆದ ದೂರ |
|---|---|---|---|
| ಬಂಗಾರ | ವಾಲರೀ ಆಡಮ್ಸ್ | ನ್ಯೂಜಿಲ್ಯಾಂಡ್ | 20 ಮೀ 70 ಸೆಂ.ಮೀ |
| ಬೆಳ್ಳಿ | ಯೆರ್ಜಿನಿಯಾ ಕೋಲೋಡ್ಕೊ | ಜರ್ಮನಿ | 20 ಮೀ 48 ಸೆಂ.ಮೀ |
| ಕಂಚು | ಗಾಂಗ್ ಲಿಜಿಯಾವೋ | ಜರ್ಮನಿ | 20 ಮೀ 22 ಸೆಂ.ಮೀ |

(ಅ) ಷಾಟ್‌ಪುಟ್ ಎಸೆದ ದೂರದಲ್ಲಿ ವಾಲರೀ ಮತ್ತು ಗಾಂಗ್‌ರ ಮಧ್ಯ ಇರುವ ವ್ಯತ್ಯಾಸವೆಷ್ಟು?

(ಆ) ಈ ಆಟದಲ್ಲಿ ಭಾಗವಹಿಸಲು ಷಾಟ್‌ಪುಟ್‌ನ್ನು ಕನಿಷ್ಠ 18 ಮೀ 90 ಸೆಂ.ಮೀ ದೂರದ ಎಸೆತವನ್ನು ಅರ್ಹತೆಯನ್ನಾಗಿ ನಿರ್ಣಯಿಸಿದ್ದಾರೆ. ಆದರೆ ವಾಲರೀ ಎಷ್ಟು ಹೆಚ್ಚು ದೂರ ಷಾಟ್‌ಪುಟ್‌ನ್ನು ಎಸೆದರೆ ಅದಕ್ಕೆ ಅರ್ಹಳಾಗುತ್ತಾಳೆ ?

(ಇ) ಷಾಟ್‌ಪುಟ್ ಎಸೆತದಲ್ಲಿ ಪ್ರಪಂಚ ದಾಖಲೆ ದೂರ 22 ಮೀ 63 ಸೆಂ.ಮೀ. ಇದನ್ನು ನಾಟಾಲಿಯಾ ಲಿಸೋವ್‌ಸ್ಕಯಾ ದಾಖಲಿಸಿದ್ದಾರೆ. ಪ್ರಪಂಚ ದಾಖಲೆಗಿಂತ ಯೆರ್ಜಿನಿಯಾ ಕೋಲೋಡ್ಕೊ ಎಸೆದ ದೂರ ಎಷ್ಟು ಕಡಿಮೆ?

SCERT TELANGANA

# 9 ಇದರ ತೂಕವೆಷ್ಟು?

ನೀನು ಯಾವಾಗಲಾದರೂ ಅಕ್ಕಿಯ ಚೀಲ ಎತ್ತಿ ನೋಡಿರುವೆಯಾ? ನಿನಗೆ ಎತ್ತಲು ಕಷ್ಟವಾಯಿತೇ? ಏಕೆ?

ಅಕ್ಕಿಯ ಚೀಲ ಅಥವಾ ಅಕ್ಕಿಯ ಪ್ಯಾಕೆಟ್‌ಗಳಲ್ಲಿ ಯಾವುದು ಹೆಚ್ಚು ತೂಕವಿರುತ್ತದೆ?

ಅಕ್ಕಿಯ ಚೀಲ ಎಷ್ಟು ತೂಕ ಇರುತ್ತದೆ ಎಂದು ಅಂದುಕೊಳ್ಳುವೇ?







ನಾವು 3ನೇ ತರಗತಿಯಲ್ಲಿ ತೂಕವನ್ನು ಕಿಲೋಗ್ರಾಂಗಳಲ್ಲಿ ಅಳೆಯುವುದನ್ನು ತಿಳಿದುಕೊಂಡಿದ್ದೇವೆ. ಹಾಗೆ ಕಿಲೋಗ್ರಾಂನ್ನು ಕಿ.ಗ್ರಾಂ. ಎಂದು ಸಹ ಬರೆಯುತ್ತೇವೆಂದು ತಿಳಿದುಕೊಂಡಿದ್ದೇವೆ.






ನಿನಗೆ ಕಿರಾಣಿ ಅಂಗಡಿಯಲ್ಲಿ 1 ಕಿ.ಗ್ರಾಂ. 2 ಕಿ.ಗ್ರಾಂ., 5 ಕಿ.ಗ್ರಾಂ., 10 ಕಿ.ಗ್ರಾಂ. ತೂಕದ ಕಲ್ಲುಗಳು ಕಾಣಿಸುತ್ತವೆ. ಗೋಧಿ , ಮೆಕ್ಕೆಜೋಳ ಮುಂತಾದವುಗಳ ಹಿಟ್ಟುಮಾಡುವ ಗಿರಣಿಗಳಲ್ಲಿ ಅಥವಾ ಹಾಸಿಗೆ, ತಲೆದಿಂಬು ತಯಾರಿಸುವಲ್ಲಿ 50 ಕಿ.ಗ್ರಾಂ., 20 ಕಿ.ಗ್ರಾಂನಂತಹ ದೊಡ್ಡ ತೂಕದ ಕಲ್ಲುಗಳು ಕಂಡುಬರುತ್ತವೆ.ಈ ಅಂಗಡಿಯಲ್ಲಿ ದೊಡ್ಡ ತೂಕದ ಕಲ್ಲುಗಳ ಅವಶ್ಯಕತೆ ಏನು? ಹೇಳಬಲ್ಲಿರಾ?

## ಪ್ರಯತ್ನಿಸಿ

ನಿನಗೆ ಸಾಧ್ಯವಾದಷ್ಟು ತೂಕದ ಕಲ್ಲುಗಳನ್ನು ಕೈಯಲ್ಲಿ ತೆಗೆದುಕೊಂಡು ಅವುಗಳ ತೂಕ ಎಷ್ಟೋ ಗ್ರಹಿಸಿರಿ. ಹಾಗೆ ಪ್ಯಾಕೆಟ್‌ಗಳಲ್ಲಿ ಮರಳು ಅಥವಾ ಜೇಡಿಮಣ್ಣನ್ನು ತುಂಬಿ 1 ಕಿ.ಗ್ರಾಂ., 2ಕಿ.ಗ್ರಾಂ., 5 ಕಿ.ಗ್ರಾಂ. ಗಳ ತೂಕಗಳನ್ನು ನಿಮ್ಮ ಶಿಕ್ಷಕರ ಸಹಾಯದೊಂದಿಗೆ ತಯಾರಿಸಿ ಅವುಗಳನ್ನು ಎತ್ತಿ ನೋಡಿರಿ. ಅವು ಎಷ್ಟು ತೂಕ ಇರುವವೋ ತಿಳಿದುಕೊಳ್ಳಿರಿ.

SCERT TELANGANA

**ಇವುಗಳ ತೂಕವನ್ನು ಅಂದಾಜಿಸೋಣ !**

1. 1 ಕಿ.ಗ್ರಾಂಗಿಂತ ಹೆಚ್ಚು ತೂಕ ಇರುವ ವಸ್ತುಗಳಿಗೆ ಸೊನ್ನೆಯಿಂದ ◯ ಸುತ್ತಿರಿ.





2. ಸುಮಾರಾಗಿ 10 ಕಿಲೋ ಗ್ರಾಂ ತೂಕ ಇರುವ ವಸ್ತುಗಳ ಸುತ್ತ ಸೊನ್ನೆ ◯ ಯಿಂದ ಸುತ್ತಿರಿ.



SCERT TELANGANA

3. ಕೆಳಗಿನವುಗಳ ತೂಕಗಳನ್ನು ಅಂದಾಜಿಸಿ ಸರಿಯಾದುದವುಗಳೊಂದಿಗೆ ಹೊಂದಿಸಿ ಬರೆಯಿರಿ.



1 ಕಿ.ಗ್ರಾಂ. ಗಿಂತ ಕಡಿಮೆ



15 ಕಿ.ಗ್ರಾಂ



1000 ಕಿ.ಗ್ರಾಂ ಗಿಂತ ಹೆಚ್ಚು



300 ಕಿ.ಗ್ರಾಂ



30 ಕಿ.ಗ್ರಾಂ

SCERT TELANGANA

## ಈ ಟ್ರಕ್‌ನಲ್ಲಿರುವ ತೂಕ ಎಷ್ಟು?

ರಾಜೇಂದ್ರ ಮತ್ತು ಪದ್ಮ ವಿಶಾಖಪಟ್ಟಣಂ ನಿಂದ ಹೈದರಾಬಾದ್‌ಗೆ ತಮ್ಮ ನಿವಾಸವನ್ನು ಬದಲಾಯಿಸುತ್ತಾರೆ. ಅವರ ಸಾಮಾನುಗಳನ್ನು ಟ್ರಕ್‌ನಲ್ಲಿ ತುಂಬಿದರು. ಒಂದೊಂದು ಸಾಮಾನಿನ ತೂಕ ಕೆಳಗೆ ಪಟ್ಟಿಯಲ್ಲಿ ಕೊಡಲಾಗಿದೆ.



| ಸಾಮಾನು | ತೂಕ |
|---|---|
| ಮಂಚ | 45 ಕಿ.ಗ್ರಾಂ. |
| ರಿಫ್ರಿಜಿರೇಟರ್ | 60 ಕಿ.ಗ್ರಾಂ |
| ಟಿ.ವಿ | 15 ಕಿ.ಗ್ರಾಂ |
| ಅಡಿಗೆ ಪಾತ್ರೆಗಳು | 10 ಕಿ.ಗ್ರಾಂ |
| 3 ಸೂಟ್‌ಕೇಸುಗಳು | 60 ಕಿ.ಗ್ರಾಂ |
| ಟೇಬಲ್ | 10 ಕಿ.ಗ್ರಾಂ |
| 3 ಕುರ್ಚಿಗಳು | 15 ಕಿ.ಗ್ರಾಂ |
| ಅಲ್ಮಾರಾ | 30 ಕಿ.ಗ್ರಾಂ |

(ಅ) ಟ್ರಕ್‌ನಲ್ಲಿರುವ ವಸ್ತುಗಳ ಒಟ್ಟು ತೂಕವೆಷ್ಟು? ____________

(ಆ) ರಾಜೇಂದ್ರ, ಪದ್ಮ ಒಂದು ಕಿಲೋ ಗ್ರಾಂ. ಸಾಮಾನಿಗೆ ₹ 20ರಂತೆ ಕೊಟ್ಟರೆ. ಅವರು ಒಟ್ಟು ಎಷ್ಟು ಹಣವನ್ನು ಟ್ರಕ್‌ನ ಕಂಪನಿಯವರಿಗೆ ಕೊಡಬೇಕು ? ____________

SCERT TELANGANA

## ಈ ಹಾಸಿಗೆಗಳು ಮತ್ತು ತಲೆದಿಂಬುಗಳ ತೂಕವೆಷ್ಟು?

ಸುಲ್ತಾನಾ ಹಾಸಿಗೆಗಳು, ತಲೆದಿಂಬುಗಳನ್ನು ಹತ್ತಿಯಿಂದ ತುಂಬಿ ತಯಾರಿಸುವಳು ಆಕೆಯ ಅಂಗಡಿಯಲ್ಲಿ 145 ಕಿ.ಗ್ರಾಂ. ಹತ್ತಿ ಇದೆ.



ರಘು ಆಕೆಯನ್ನು ಒಂದು ಹಾಸಿಗೆ, ಎರಡು ತಲೆ ದಿಂಬುಗಳನ್ನು ತಯಾರಿಸುವಂತೆ ಕೇಳಿದನು. ಸುಲ್ತಾನಾ ಹಾಸಿಗೆಗಾಗಿ 20 ಕಿ.ಗ್ರಾಂ. ಹತ್ತಿಯನ್ನು ಒಂದೊಂದು ತಲೆದಿಂಬಿಗೆ 2 ಕಿ.ಗ್ರಾಂ. ಹತ್ತಿಯನ್ನು ಉಪಯೋಗಿಸಿದ್ದಾಳೆ.

(ಅ) ಹಾಸಿಗೆ, ತಲೆದಿಂಬುಗಳನ್ನು ತಯಾರಿಸಿದ ನಂತರ ಇನ್ನೂ ಸುಲ್ತಾನಾ ಹತ್ತಿರ ಎಷ್ಟು ಹತ್ತಿ ಉಳಿದಿದೆ? ______

(ಆ) ಆಕೆಯ ಹತ್ತಿರ ಉಳಿದ ಹತ್ತಿಯಿಂದ ಇಂತಹ ಹಾಸಿಗೆಗಳನ್ನು ಸುಲ್ತಾನಾ ಇನ್ನೂ ಎಷ್ಟು ತಯಾರು ಮಾಡಬಹುದು? ______

(ಇ) ಪ್ರತಿ 1 ಕಿ.ಗ್ರಾಂ. ಹತ್ತಿ ಬಳಸಿದ್ದರಿಂದ ಸುಲ್ತಾನಾ ₹ 15 ಗಳನ್ನು ಕೂಲಿಯಾಗಿ ತೆಗೆದುಕೊಳ್ಳುವಳು. ಹಾಗೆ ₹ 200 ಗಳನ್ನು ಹಾಸಿಗೆ, ದಿಂಬುಗಳನ್ನು ಹೊಲಿಯಲು ಕೂಲಿಯಾಗಿ ತೆಗೆದುಕೊಳ್ಳುವಳು. ಇನ್ನೂ ₹ 125 ಗಳನ್ನು ಅವುಗಳಿಗೆ ಬಳಸಿದ ಬಟ್ಟೆಗಾಗಿ ತೆಗೆದುಕೊಳ್ಳುವಳು. ಆದರೆ ಒಟ್ಟು ಎಷ್ಟು ಹಣವನ್ನು ರಘು ಆಕೆಗೆ ಕೊಡಬೇಕು? ______

## ಕಿಲೋಗ್ರಾಮುಗಳಿಂದ ಗ್ರಾಮುಗಳಿಗೆ

ಒಂದು ಕಿಲೋ ಗ್ರಾಂಗಿಂತ ಕಡಿಮೆ ತೂಕ ಇರುವ ವಸ್ತುಗಳನ್ನು ಗ್ರಾಮುಗಳಲ್ಲಿ ಅಳೆಯುವರು. ನೀವು ನಿತ್ಯವಸರ ವಸ್ತುಗಳ ಅಂಗಡಿಯಲ್ಲಿ 500 ಗ್ರಾಂ., 200 ಗ್ರಾಂ., 100 ಗ್ರಾಂ., 50 ಗ್ರಾಂ., 20 ಗ್ರಾಂ., 10 ಗ್ರಾಂ. ತೂಕದ ಕಲ್ಲುಗಳನ್ನು ನೋಡಿರುತ್ತೀರಿ. ಕೆಲವನ್ನು ಕೆಳಗೆ ತೋರಿಸಲಾಗಿದೆ.



1 ಕಿ.ಗ್ರಾಂ = 1000 ಗ್ರಾಂ

ಈ ತೂಕದ ಕಲ್ಲುಗಳನ್ನು ಒಂದೊಂದು ತೆಗೆದುಕೊಳ್ಳಿರಿ. ಅವು ಎಷ್ಟು ತೂಕ ಇರುವವೋ ತಿಳಿದುಕೊಳ್ಳಿರಿ.

SCERT TELANGANA

**ಒಂದು ಪೆನ್ಸಿಲ್‌ನ ತೂಕ ಎಷ್ಟಿರಬಹುದೆಂದು ಭಾವಿಸಿರುವೆ?**



ಒಂದು ಪೆನ್ಸಿಲ್‌ನ ತೂಕ ಸುಮಾರು 3 ಗ್ರಾಮುಗಳಿರಬಹುದು.

**ಇವುಗಳ ತೂಕಗಳನ್ನು ಅಂದಾಜಿಸೋಣ**

1. ಕೆಳಗಿನ ವಸ್ತುಗಳಲ್ಲಿ ಪೆನ್ಸಿಲ್ ತೂಕಕ್ಕಿಂತ ಹೆಚ್ಚಾಗಿ ತೂಕ ಹೊಂದಿದೆ ವಸ್ತುಗಳಿಗೆ ಸೊನ್ನೆ ◯ ಸುತ್ತಿರಿ.

   (ಗುಂಡುಸೂಜಿ, ಚಮಚ, ಹುಣಸೆ ಬೀಜ, ಕಪ್, ಇರುವೆ, ಸೀಮೆಎಣ್ಣೆ.

**ಚಟುವಟಿಕೆ**

ಒಂದು ಕಿರಾಣಿ ಅಂಗಡಿಗೆ ಭೇಟಿನೀಡಿ. ವಸ್ತುಗಳ ಮೇಲೆ ಅವುಗಳ ತೂಕಗಳನ್ನು ಬರೆದಿರುವ ಪ್ಯಾಕೆಟ್‌ಗಳನ್ನು ಸಂಗ್ರಹಿಸಿ ಕೆಳಗಿನ ಪಟ್ಟಿಯನ್ನು ತುಂಬಿ.

| ಸುಮಾರು 50ಗ್ರಾಂ ತೂಕವನ್ನು ಹೊಂದಿರುವ ವಸ್ತುಗಳು | ಸುಮಾರು 150ಗ್ರಾಂ ತೂಕವನ್ನು ಹೊಂದಿರುವ ವಸ್ತುಗಳು | ಸುಮಾರು 250ಗ್ರಾಂ ತೂಕವನ್ನು ಹೊಂದಿರುವ ವಸ್ತುಗಳು | ಸುಮಾರು 500ಗ್ರಾಂ ತೂಕವನ್ನು ಹೊಂದಿರುವ ವಸ್ತುಗಳು | ಸುಮಾರು 1ಕಿ. ಗ್ರಾಂ ತೂಕವನ್ನು ಹೊಂದಿರುವ ವಸ್ತುಗಳು |
|---|---|---|---|---|
| | | | | |
| | | | | |
| | | | | |
| | | | | |

## ಮೇರಿ 1ಕಿ.ಗ್ರಾಂ ವಾಷಿಂಗ್ ಪೌಡರನ್ನು ಎಷ್ಟು ರೀತಿಯಲ್ಲಿ ಕೊಳ್ಳಬಹುದು ?

ಒಂದು ದಿನ ಮೇರಿ ವಾಷಿಂಗ್ ಪೌಡರ್ ಕೊಳ್ಳಲು ಅಂಗಡಿಗೆ ಹೋದಳು. ಅಂಗಡಿಯವನು ನನ್ನ ಬಳಿ 250ಗ್ರಾಂ., 100ಗ್ರಾಂ., 500ಗ್ರಾಂ ಪ್ಯಾಕೆಟ್‌ನಲ್ಲಿ ಮಾತ್ರವೇ ವಾಷಿಂಗ್ ಪೌಡರ್ ಇದೆ ಎಂದು ಮೇರಿಗೆ ಹೇಳಿದನು.




ಮೇರಿ, ಕೂಡಲೇ ತನ್ನ ಶಿಕ್ಷಕರು ಹೇಳಿದ್ದನ್ನು ನೆನಪಿಸಿಕೊಂಡಳು.

(ಅ) ಮೇರಿ 1 ಕಿ.ಗ್ರಾಂ. ವಾಷಿಂಗ್ ಪೌಡರ್‌ನ್ನು ಎಷ್ಟು ರೀತಿಯಲ್ಲಿ ಕೊಳ್ಳಬಹುದು?

(i) ನಿಮಗಾಗಿ ಒಂದು ವಿಧಾನವನ್ನು ತೋರಿಸಲಾಗಿದೆ.

1 ಕಿ.ಗ್ರಾಂ = 1000ಗ್ರಾಂ = 500 ಗ್ರಾಂ + 500 ಗ್ರಾಂ

ಮೇರಿ 500 ಗ್ರಾಂ ತೂಕವಿರುವ 2 ಪ್ಯಾಕೆಟ್‌ಗಳನ್ನು ಕೊಳ್ಳಬಹುದು.



SCERT TELANGANA

(ii) 1ಕಿ.ಗ್ರಾಂ= 1000 ಗ್ರಾಂ = 100 ಗ್ರಾಂ + ______________________

ಮೇರಿ 100 ಗ್ರಾಂನ ಎಷ್ಟು ಪ್ಯಾಕೆಟ್‌ಗಳನ್ನು ಕೊಳ್ಳಬಹುದು? ________

(iii) 1ಕಿ.ಗ್ರಾಂ= 1000 ಗ್ರಾಂ = 250 ಗ್ರಾಂ + ______________________

ಮೇರಿ 250ಗ್ರಾಂನ ಎಷ್ಟು ಪ್ಯಾಕೆಟ್‌ಗಳನ್ನು ಕೊಳ್ಳಬಹುದು? __________

**ಇವುಗಳನ್ನು ಮಾಡಿ.**

1. ಇವುಗಳನ್ನು 1ಕಿ.ಗ್ರಾಂ ನಂತೆ ಕೊಳ್ಳಬೇಕಾದರೆ ಯಾವುದನ್ನು ಎಷ್ಟೆಷ್ಟು ಕೊಂಡುಕೊಳ್ಳಬೇಕು?

(a)




__________

(b)




__________

(c)




__________

(d)





__________


## ತಕ್ಕಡಿಯಲ್ಲಿನ ತೂಕವನ್ನು ಸಮಗೊಳಿಸಿ.

1. ತಕ್ಕಡಿಯಲ್ಲಿ ಸರಿಯಾದ ತೂಕಗಳನ್ನಿಡುವುದರ ಮೂಲಕ ತಕ್ಕಡಿಯನ್ನು ಸಮಗೊಳಿಸಿ. ಇದಕ್ಕಾಗಿ 1ಕಿ.ಗ್ರಾಂ., 500 ಗ್ರಾಂ., 200ಗ್ರಾಂ., 100ಗ್ರಾಂ., 50 ಗ್ರಾಂ., 20 ಗ್ರಾಂ., 10ಗ್ರಾಂ ತೂಕವನ್ನು ಉಪಯೋಗಿಸಿರಿ. ನಿಮಗಾಗಿ ಒಂದು ವಿಧಾನ ನೀಡಲಾಗಿದೆ.


(a)





(b)




(c)




(d)




SCERT TELANGANA

**ಪ್ರಯತ್ನಿಸಿರಿ :**




1. ಕಮಲ್ ತಮ್ಮ ಅಂಗಡಿಯಲ್ಲಿ ಹಳೆ ದಿನಪತ್ರಿಕೆಗಳನ್ನು ತೂಕಮಾಡಲು 2 ಕಿ.ಗ್ರಾಂ., 5 ಕಿ.ಗ್ರಾಂ., 6 ಕಿ.ಗ್ರಾಂ ತೂಕವುಳ್ಳ ಕಲ್ಲುಗಳನ್ನಿಟ್ಟುಕೊಂಡಿದ್ದಾರೆ. ಅವುಗಳನ್ನುಪಯೋಗಿಸಿ ಅವನು 1 ಕಿ.ಗ್ರಾಂ., 3 ಕಿ.ಗ್ರಾಂ., 4 ಕಿ.ಗ್ರಾಂ., 7 ಕಿ.ಗ್ರಾಂ., ತೂಕವುಳ್ಳ ದಿನಪತ್ರಿಕೆಗಳನ್ನು ಹೇಗೆ ತೂಗಬಲ್ಲನು?

## ಪೋಸ್ಟಾಫೀಸಿಗೆ ಹೋಗೋಣ.


ನೀನು ಎಂದಾದರೂ ಪೋಸ್ಟಾಫೀಸಿಗೆ ಹೋಗಿದ್ದೀಯಾ?
ನಾವು ನಮ್ಮಿಂದ ದೂರವಿರುವ ಸ್ನೇಹಿತರು, ಬಂಧುಗಳಿಗೆ ಕಾಗದಗಳು ಹಾಗೂ ಪಾರ್ಸೆಲ್‌ಗಳನ್ನು ಕಳುಹಿಸಲು ಪೋಸ್ಟಾಫೀಸ್‌ಗೆ ಹೋಗುತ್ತಿರುತ್ತೇವೆ.

ನಮ್ಮ ದೇಶದಲ್ಲಿ ಎಲ್ಲಿಗಾದರೂ ಪಾರ್ಸೆಲ್, ಕಾಗದಗಳನ್ನು ಕಳುಹಿಸಲು ತಗುಲುವ ಖರ್ಚನ್ನು ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ.





| ವಸ್ತುಗಳು | ಬೆಲೆ (ತೂಕದ ಆಧಾರದ ಮೇಲೆ) |
|---|---|
| ಕಾಗದ | ₹ 5 (ಪ್ರತಿ 20ಗ್ರಾಂ ಅಥವಾ ಅದಕ್ಕಿಂತ ಕಡಿಮೆ) |
| ಪಾರ್ಸೆಲ್ | ₹ 19 (ಮೊದಲ 500 ಗ್ರಾಂವರೆಗೆ)<br>₹ 16 (ನಂತರದ ಪ್ರತಿ 500 ಗ್ರಾಂಗಳಿಗೆ) |



1. ರಾಧ ತನ್ನ ಸ್ನೇಹಿತರಿಗೆ ಒಂದು ದೊಡ್ಡ ಉತ್ತರ ಬರೆದಳು. ಪೋಸ್ಟ್‌ಮಾಸ್ಟರ್ ಆಕೆಗೆ ಈ ಕಾಗದ 45 ಗ್ರಾಂ ತೂಕವಿದೆ ಎಂದು ಹೇಳಿದರು. ರಾಧ ಪೋಸ್ಟ್‌ಮಾಸ್ಟರ್‌ಗೆ ಎಷ್ಟು ಹಣ ನೀಡಬೇಕಾಗುತ್ತದೆ?

2. ರಾಧ 3 ಪೋಚಂಪಲ್ಲಿ ಸೀರೆಗಳನ್ನು ಉದಯಪುರದಲ್ಲಿನ ತನ್ನ ಸ್ನೇಹಿತರುಗಳಿಗೆ ಕಳುಹಿಸುತ್ತಿದ್ದಾಳೆ. ಆ ಪಾರ್ಸೆಲ್ 2ಕಿ.ಗ್ರಾಂ., 500ಗ್ರಾಂ ತೂಕವಿದೆ. ರಾಧ ಪೋಸ್ಟ್‌ಮಾಸ್ಟರ್‌ಗೆ ನೀಡಬೇಕಾದ ಹಣವೆಷ್ಟು?

SCERT TELANGANA

## ತೂಕವನ್ನು ಅನೇಕ ವಿಧವಾಗಿ ಅಳೆಯಬಹುದು.

ಈ ದಿನಗಳಲ್ಲಿ ತೂಕವನ್ನು ಅಳೆಯಲು ಅನೇಕ ವಿಧವಾದ ಎಲೆಕ್ಟ್ರಾನಿಕ್ ಯಂತ್ರಗಳನ್ನು ಉಪಯೋಗಿಸುತ್ತಿದ್ದಾರೆ.








**ಪ್ರಯತ್ನಿಸಿರಿ**

1. ತೂಕವನ್ನು ಅಳೆಯುವ ಯಂತ್ರವನ್ನುಪಯೋಗಿಸಿ ನಿನ್ನ ತೂಕ, ನಿನ್ನ ನಾಲ್ಕು ಜನ ಸ್ನೇಹಿತರ ತೂಕವನ್ನು ತಿಳಿಯಿರಿ. ನೀನು ಅಳೆದ ತೂಕಗಳನ್ನು ಕೆಳಗಿನ ಪಟ್ಟಿಯಲ್ಲಿ ನಮೂದಿಸಿರಿ.



| ಹೆಸರು | ತೂಕ |
|---|---|
| | |
| | |
| | |
| | |
| | |

## ಇವುಗಳನ್ನು ಮಾಡಿ




1. 1 ಕಿ.ಗ್ರಾಂ. ಹತ್ತಿ ಅಥವಾ 1 ಕಿ.ಗ್ರಾಂ., ಕಬ್ಬಿಣದಲ್ಲಿ ಯಾವುದು ಹೆಚ್ಚು ತೂಕವಿರುತ್ತದೆ?


## ಅಭ್ಯಾಸ

1. ಕಲ್ಯಾಣ್ ತಂದ ಸರಕುಗಳ ಬಿಲ್‌ನಲ್ಲಿ ಯಾವುದು ಗ್ರಾಂನಲ್ಲಿ ಅಥವಾ ಕಿ.ಗ್ರಾಂ.ಗಳಲ್ಲಿವೆಯೊ ಅಂದಾಜು ಮಾಡಿರಿ.

| ವಸ್ತುಗಳು | ತೂಕ | ಕಿ.ಗ್ರಾಂ/ ಗ್ರಾಂ. |
|---|---|---|
| ಅಕ್ಕಿ | 10 | |
| ಸಕ್ಕರೆ | 2 | |
| ಬೇಳೆ | 500 | |
| ಅರಿಶಿನ | 250 | |
| ಟೀಪುಡಿ | 200 | |
| ಸಾಸಿವೆ | 25 | |

2. ಸಾಧಾರಣವಾಗಿ ನಾವು ಕಿಲೋಗ್ರಾಂ ಹಾಗೂ ಗ್ರಾಂಗಳಲ್ಲಿ ಕೊಳ್ಳುವ ಐದೈದು ವಸ್ತುಗಳನ್ನು ತಿಳಿಸಿರಿ.

3. ಸಂಕ್ರಾಂತಿ ಹಬ್ಬದ ಸಂದರ್ಭದಲ್ಲಿ ಲತಾಳ ಮನೆಯಲ್ಲಿ 20ಕಿ.ಗ್ರಾಂ. ಅನ್ನ ಮಾಡಿದ್ದಾರೆ. ಕುಟುಂಬ ಸದಸ್ಯರು, ಸ್ನೇಹಿತರು 8 ಕಿ.ಗ್ರಾಂ, 500 ಗ್ರಾಂಅನ್ನ ಉಪಯೋಗಿಸಿದರು. ಉಳಿದುದನ್ನು ಬಡವರಿಗೆ ಹಂಚಲಾಯಿತು. ಬಡವರಿಗೆ ಹಂಚಿದ ಅನ್ನವೆಷ್ಟು?



4. ಒಂದು ದೋಣಿ 200 ಕಿ.ಗ್ರಾಂ ತೂಕ ಹೋರಬಲ್ಲದು. ದೋಣಿಯಲ್ಲಿ ಕುಳಿತ ವ್ಯಕ್ತಿಗಳ ತೂಕ 112ಕಿ.ಗ್ರಾಂ ಆದರೆ ದೋಣಿ ಇನ್ನೆಷ್ಟು ತೂಕ ಹೋರಬಲ್ಲದು?

5. ಮಹೇಶ್ ತೂಕ 78ಕಿ.ಗ್ರಾಂ. ರಮೇಶ್ ತೂಕ 95ಕಿ.ಗ್ರಾಂ., ಹಾಗಾದರೆ ರಮೇಶನ ತೂಕ ಮಹೇಶನಿಗಿಂತ ಎಷ್ಟು ಹೆಚ್ಚಾಗಿದೆ?


6. ನನ್ನ ತೂಕ 22 ಕಿ.ಗ್ರಾಂ., ನನ್ನ ತಂದೆಯವರ ತೂಕ ನನ್ನ ತೂಕಕ್ಕಿಂತ 3 ರಷ್ಟು ಹೆಚ್ಚಾಗಿದೆ. ಹಾಗಾದರೆ ನನ್ನ ತಂದೆಯವರ ತೂಕ ಎಷ್ಟು?

SCERT TELANGANA

7. ಒಂದು ಆಟೋ 700 ಕಿ.ಗ್ರಾಂ. ತೂಕ ಹೊರಬಲ್ಲದು. ಗ್ಯಾಸ್‌ನಿಂದ ತುಂಬಿದ ಒಂದೊಂದು ಸಿಲಿಂಡರ್‌ನ ತೂಕ ಸುಮಾರು 35 ಕಿ.ಗ್ರಾಂ., ಅಂತಹ ಎಷ್ಟು ಗ್ಯಾಸ್ ಸಿಲಿಂಡರ್‌ಗಳನ್ನು ಆಟೋದಲ್ಲಿ ತೆಗೆದುಕೊಂಡು ಹೋಗಬಲ್ಲದು?



8.



ಒಂದು ಮೋಟಾರ್ ಸೈಕಲ್ ತೂಕ 200 ಕಿ.ಗ್ರಾಂ. ಒಂದು ಜೀಪ್‌ನ ತೂಕ ಮೋಟಾರ್ ಸೈಕಲ್‌ನ ತೂಕದ 9ರಷ್ಟು ಹೆಚ್ಚಾದರೆ ಜೀಪನ ತೂಕವೆಷ್ಟು?

9. ಕೆಳಗಿನ ಬಿಟ್ಟ ಸ್ಥಳಗಳನ್ನು ಪೂರ್ಣಗೊಳಿಸಿ.

(ಅ) 4 ಕಿಗ್ರಾಂ ಅಕ್ಕಿ = ________ ಗ್ರಾಂ ಅಕ್ಕಿ.

(ಆ) 2 ಕಿ.ಗ್ರಾಂ 500 ಗ್ರಾಂ ಬೇಳೆ = ________ ಗ್ರಾಂ. ಬೇಳೆ.

(ಇ) 6 ಕಿ.ಗ್ರಾಂ 500 ಗ್ರಾಂ ಸಕ್ಕರೆ= ________ ಗ್ರಾಂ ಸಕ್ಕರೆ

(ಈ) 1250 ಗ್ರಾಂ ಈರುಳ್ಳಿ = 1 ಕಿ.ಗ್ರಾಂ 250ಗ್ರಾಂ ಈರುಳ್ಳಿ.

(ಉ) 1750 ಗ್ರಾಂ ಟೊಮೋಟೋ = ________ ಕಿ.ಗ್ರಾಂ ________ ಗ್ರಾಂ ಟೊಮೋಟೋ.

(ಊ) 2250 ಗ್ರಾಂ ಆಲೂಗಡ್ಡೆ = ________ ಕಿ.ಗ್ರಾಂ ________ ಗ್ರಾಂ ಆಲೂಗಡ್ಡೆ.

10. ತೂಕವನ್ನು ಅಂದಾಜಿಸಿ ವಾಸ್ತವ ತೂಕದೊಂದಿಗೆ ಹೋಲಿಸಿರಿ.

| **ವಸ್ತು** | **ಅಂದಾಜಿಸಿದ ತೂಕ** | **ವಾಸ್ತವ ತೂಕ** | **ವ್ಯತ್ಯಾಸ** |
|---|---|---|---|
| ಪಪ್ಪಿ (ನಾಯಿಮರಿ) | | | |
| ನಿನ್ನ ಸ್ಕೂಲ್ ಬ್ಯಾಗ್ | | | |
| ನಿನ್ನ ತಮ್ಮ/ ತಂಗಿ | | | |
| ಜ್ಯಾಮಿಟ್ರಿ ಪೆಟ್ಟಿಗೆ | | | |
| 1 ಲೀ ನೀರಿನ ಬಾಟಲ್ (ತುಂಬಿದ್ದು) | | | |
| ನೆಕ್ಲೆಸ್ | | | |

SCERT TELANGANA

# 10 ಯಾವುದು ಎಷ್ಟು ಸಂಗ್ರಹಿಸಬಲ್ಲದು?

ಒಂದು ಬಾಟಲಿನಲ್ಲಿ 1 ಲೀಟರ್ ನೀರು ಹಿಡಿಯುತ್ತದೆಂದು 3 ನೇ ತರಗತಿಯಲ್ಲಿ ಕಲಿತಿದ್ದೇವೆ ಅಲ್ಲವೇ!
1 ಲೀಟರ್ ನೀರಿನ ಬಾಟಲನ್ನು ತುಂಬಲು ಎಷ್ಟು ಲೋಟಗಳ ನೀರು ಬೇಕಾಗುತ್ತದೆ?

ಕೆಳಗೆ ಕೊಟ್ಟ ವಸ್ತುಗಳಲ್ಲಿ ಯಾವುದರಲ್ಲಿ 1 ಲೀಟರಿಗಿಂತಲೂ ಹೆಚ್ಚು ಹಿಡಿಯುತ್ತದೆ, ಯಾವುದರಲ್ಲಿ 1 ಲೀಟರಿಗಿಂತಲೂ ಕಡಿಮೆ ಹಿಡಿಯುತ್ತದೆ. ಕೆಳಗಿನ ಪಟ್ಟಿಯಲ್ಲಿ ಬರೆಯಿರಿ. ಹಾಗೆಯೇ ವಸ್ತುಗಳ ಪಟ್ಟಿಯನ್ನು ಹೆಚ್ಚಿಸಿರಿ.




| ಲೀಟರಿಗಿಂತಲೂ ಹೆಚ್ಚಿಗೆ | ಲೀಟರಿಗಿಂತಲೂ ಕಡಿಮೆ |
|---|---|
| | |
| | |
| | |
| | |
| | |
| | |

SCERT TELANGANA

**1.** ಈ ಪಾತ್ರೆಗಳಲ್ಲಿ ಎಷ್ಟು ಲೀಟರ್ ಹಿಡಿಯಬಲ್ಲದೋ ಅಂದಾಜು ಹಾಕಿರಿ.

| 1000 ಲೀಟರ್ | 1 ಲೀಟರ್ | 20 ಲೀಟರ್‌ಗಳು | ಅರ್ಧ ಲೀಟರ್ | ಅರ್ಧ ಲೀಟರ್ ಕಿಂತ ಕಡಿಮೆ |
|---|---|---|---|---|



**ಒಂದು ದಿನದಲ್ಲಿ ಡಾಲಿ ಎಷ್ಟು ನೀರನ್ನು ಬಳಸುತ್ತಾಳೆ ?**

ಡಾಲಿ ಒಂದು ದಿನದಲ್ಲಿ ಸ್ನಾನಕ್ಕಾಗಿ ಒಂದು ಬಕೆಟ್ ನೀರನ್ನು, ಕುಡಿಯಲು 8 ಲೋಟ ನೀರನ್ನು, ಇತರೆ ಬೇಡಿಕೆಗಳಿಗೆ 3 ಬಕೆಟ್ ನೀರನ್ನು ಬಳಸುತ್ತಾಳೆ. ಹಾಗಾದರೆ ಒಂದು ದಿನದಲ್ಲಿ ಎಷ್ಟು ಲೀಟರ ನೀರು ಆಕೆಗೆ ಅವಶ್ಯಕ?

(ಅ) ಸ್ನಾನಕ್ಕಾಗಿ______________

(ಆ) ಕುಡಿಯಲು ______________

(ಇ) ಇತರೆ ಕೆಲಸಕ್ಕೆ______________




(ಈ) ಒಂದು ದಿನಕ್ಕೆ ಡಾಲಿಗೆ ಎಷ್ಟು ಲೀಟರ್ ನೀರು ಅವಶ್ಯಕ ?______________

SCERT TELANGANA

**ಪ್ರಯತ್ನಿಸಿರಿ:**

1. ನೀನು ದಿನಕ್ಕೆ ಎಷ್ಟು ಲೀಟರ್ ನೀರನ್ನು ಬಳಸುವೆಯೋ ಅಂದಾಜು ಹಾಕಿರಿ?



**ಲೀಟರಿಗಿಂತಲೂ ಕಡಿಮೆ**

ಒಂದು ಸ್ಪೂನಿನಲ್ಲಿ ಎಷ್ಟು ದ್ರವ ಹಿಡಿಯುತ್ತದೆ?

ಸ್ಪೂನಿನಲ್ಲಿ ಸುಮಾರು 3 ಮಿ.ಲೀಟರ್ ದ್ರವ ಹಿಡಿಯುತ್ತದೆ.

(ಅ) ನೀನು ಅತಿ ಕಡಿಮೆ ಪ್ರಮಾಣದಲ್ಲಿ ತೆಗೆದುಕೊಳ್ಳುವ ದ್ರವಗಳು ಯಾವುವು ಆಲೋಚಿಸಿರಿ.

______________________________________________

______________________________________________


______________________________________________

ನಾವು ಮಿಲೀ ಲೀಟರ್‌ನ್ನು ಮಿಲೀ ಗ್ರಾಂ. ಎಂದು ಕರೆಯುತ್ತೇವೆ

## ವೈದ್ಯರ ಬಳಿಗೆ ಹೋಗೋಣ!

ಚಿತ್ರ ಉಯ್ಯಾಲೆಯಲ್ಲಿ ತೂಗುತ್ತಿದ್ದಾಗ ಕೆಳಗೆ ಜಾರಿ ಬಿದ್ದು ತನ್ನ ಕೈಗೆ ಗಾಯವಾಗಿದೆ. ತಕ್ಷಣವೇ ಆಕೆಯ ತಂದೆ ತಾಯಿ ಅವಳಿಗೆ ಟಿಟಾನಸ್ ಇಂಜೆಕ್ಷನ್ ಮಾಡಿಸಲು ವೈದ್ಯರ ಹತ್ತಿರಕ್ಕೆ ಕರೆದೊಯ್ದರು. ಚಿತ್ರಳಿಗೆ ಇಂಜಕ್ಷನ್ ಎಂದರೆ ಭಯವಿಲ್ಲ. ಆಕೆ ವೈದ್ಯರನ್ನು ಇಂಜಕ್ಷನ್‌ಗಾಗಿ ಸಿರಂಜಿನಲ್ಲಿ ತುಂಬಿದ ಔಷಧಿಯನ್ನು ತೋರಿಸಲು ಕೇಳಿದಳು.

ಸಿರಂಜಿನಲ್ಲಿ ಎಷ್ಟು ಔಷಧಿ ಇದೆ?







ಹಾಗೆಯೇ ವೈದ್ಯರು ಚಿತ್ರಳಿಗೆ ಟಾನಿಕ್‌ನ್ನು ಬರೆದು ಪ್ರತಿ ಸಲವೂ 5 ಮಿ.ಲೀ.ತೆಗೆದುಕೊಳ್ಳಲು ಹೇಳಿದರು.

ಅವರು ಅವಳಿಗೆ ಮಚ್ಚಳದ ಮೇಲೆ 5 ಮಿ.ಲೀ. ಗುರ್ತನ್ನು ತೋರಿಸಿದರು.

**ಇವು ಮಾಡಿರಿ:**

1. ಈ ಕೆಳಗಿನವುಗಳಲ್ಲಿ ಯಾವುವನ್ನು ಮಿಲ್ಲೀ ಲೀಟರ್‌ಗಳಲ್ಲಿ, ಯಾವುವನ್ನು ಲೀಟರ್‌ಗಳಲ್ಲಿ ಕೊಳ್ಳುತ್ತೀರೋ ತಿಳಿಸಿ.?


| ಪದಾರ್ಥ | ಮಿಲೀಲೀಟರ್/ಲೀಟರ್ |
|---|---|
| ಹಾಲು | |
| ಕೊಬ್ಬರಿ ಎಣ್ಣೆ | |
| ತಂಪು ಪಾನೀಯಗಳು | |
| ಷಾಂಪು | |
| ಸಿರಪ್ ಔಷಧಿ | |

1 ಲೀಟರ್ ಬಾಟಲಿನಿಂದ 2 ಚಿಕ್ಕ ಬಾಟಲ್‌ಗಳನ್ನು ತುಂಬಿದರೆ, ಒಂದೊಂದು ಚಿಕ್ಕ ಬಾಟಲ್‌ಗಳಲ್ಲಿ ಎಷ್ಟು ಹಿಡಿಯುತ್ತದೆ?





ವಸುಧ ಒಂದು ಖಾಲೀ 1 ಲೀಟರ್ ನೀರಿನ ಬಾಟಲನ್ನು ಹಾಗೆಯೇ ಒಂದು ಖಾಲೀ 250 ಮಿ.ಲೀ. ಕೊಬ್ಬರಿ ಎಣ್ಣೆಯ ಬಾಟಲನ್ನು ತೆಗೆದುಕೊಂಡಳು.


ಆಕೆ ಕೊಬ್ಬರಿ ಎಣ್ಣೆಯ ಬಾಟಲಿಗೆ ಪೂರ್ತಿಯಾಗಿ ನೀರನ್ನು ತುಂಬಿ ನೀರಿನ ಬಾಟಲಿಗೆ ಹಾಕಿದ್ದಾಳೆ.



ಆಕೆ ಮತ್ತೆ ಅದನ್ನು ನೀರಿನಿಂದ ತುಂಬಿಸಿ ಮತ್ತೆ ನೀರಿನ ಬಾಟಲಿಗೆ ಹಾಕಿದ್ದಾಳೆ.



ಹೀಗೆ ಆಕೆಯು ಇನ್ನರಡು ಬಾರಿ ಮಾಡಿ, 1 ಲೀಟರ್ ಬಾಟಲನ್ನು ಸಂಪೂರ್ಣ ತುಂಬಿದ್ದಾಳೆ.




ಅಂದರೆ 250 ಮಿ.ಲೀ.+ 250 ಮಿ.ಲೀ.+250 ಮಿ.ಲೀ.+ 250 ಮಿ.ಲೀ. = 1000 ಮಿ.ಲೀ


SCERT TELANGANA

## ಇವನ್ನು ಮಾಡಿರಿ

1. **ಕೆಳಗೆ ತೋರಿಸಿದ ಪ್ರತಿಯೊಂದು 1ಲೀಟರ್ ಸಮವಾಗಲು ಎಷ್ಟು ಬೇಕಾಗುತ್ತದೆ?**

(ಅ) 


________

(ಈ) 


________

(ಆ) 


________

(ಇ) 



________

### ಚಟುವಟಿಕೆ :


ಬೇರೆ ಬೇರೆ ಪರಿಮಾಣವಿರುವ ಮೂರು ಬಾಟಲ್‌ಗಳನ್ನು ಶೇಖರಿಸಿರಿ. ಒಂದೊಂದು ವಿಧದ ಬಾಟಲಿನಲ್ಲಿ ಎಷ್ಟು ಸಲ ಹಾಕಿದರೆ 1 ಲೀಟರ್ ಬಾಟಲ್ ಪೂರ್ತಿ ತುಂಬುವುದೋ ಅಂದಾಜು ಮಾಡಿರಿ. ನಂತರ ಆ ಬಾಟಲುಗಳಿಂದ 1 ಲೀಟರ್ ಬಾಟಲನ್ನು ತುಂಬಿರಿ. ನೀವು ಅಂದಾಜು ಮಾಡಿದ್ದು ಎಷ್ಟರಮಟ್ಟಿಗೆ ಸರಿಯೆಂದು ತಿಳಿದುಕೊಳ್ಳಿರಿ.

| | **ನೀವು ಅಂದಾಜು ಮಾಡಿದ್ದು** | **ನೀವು ಅಳೆದದ್ದು** |
|---|---|---|
| 1 ನೇ ಬಾಟಲ್ | | |
| 2 ನೇ ಬಾಟಲ್ | | |
| 3 ನೇ ಬಾಟಲ್ | | |

1ಲೀಟರ್ ಬಾಟಲಿನಿಂದ2 ಚಿಕ್ಕ ಬಾಟಲ್‌ಗಳನ್ನುತುಂಬಿದರೆ, ಒಂದೊಂದು ಚಿಕ್ಕ ಬಾಟಲ್‌ಗಳಲ್ಲಿ ಎಷ್ಟು ಹಿಡಿಯುತ್ತದೆ?



[      ]



ನಾಲ್ಕು ಚಿಕ್ಕ ಬಾಟಲುಗಳಿಂದ 1ಲೀಟರ್ ಬಾಟಲನ್ನು ತುಂಬಿದರೆ, ಪ್ರತಿಯೊಂದರಲ್ಲಿ ಎಷ್ಟು ಹಿಡಿಯುತ್ತದೆ?

[      ]

SCERT TELANGANA

**ಪ್ರಯತ್ನಿಸಿರಿ :**

1. ಕೆಳಗೆ ಕೊಟ್ಟಿರುವ ಖಾಲೀ ಸ್ಥಳಗಳನ್ನು ಭರ್ತಿಮಾಡಿ, 1 ಲೀಟರಿಗೆ ಸಮ ಮಾಡಿರಿ?

(a) 500 ಮಿ.ಲೀ + __________ = 1 ಲೀಟರು.

(b) __________ + 750 ಮಿ.ಲೀ = 1 ಲೀಟರು.

(c) 900 ಮಿ.ಲೀ + __________ = 1 ಲೀಟರು.

(d) __________ x 500 ಮಿ.ಲೀ = 1 ಲೀಟರು.

(e) __________ x 250 ಮಿ.ಲೀ = 1 ಲೀಟರು.

**ನೀರಿನ ಉಳಿತಾಯ ಮಾಡೋಣ!**

ನಿಮ್ಮ ಮನೆಯಲ್ಲಾಗಲೀ, ಸುತ್ತಮುತ್ತಲಲ್ಲಾಗಲೀ ಏನಾದರೂ ಕೊಳಾಯಿಯಲ್ಲಿ ನೀರು ಸೋರುತ್ತಿದೆಯೇ?

ಆದರ ಕೆಳಗೆ 1 ಲೀಟರ್ ನೀರಿನ ಬಾಟಲನ್ನು ಇರಿಸಿ ಒಂದು ಗಂಟೆಯಲ್ಲಿ ಎಷ್ಟು ನೀರು ತುಂಬುತ್ತದೋ ತಿಳಿದುಕೊಳ್ಳಿರಿ.



ಒಂದು ವೇಳೆ ಕೊಳಾಯಿಯು, ದಿನವೆಲ್ಲಾ ಸುರಿದರೆ ಎಷ್ಟು ನೀರು ವ್ಯರ್ಥವಾಗುತ್ತದೆ?

______________

ಒಂದುವೇಳೆ ಕೊಳಾಯಿ ನಿರಂತರವಾಗಿ ಒಂದು ವಾರದ ದಿನಗಳು ನೀರು ಸುರಿದರೆ ಎಷ್ಟು ನೀರು ವ್ಯರ್ಥವಾಗುತ್ತದೆ?______________

**ಅಭ್ಯಾಸ :**

**1. ಕೆಳಗೆ ಕೊಟ್ಟಿರುವ ಖಾಲೀಗಳನ್ನು ಭರ್ತಿಮಾಡಿರಿ.**

(ಅ) 3 ಲೀಟರುಗಳು = ______________ ಮಿ.ಲೀ

(ಆ) 7 ಲೀಟರುಗಳು = ______________ ಮಿ.ಲೀ

(ಇ) 8500 ಮಿ.ಲೀ = ______________ ಲೀ __________ ಮಿ.ಲೀ

(ಈ) 5250 ಮಿ.ಲೀ = ______________ ಲೀ __________ ಮಿ.ಲೀ

(ಉ) 9750 ಮಿ.ಲೀ = ______________ ಲೀ __________ ಮಿ.ಲೀ

SCERT TELANGANA

2. ಈ ಬಾಟಲುಗಳಲ್ಲಿ ಎಲ್ಲದರಲ್ಲೂ ಒಟ್ಟಿಗೆ ಎಷ್ಟು ನೀರು ಹಿಡಿಸುತ್ತದೆ?






3. ಕಲ್ಪನರವರ ಆಕಳು ಪ್ರತಿದಿನ 15 ಲೀಟರ್ ಹಾಲು ಕೊಡುತ್ತದೆ. ಕಲ್ಪನ ಮನೆಗಾಗಿ 8 ಲೀಟರ್ 500 ಮಿ.ಲೀ. ಉಪಯೋಗಿಸಿದರೆ ಸಂತೆಯಲ್ಲಿ ಆಕೆಯು ಮಾರಿದ ಹಾಲೆಷ್ಟು?

4. ಒಂದು ನೀರಿನ ಟ್ಯಾಂಕಿನಲ್ಲಿ 500 ಲೀಟರ್ ನೀರು ಹಿಡಿಸುತ್ತದೆ. ಶಾಲೆಯಲ್ಲಿ ಪ್ರತಿದಿನ 375 ಲೀಟರ್ ನೀರನ್ನು ಉಪಯೋಗಿಸಿದಲ್ಲಿ ನಂತರ ಉಳಿದ ನೀರೆಷ್ಟು? ಒಂದು ವೇಳೆ ಮಾರನೆಯ ದಿನಕ್ಕೆ ಟ್ಯಾಂಕ್ ಪೂರ್ತಿ ನೀರು ಅವಶ್ಯವಿದ್ದಲ್ಲಿ, ಇನ್ನೂ ಎಷ್ಟು ಲೀಟರ್ ನೀರು ಪಂಪುಮಾಡಬೇಕಾಗುತ್ತದೆ?

5. ಆನಂದ್ 250 ಮಿ.ಲೀ., ಅನಿತ 500 ಮಿ.ಲೀ. ಹಾಲನ್ನು ಪ್ರತಿದಿನ ಕುಡಿಯುತ್ತಾರೆ. ಪ್ರತಿದಿನ ಇದೇ ಪ್ರಮಾಣದಲ್ಲಿ ಹಾಲು ಕುಡಿದಲ್ಲಿ, 4 ದಿನಗಳಲ್ಲಿ ಎಷ್ಟು ಹಾಲನ್ನು ಕುಡಿಯುತ್ತಾರೆ? ಹಾಗೆಯೇ 7 ದಿನಗಳಲ್ಲಿ ಎಷ್ಟು ಹಾಲು ಕುಡಿಯುತ್ತಾರೆ?

6. ನೀನು ಪ್ರತಿದಿನ ಎಷ್ಟು ನೀರು ಕುಡಿಯುವೆ? ಹಾಲೆಷ್ಟು ಕುಡಿಯುವೆ? ಟೀ ಎಷ್ಟು ಕುಡಿಯುವೆ? ಹಣ್ಣಿನ ರಸವೆಷ್ಟು ಕುಡಿಯುವೆ? 4 ಲೋಟಗಳ ದ್ರವವು 1 ಲೀಟರಿಗೆ ಸಮಾನವಾದರೆ, ನೀನು ಒಂದು ದಿನದಲ್ಲಿ ಮತ್ತು ಒಂದು ತಿಂಗಳಿನಲ್ಲಿ ಎಷ್ಟು ದ್ರವ ಪದಾರ್ಥ ಸೇವಿಸುತ್ತೀಯಾ?

7. ಸ್ವಾತಿ 2 ಲೀಟರ್ ಜ್ಯೂಸನ್ನು 200 ಮಿ.ಲೀ. ಪ್ರಮಾಣದ ಗ್ಲಾಸಿನೊಳಕ್ಕೆ ಸುರಿಯುತ್ತಾಳೆ. ಅಂತಹ ಗ್ಲಾಸುಗಳು ಎಷ್ಟು ಅವಶ್ಯಕವಾಗುತ್ತದೆ?

8. ಕರುಣಳ ಎರಡು ವರ್ಷದ ಮಗಳು ಅನಾರೋಗ್ಯದಿಂದ ದಿನಕ್ಕೆ 3 ಬಾರಿ 3 ಮಿ.ಲೀ. ಪ್ರಮಾಣದಂತೆ ಟಾನಿಕ್ ಔಷಧಿಯನ್ನು ಮಗುವಿಗೆ ಕೊಡಲು ವೈದ್ಯರು ಕರುಣಳಿಗೆ ಹೇಳಿದರು. ಹೀಗೆ ಕ್ರಮವಾಗಿ 7 ದಿನಗಳು ಔಷಧಿಯನ್ನು ಸೇವನೆ ಮಾಡಿಸಲು ಕರುಣಳಿಗೆ ತಿಳಿಸಿದರು.

   (ಅ) ಕರುಣಳ ಮಗಳು 7 ದಿನಗಳಲ್ಲಿ ಎಷ್ಟು ಔಷಧಿ ತೆಗೆದುಕೊಂಡಳು?


   (ಆ) ಒಂದು ವೇಳೆ ಟಾನಿಕ್ ಬಾಟಲಿನಲ್ಲಿ 100 ಮಿ.ಲೀ. ಔಷಧಿ ಇದ್ದರೆ, 7 ದಿನಗಳ ನಂತರ ಟಾನಿಕ್ ಬಾಟಲಿನಲ್ಲಿ ಉಳಿಯುವ ಔಷಧಿಎಷ್ಟು?

9. ಒಂದು ಟಾನಿಕ್ ಬಾಟಲಿನಲ್ಲಿ 60 ಮಿ.ಲೀ. ಔಷಧಿ ಇದೆ. ಅಂತಹ 15 ಟಾನಿಕ್ ಬಾಟಲುಗಳಲ್ಲಿ ಎಷ್ಟು ಔಷಧಿ ಇರುತ್ತದೆ?

SCERT TELANGANA

10. ಮಹೇಶನು ಒಂದು ಟೀ ಅಂಗಡಿಯನ್ನು ನಡೆಸುತ್ತಾನೆ. ಅವನು ಪ್ರತಿಕಪ್ ಟೀ ತಯಾರಿಸಲು 20 ಮಿ.ಲೀ.ಹಾಲನ್ನು ಉಪಯೋಗಿಸುತ್ತಾನೆ. ಆತನು ಒಂದು ದಿನಕ್ಕೆ 50 ಕಪ್ಪುಗಳ ಟೀ ಮಾರುತ್ತಾನೆ. ಹಾಗಾದರೆ ಅವನು ಪ್ರತಿದಿನ ಬಳಸುವ ಹಾಲೆಷ್ಟು?

11. ಒಂದು ಅಂಗಡಿಯವನು ತನ್ನ ಅಂಗಡಿಯಲ್ಲಿ ಬೇರೆ ಬೇರೆ ಪ್ರಮಾಣದ ಕೊಬ್ಬರಿಎಣ್ಣೆ ಬಾಟಲುಗಳನ್ನು ಇರಿಸಿದ್ದಾನೆ. ಒಂದು ವಾರದಲ್ಲಿ 60 ಬಾಟಲ್‌ಗಳಎಣ್ಣೆಯನ್ನು ಮಾರಿದ್ದಾನೆ. ಆದರ ವಿವರಗಳು ಕೆಳಗೆ ಕೊಡಲಾಗಿದೆ.




| ಒಂದು ವಾರದಲ್ಲಿ ಮಾರಿರುವುದು | ಬಾಟೆಲ್‌ಗಳ ಪರಿಮಾಣ |
|---|---|
| 20 ಬಾಟೆಲ್ | 200 ಮಿ.ಲೀ |
| 30 ಬಾಟೆಲ್ | 500 ಮಿ.ಲೀ. |
| 10 ಬಾಟೆಲ್ | 100 ಮಿ.ಲೀ. |

ಅಂಗಡಿಯವನು ಒಂದು ವಾರದಲ್ಲಿ ಮಾರಿದ ಎಣ್ಣೆ ಎಷ್ಟು?

12. ರಾಜೇಂದ್ರ ರಜಿನಿ ಎಂಬ ಇಬ್ಬರು ಮಕ್ಕಳು ಆದಿಲಾಬಾದಿನಲ್ಲಿ ವಾಸಿಸುತ್ತಾರೆ. ಆ ಕುಟುಂಬವು ಒಂದು ದಿನದಲ್ಲಿ ಬಳಸುವ ನೀರಿನ ವಿವರಗಳು ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

| ಉಪಯೋಗ | ಲೀಟರ್‌ಗಳು |
|---|---|
| ಅಡುಗೆಗೆ, ಕುಡಿಯಲು ಬಳಸಿದ ನೀರು | 15ಲೀ |
| ಅಡುಗೆ ಪಾತೆ ಶುಭ್ರಗೊಳಿಸಲು | 20 ಲೀ |
| ಬಟ್ಟೆ ಒಗೆಯಲು | 40 ಲೀ |
| ಸ್ನಾನಕ್ಕಾಗಿ | 60 ಲೀ |

ಆ ಕುಟುಂಬವು ಪ್ರತಿ ದಿನ ಎಷ್ಟು ನೀರು ಬಳಸಿದೆ?

13. ನಿಮ್ಮ ಕುಟುಂಬವು ಒಂದು ದಿನದಲ್ಲಿ ಎಷ್ಟು ನೀರನ್ನು ಉಪಯೋಗಿಸುತ್ತಾರೆಂದು ಅಂದಾಜು ಮಾಡಿರಿ. ಕೆಳಗೆ ತೋರಿಸಿದ ಪಟ್ಟಿಯಲ್ಲಿ ವಿವರಗಳನ್ನು ನಮೂದಿಸಿರಿ.

| ಉಪಯೋಗ | ಲೀಟರ್‌ಗಳು |
|---|---|
| ಅಡುಗೆಗೆ ಕುಡಿಯಸಲು ಬಳಸಿದ್ದು | |
| ಅಡುಗೆ ಪಾತ್ರೆ ತೊಳೆಯಲು | |
| ಬಟ್ಟೆ ಒಗೆಯಲು | |
| ಸ್ನಾನಕ್ಕಾಗಿ | |

SCERT TELANGANA

# 11 ಟಿಕ್ – ಟಿಕ್ ಎಂದು ನಡೆಯುವ ಗಡಿಯಾರ

ಹೂವಿನ ಚಿತ್ರ ಬರೆಯಲು ನೀವು ಎಷ್ಟು ಸಮಯ ತೆಗೆದುಕೊಳ್ಳುತ್ತೀರಾ? ಸ್ನಾನ ಮಾಡುವುದಕ್ಕೆ ನೀವು ಎಷ್ಟು ಕಾಲ ತೆಗೆದುಕೊಳ್ಳುತ್ತೀರಾ? ಶಾಲೆಗೋಸ್ಕರ ನೀವು ಎಷ್ಟು ಕಾಲ ಕಳೆಯುವೆ? ಬುಟ್ಟಿಗಳ ಹೆಣೆಯುವವನು ಒಂದು ಬುಟ್ಟಿಯನ್ನು ತಯಾರು ಮಾಡುವುದಕ್ಕೆ ಎಷ್ಟು ಕಾಲ ತೆಗೆದುಕೊಳ್ಳುತ್ತಿದ್ದಾನೋ ತಿಳಿದುಕೊಳ್ಳಿರಿ? ಬಡಗಿ ಒಂದು ಕುರ್ಚಿಯನ್ನು ತಯಾರುಮಾಡುವುದಕ್ಕೆ ಎಷ್ಟು ಕಾಲ ತೆಗೆದುಕೊಳ್ಳುತ್ತಾನೆ? ಟೈಲರ್ ಒಂದು ಪೈಜಾಮವನ್ನು ತಯಾರುಮಾಡುವುದಕ್ಕೆ ಎಷ್ಟು ಕಾಲ ತೆಗೆದುಕೊಳ್ಳುತ್ತಾನೆ?





ಬೇರೆ ಬೇರೆ ಕೆಲಸಗಳಿಗೆ, ಬೇರೆ ಬೇರೆ ಸಮಯ ಅವಶ್ಯಕವಾಗುತ್ತದೆ. ವಿವಿಧ ಕೆಲಸಗಳಿಗೆ ಬೇಕಾದ ಕಾಲವನ್ನು ಆಲೋಚಿಸಿ. ಇವುಗಳ ಆಧಾರವಾಗಿ ಕೆಳಗಿನ ಪೆಟ್ಟಿಕೆಯನ್ನು ಪೂರ್ತಿಗೊಳಿಸಿ.

| ಸ್ವಲ್ಪ ನಿಮಿಷಗಳ ಕಾಲ ಅವಶ್ಯವಾಗುವ ಕೆಲಸ | ಗಂಟೆಗಳ ಸಮಯ ಅವಶ್ಯವಾಗುವ ಕೆಲಸ | ದಿನಗಳ ಕಾಲ ಅವಶ್ಯವಾಗುವ ಕೆಲಸ | ತಿಂಗಳುಗಳ ಕಾಲ ಅವಶ್ಯವಾಗುವ ಕೆಲಸ |
|---|---|---|---|
| ಸ್ನಾನ ಮಾಡುವದಕ್ಕೆ | ಶಾಲೆಯಲ್ಲಿ ಓದುವದಕ್ಕೆ | | |
| | | | |
| | | | |
| | | | |
| | | | |
| | | | |
| | | | |

ಕಣ್ಣು ರೆಪ್ಪೆಗಳು ಹೊಡೆಯುವುದಕ್ಕೆ ಎಷ್ಟು ಕಾಲ ತೆಗೆದುಕೊಳ್ಳುತ್ತೀರಾ? ಬೇರೆ ಬೇರೆ ಕೆಲಸಗಳು ಮಾಡುವುದಕ್ಕೆ ನಿನಗೆ ನಿಮಿಷಕ್ಕಿಂತ ಕಡಿಮೆ ಕಾಲ ಅವಶ್ಯವಾಗುತ್ತದೆಯೋ? ಆಲೋಚಿಸಿ? ______________________

SCERT TELANGANA

## ಚಲನಚಿತ್ರ ನೋಡೋಣ..........!

ಸೂರ್ಯ ಬಹಳ ಉತ್ಸಾಹವಾಗಿದ್ದಾನೆ. ಈ ದಿನ ಆವನಿಗೆ ಪರೀಕ್ಷೆಗಳಿಗೆ ಕೊನೆಯ ದಿನ. ಆತನ ತಂದೆ-ತಾಯಿಗಳು ಆತನಿಗೆ ಈ ದಿನ ಸಾಯಂಕಾಲ ಸಿನಿಮಾಗೆ ಕರೆದುಕೊಂಡು ಹೋಗುತ್ತೇವೆ ಎಂದು ಭರವಸೆಕೊಟ್ಟರು.



(ಅ) ಅವನು ಶಾಲೆಗೆ ಹೋಗಿ ತಲುಪಿದ ಸಮಯ ________



(ಆ) ಅವನು ಪರೀಕ್ಷೆ ಬರೆಯುವುದಕ್ಕೆ ಆರಂಭಿಸಿದ ಸಮಯ ________



ಅವನು 2 ಗಂಟೆಗಳು ಪರೀಕ್ಷೆ ಬರೆಯಬೇಕು. ಪರೀಕ್ಷೆ ಬರೆಯುವಾಗ ಇನ್ನೂ ಎಷ್ಟು ಸಮಯ ಉಳಿದಿದೆ ಎಂದು ತಿಳಿದುಕೊಳ್ಳುವುದಕ್ಕೆ ಅವನು ತನ್ನ ತರಗತಿ ಕೊಠಡಿಯಲ್ಲಿರುವ ಗಡಿಯಾರದ ಕಡೆ ನೋಡಿದನು.

(ಇ) ಸೂರ್ಯನಿಗೆ ಇನ್ನೂ ಎಷ್ಟು ಸಮಯ ಉಳಿದಿದೆ? ________

ಸೂರ್ಯ 12ಗಂಟೆಗೆ ಕೆಲವುನಿಮಿಷಗಳ ಮುಂಚೆ, ಪರೀಕ್ಷೆ ಬರೆಯುವುದು ಮುಗಿಸಿದನು. ಮತ್ತೇ ತಿರುಗಿ ಮನೆಗೆ ಹೋಗುವುದಕ್ಕೆ ನಡೆದುಹೋಗುತ್ತಿದ್ದಾನೆ. ಶಾಲೆಯಿಂದ ಮನೆಗೆ ಹಿಂತಿರುಗಿ ಬಂದಾಗ ಆತನು ಗಡಿಯಾರದ ಕಡೆ ನೋಡಿದನು.



(ಈ) ಈಗ ಗಡಿಯಾರದಲ್ಲಿ ಸಮಯ ಎಷ್ಟು? ________

(ಉ) ಸೂರ್ಯ ಆಲೋಚಿಸುತ್ತಾ, ಇನ್ನೂ 3 ಗಂಟೆಗಳ ನಂತರ ನಾವು ಸಿನಿಮಾಗೆ ಹೋಗಬೇಕಂದು ಅಂದುಕೂಂಡನು. ಯಾವ ಸಮಯಕ್ಕೆ ಸೂರ್ಯ ತನ್ನ ಮನೆಯಿಂದ ಸಿನಿಮಾಗೆ ಹೊರಡುತ್ತಾನೆ?________

ಕೆಳಗೆ ತೋರಿಸಿದ ಯಾವ ಗಡಿಯಾರದ ಮೇಲೆ ತಿಳಿಸಿದ ಸಮಯವನ್ನು ಸೂಚಿಸುತ್ತದೆ. ಅದನ್ನು ಸೊನ್ನೆಯಿಂದ ◯ ಸುತ್ತಿರಿ.








SCERT TELANGANA

## ಇವುಗಳನ್ನು ಮಾಡಿರಿ



1. (ಅ) ಗಡಿಯಾರವು ಎಷ್ಟು ಸಮಯವನ್ನು ಸೂಚಿಸುತ್ತದೆ?______________

(ಆ) 5 ಗಂಟೆಗಳ ಮುಂಚೆ ಸಮಯವು ಎಷ್ಟಾಗಿರುತ್ತದೆ?______________

(ಇ) 4 ಗಂಟೆಗಳ ನಂತರ ಸಮಯವು ಎಷ್ಟಾಗಿದೆ? ______________

2. 

(ಅ) ಗಡಿಯಾರವು ಎಷ್ಟು ಸಮಯವನ್ನು ಸೂಚಿಸುತ್ತದೆ? __________

(ಆ) 3 ಗಂಟೆಗಳ ಮುಂಚೆ ಸಮಯವು ಎಷ್ಟಾಗಿರುತ್ತದೆ? __________

(ಇ) 2 ಗಂಟೆಗಳ ನಂತರ ಸಮಯವು ಎಷ್ಟಾಗುತ್ತದೆ ? __________

### ಒಂದು ದಿನ ಬೆಳಗಿನ ವೇಳೆ ಬಂಟೀ!



ಬಂಟೀ ಶಾಲೆಗೆ ಹೋಗಲು ತಡವಾಗುತ್ತದೆ. ಆತುರವಾಗಿ ಸ್ನಾನ ಮಾಡುವುದಕ್ಕೆ ಹೋಗುತ್ತಾ ಗಡಿಯಾರವನ್ನು ನೋಡಿದನು. ಗಡಿಯಾರವು ಎಷ್ಟು ಸಮಯವನ್ನು ಸೂಚಿಸುತ್ತದೆ?



ಸ್ನಾನ ಮಾಡಿದ ನಂತರ ಬಂಟೀ ಮತ್ತೇ ಗಡಿಯಾರವನ್ನು ನೋಡಿದನು. ದೊಡ್ಡಮುಳ್ಳು 3ರ ಮೇಲೆ ಇದೆ.


ಗಡಿಯಾರದಲ್ಲಿ ಸಮಯವನ್ನು ಯಾವ ರೀತಿ ನೋಡಬೇಕೋ? ಬಂಟೀಗೆ ಅವರ ಶಿಕ್ಷಕ ಹೇಳಿದ್ದು ಜ್ಞಾಪಿಸಿಕೊಳ್ಳುತ್ತಾನೆ.

ಸಣ್ಣ ಮುಳ್ಳು ಗಂಟೆಗಳನ್ನು ಸೂಚಿಸುತ್ತದೆ. ದೊಡ್ಡ ಮುಳ್ಳು ನಿಮಿಷಗಳನ್ನು ಸೂಚಿಸುತ್ತದೆ. ಒಂದು ವೇಳೆ ದೊಡ್ಡ ಮುಳ್ಳು 1ರ ಮೇಲೆ ಒಂದು ಇದ್ದರೆ 5 ನಿಮಿಷಗಳು ಆಗಿದೆ ಎಂದು ಅರ್ಥ. ದೊಡ್ಡಮುಳ್ಳು 2ರ ಮೇಲಿದ್ದರೆ ಅದರ ಅರ್ಥ 10 ನಿಮಿಷಗಳು ಆಗಿದೆ.ಅದೇ ರೀತಿಯಾಗಿ ಅದು 3ರ ಮೇಲಿದ್ದರೆ ಅದರ ಅರ್ಥ 15 ನಿಮಿಷಗಳು, 4ರ ಮೇಲಿದ್ದರೆ 20 ನಿಮಿಷಗಳು ಆಗಿದೆಂದು ಅರ್ಥ. ಒಂದು ವೇಳೆ ನಿಮಿಷಗಳ ಮುಳ್ಳು 7ರ ಮೇಲಿದ್ದರೆ ಎಷ್ಟುನಿಮಿಷಗಳು ಆಗುತ್ತದೆ? ಅದೇ ರೀತಿಯಾಗಿ ನಿಮಿಷಗಳ ಮುಳ್ಳು ಒಂದು ಸಾರಿ ಪೂರ್ತಿ ಸುತ್ತು ತಿರುಗಿ 12ರ ಮೇಲಿದ್ದರೆ ಎಷ್ಟು ನಿಮಿಷಗಳು ಆದಂತೆ? ಹಾಗಾದರೆ ಒಂದು ಗಂಟೆಯಲ್ಲಿ ಎಷ್ಟು ನಿಮಿಷಗಳು ಇರುತ್ತವೆಯೋ ತಿಳಿಸಿ.



SCERT TELANGANA

**ಬಂಟೀ** : ಈಗ ಎಂಟು ಹದಿನೈದು ಆಗುತ್ತಿದೆ. ನಾನು ಬೇಗ ಹೊರಡಬೇಕು. ಆತನು ಬೇಗ ಬೇಗ ಬಟ್ಟೆಗಳು ಹಾಕಿಕೊಂಡು ಗಬಗಬ ಅವರ ಅಮ್ಮ ಕೊಟ್ಟಿರುವ ರೊಟ್ಟಿ ತಿಂದನು. ಮತ್ತೇ ಮನೆಬಿಟ್ಟು ಹೋಗುವಾಗ ಗಡಿಯಾರದ ಕಡೆ ನೋಡಿದನು.



ಈಗ ಎಂಟು ನಲವತ್ತೈದು. ನಾನು ಶಾಲೆಗೆ ಸರಿಯಾದ ಸಮಯಕ್ಕೆ ತಲುಪುವುದಿಲ್ಲ.

(ಅ) ಬಂಟೀ ಶಾಲೆಗೆ 15 ನಿಮಿಷಗಳು ತಡವಾಗಿ ಬಂದನು. ಆದರೆ ಬಂಟೀ ಶಾಲೆಗೆ ಯಾವ ಸಮಯದಲ್ಲಿ ಸೇರಿದನು?______________

**ಇವು ಮಾಡಿರಿ**

1. ಕೆಳಗಿನ ಗಡಿಯಾರಗಳಲ್ಲಿ ಯಾವುವು ಕೊಟ್ಟಿರುವ ಸಮಯವನ್ನು ತಿಳಿಸುತ್ತದೆ. ಅದರ ಎದುರುಗಡೆ ಟಿಕ್ ಮಾಡಿ.


(a) 2:05

(b) 4:15


  


(c) 7:25


  


SCERT TELANGANA

2. ಈ ಗಡಿಯಾರಗಳಲ್ಲಿ ಸಮಯವು ಎಷ್ಟಾಗಿದೆಯೆಂದು ತಿಳಿಸಿ?

(a)


(b)



(c)


(d)



(e)


(f)



3. ಕೊಟ್ಟಿರುವ ಸಮಯವನ್ನು ಗಡಿಯಾರದಲ್ಲಿ ಗುರ್ತಿಸಿ.

(a)


**11:45**

(b)



**3:30**

(c)



**9:10**

(d)


**1:35**

(e)


**12:15**

(f)


**6:30**

SCERT TELANGANA

**ಪ್ರಯತ್ನಿಸಿರಿ**

1. ಸಮಯ ಕಳೆಯುವಂತೆ ಗಂಟೆಯ ಮುಳ್ಳು ಸಹ ಚಲಿಸುತ್ತದೆಯೇ? ಗಂಟೆಗಳ ಮುಳ್ಳು ಒಂದು ಮತ್ತೊಂದು ಸಂಖ್ಯೆಯಿಂದ ಸಂಖ್ಯೆಯ ಮೇಲೆ ಚಲಿಸುವುದಕ್ಕೆ ಎಷ್ಟು ನಿಮಿಷಗಳ ಸಮಯ ಹಿಡಿಯುತ್ತದೆ?.
2. ಕೆಳಗಿನ ಕಾಲಗಳಲ್ಲಿ ಯಾವ ಸಮಯದಲ್ಲಿ ನಿಮಿಷಗಳ ಮುಳ್ಳು , ಗಂಟೆಯ ಮುಳ್ಳು ,ಒಂದು ಮೇಲೆ ಮತ್ತೊಂದರೊಂದಿಗೆ ಸೇರಿಕೊಳ್ಳುತ್ತವೆ ?

   (ಅ) 6 ಗಂಟೆಗಳು, 7 ಗಂಟೆಗಳ ಮಧ್ಯ ________________

   (ಆ) 9 ಗಂಟೆಗಳು, 10 ಗಂಟೆಗಳ ಮಧ್ಯ ________________

   (ಇ) 2 ಗಂಟೆಗಳು, 2 ಗಂಟೆಗಳ ಮಧ್ಯ ________________

   (ಈ) 12 ಗಂಟೆಗಳು, 1 ಗಂಟೆಗಳ ಮಧ್ಯ ________________

ಇಲ್ಲಿಯವರಿಗೂ ನಾವು ಗಡಿಯಾರವನ್ನು ಓದುವುದು ಕಲಿತುಕೊಂಡಿದ್ದೇವೆ. ಈಗ ಕ್ಯಾಲೆಂಡರ್‌ನ್ನು ನೋಡುವುದು ಹೇಗೆಂಬುದು ತಿಳಿದುಕೊಳ್ಳೋಣ.

ಜಯ ಟೀಚರ್ 4ನೇ ತರಗತಿ ಮಕ್ಕಳಿಗೆ 2012ನೇ ವರ್ಷದ ಕ್ಯಾಲೆಂಡರ್‌ನ ಬಗ್ಗೆ ವಿವರಿಸಬೇಕೆಂದುಕೊಂಡರು. ಅದಕ್ಕೋಸ್ಕರ ಆಕೆ ಈ ವರ್ಷದಲ್ಲಿ ಪಾಠಶಾಲೆಗೆ ರಜಾದಿನಗಳ ಪಟ್ಟಿಯನ್ನು ಪ್ರತಿಯೊಬ್ಬ ಮಕ್ಕಳಿಗೆ ಕೊಡಲಾಗಿದೆ.

ನಂತರ ಆಕೆ ಅವರನ್ನು ತಮ್ಮ ತರಗತಿಯಲ್ಲಿರುವ ಕ್ಯಾಲೆಂಡರ್‌ನ್ನು ನೋಡಿ ಎಂದು ಹೇಳಿದಳು. ರಜಾ ದಿನಗಳಾಗಿ ಘೋಷಿಸಿದ ದಿನಗಳು, ಕೆಲಸಮಾಡುವ ದಿನವೇ ? ಅಥವಾ ಭಾನುವಾರವೇ ?

1. ÖÝ¨ ©®WÙ®á PÝÂÇí vÃ...®È ◯ Óá£Ä. ÊÝÃ¨È ¿ÞÊ ©® B ÖÝ ÝÃáñ¨ãà P:ÙX® ±q ¿áÈ ÝÃÀáÄ. ¿ÞÊ ÖÝWÙÝ¨Ãã »Ý®áÊÝÃ¨í¨á Ýí©Ê¿Þ?

| ಹಬ್ಬ | ದಿನಾಂಕ | ದಿನ |
|---|---|---|
| ದೀಪಾವಳಿ | 13 ನವೆಂಬರ್ | |
| ಸಂಕ್ರಾಂತಿ | 14 ಜನವರಿ | |
| ಗುರುನಾನಕ್ ಜಯಂತಿ | 17 ನವೆಂಬರ್ | |
| ಕ್ರಿಸ್‌ಮಸ್ | 25 ಡಿಸೆಂಬರ್ | |
| ಈದ್ | 9 ಆಗಸ್ಟ್ | |
| ಹೋಳಿ | 27 ಮಾರ್ಚ್ | |

2. ಈ ವರ್ಷದಲ್ಲಿ ಜರುಗುವ ಹಬ್ಬಗಳನ್ನು ಕ್ರಮವಾಗಿ ಪಟ್ಟಿಕೆ ರೂಪದಲ್ಲಿ ನಿಮ್ಮ ನೋಟು ಪುಸ್ತಕದಲ್ಲಿ ಬರೆಯಿರಿ.

SCERT TELANGANA

# ಕ್ಯಾಲೆಂಡರ್ –2013

## ಜನವರಿ

| ಬಾನು | ಸೋಮ | ಮಂಗ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |
| | | | | | | |

## ಫೆಬ್ರವರಿ

| ಬಾನು | ಸೋಮ | ಮಂಗ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | | |
| | | | | | | |

## ಮಾರ್ಚ್

| ಬಾನು | ಸೋಮ | ಮಂಗ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |
| 31 | | | | | | |

## ಏಪ್ರಿಲ್

| ಬಾನು | ಸೋಮ | ಮಂಗ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | | | | |
| | | | | | | |

## ಮೇ

| ಬಾನು | ಸೋಮ | ಮಂಗ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |
| | | | | | | |

## ಜೂನ್

| ಬಾನು | ಸೋಮ | ಮಂಗ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |
| 30 | | | | | | |

## ಜುಲೈ

| ಬಾನು | ಸೋಮ | ಮಂಗ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |
| | | | | | | |

## ಆಗಸ್ಟ್

| ಬಾನು | ಸೋಮ | ಮಂಗ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |
| | | | | | | |

## ಸೆಪ್ಟೆಂಬರ್

| ಬಾನು | ಸೋಮ | ಮಂಗ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | | | | | |
| | | | | | | |

## ಅಕ್ಟೋಬರ್

| ಬಾನು | ಸೋಮ | ಮಂಗ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |
| | | | | | | |

## ನವಂಬರ್

| ಬಾನು | ಸೋಮ | ಮಂಗ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |
| | | | | | | |

## ಡಿಸೆಂಬರ್

| ಬಾನು | ಸೋಮ | ಮಂಗ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |
| | | | | | | |

SCERT TELANGANA

ಜಯ ಟೀಚರ್ 2013 ಕ್ಯಾಲೆಂಡರ್‌ನ ಬಗ್ಗೆ ಅನೇಕ ವಿಧಧ ಪ್ರಶ್ನೆಗಳು ಮಕ್ಕಳಿಗೆ ಕೇಳಲು ಆರಂಭಿಸಿದಳು. ನಿಮಗೆ ಈ ಪ್ರಶ್ನೆಗಳಿಗೆ ಉತ್ತರಗಳು ಗೊತ್ತೇ ?

1. ಒಂದು ವರ್ಷದಲ್ಲಿ ಎಷ್ಟು ತಿಂಗಳುಗಳಿವೆ? ________________
2. ಎಲ್ಲಾ ತಿಂಗಳುಗಳಲ್ಲಿನ ದಿನಗಳ ಸಂಖ್ಯೆಯನ್ನು ಕೂಡಿಸು. ವರ್ಷದಲ್ಲಿ ಒಟ್ಟು ಎಷ್ಟು ದಿನಗಳಿವೆ ತಿಳಿಸಿ?________________
3. ಮೇ ನಂತರ ಬರುವ ತಿಂಗಳು ಯಾವುದು ?________________

   ಡಿಸೆಂಬರ್‌ನ ಮುಂಚೆ ಬರುವ ತಿಂಗಳು ಯಾವುದು?________________
4. (ಅ) ಮಾರ್ಚ್ ತಿಂಗಳಲ್ಲಿ ಎಷ್ಟು ಗುರುವಾರಗಳಿವೆ? ________________

   ಅವು ಯಾವ ದಿನಾಂಕಗಳಲ್ಲಿವೆ?________________

   (ಆ) ಮಾರ್ಚ್ ತಿಂಗಳಲ್ಲಿ ಎಷ್ಟು ಭಾನುವಾರಗಳಿವೆ? ________________

   ಅವು ಯಾವ ದಿನಾಂಕಗಳಲ್ಲಿವೆ?________________
5. ಕೆಳಗೆ ಸೂಚಿಸಿದ ದಿನಾಂಕಗಳನ್ನು ಕ್ಯಾಲೆಂಡರ್‌ನಲ್ಲಿ ಸುತ್ತಿರಿ. ಅವು ಯಾವ ದಿನಗಳಲ್ಲಿ ಬರುತ್ತವೆಯೋ ತಿಳಿಸಿ.

   (ಅ) ಗಣರಾಜ್ಯ ದಿನಾಚರಣೆ 26 ಜನವರಿ ________________

   (ಆ) ಮಕ್ಕಳ ದಿನಾಚರಣೆ 14 ನವೆಂಬರ್ ________________

   (ಇ)ಸ್ವಾತಂತ್ರ್ಯ ದಿನಾಚರಣೆ 15 ಆಗಸ್ಟು ________________
6. 31 ಡಿಸೆಂಬರ್ ಸೋಮವಾರವಾದರೆ, 1 ಜನವರಿನಂತರದ ವರ್ಷ ಯಾವ ದಿನ ಆಗುತ್ತದೆ ? ನಂತರ ಸೋಮವಾರ ಯಾವ ದಿನಾಂಕ ಆಗುತ್ತದೆ?
7. ಪ್ರತಿತಿಂಗಳು 1ನೇ ತಾರೀಖು ಒಂದೇ ದಿನ ಆಗುತ್ತದೆಯಾ? ________________
8.. (ಅ) ಕೊಟ್ಟಿರುವ ಕ್ಯಾಲೆಂಡರ್ ಯಾವ ವರ್ಷಕ್ಕೆ ಸೇರಿದೆ? ________________

   (ಆ) ನಂತರ ಬರುವ ವರ್ಷ ಯಾವುದು? ಈ ವರ್ಷಕ್ಕೆ ಮುಂಚೆ ಬರುವ ವರ್ಷ ಯಾವುದು?

   (ಇ)ನೀವು ಯಾವ ವರ್ಷದಲ್ಲಿ 1ನೇ ತರಗತಿಯಾಗಿರುವೆ? ____________
9. ಫೆಬ್ರವರಿ, 2012 ಕ್ಯಾಲೆಂಡರ್ ನೋಡಿ.

   ಅ) ಫೆಬ್ರವರಿ 2012ರಲ್ಲಿ ಎಷ್ಟು ದಿನಗಳಿವೆ? ________________

   ಆ) ಫೆಬ್ರವರಿ 2013ರಲ್ಲಿ ಎಷ್ಟು ದಿನಗಳಿವೆ?________________

   ಇ) ಫೆಬ್ರವರಿ 2014ರಲ್ಲಿ ಎಷ್ಟು ದಿನಗಳಿವೆ?________________

   4) ನಂತರ ಬರುವ ಯಾವ ವರ್ಷದಲ್ಲಿ ಫೆಬ್ರವರಿಯಲ್ಲಿ 29 ದಿನಗಳಿರುತ್ತವೆ?

   ________________

   2012 ನ್ನು ಲೀಪ್ ವರ್ಷ(ಅಧಿಕ ವರ್ಷ) ಎನ್ನುವರು. ಏಕೆ ಫೆಬ್ರವರಿಯಲ್ಲಿ 28ರ ಬದಲಾಗಿ 29 ದಿನಗಳಿವೆ.

ಫೆಬ್ರವರಿ 2012

| ಭಾನು | ಸೋಮ | ಮಂಗ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | | | |

SCERT TELANGANA

**ಜೂನ್ – 2014**

(ಅ) ಈ ತಿಂಗಳಲ್ಲಿ ಎಷ್ಟು ದಿನಗಳಿವೆ? ________________

(ಆ) ಈ ತಿಂಗಳಲ್ಲಿ ಎಷ್ಟು ಗುರುವಾರಗಳಿವೆ ? ________________

(ಇ) ಈ ತಿಂಗಳಲ್ಲಿ ಎಷ್ಟು ಭಾನುವಾರಗಳಿವೆ ? ________________

(ಈ) ಒಂದು ತಿಂಗಳಿಗೆ 6 ಸೋಮವಾರಗಳು ಇರುತ್ತವೆಯಾ? ಏಕೆ?

ಮೇ – 2014

| ಬಾನು | ಸೋಮ | ಮಂಗ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |

ಫೆಬ್ರವರಿ 2014

| ಬಾನು | ಸೋಮ | ಮಂಗ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | | | |
| | | | | | | |
| | | | | | | |
| | | | | | | |
| | | | | | | |

ಈಗ ಮುಂದಿನ ತಿಂಗಳಿಗೆ ಕ್ಯಾಲೆಂಡರ್ ತಯಾರು ಮಾಡಿ.

## ಅಭ್ಯಾಸ

1. ಉಮ್ಮರ್‌ನ ವಯಸ್ಸು 9 ವರ್ಷಗಳು, ಆತನ ತಂದೆಯ ವಯಸ್ಸು ತನ್ನ ವಯಸ್ಸಿಗಿಂತ 4 ರಷ್ಟು ಇದೆ. ಉಮರ್ ತಂದೆಯ ವಯಸ್ಸು ಎಷ್ಟು?
2. ಸುನಂದ ಆಟವಾಡುವುದಕ್ಕೆ ತನ್ನ ಸ್ನೇಹಿತಳ ಮನೆಗೆ ಸಂಜೆ 5:15 ಕ್ಕೆ ಹೋದಳು. ಆಕೆ ಮರಳಿ 7:30 ಕ್ಕೆ ಮನೆಗೆ ಬಂದಳು. ಸುನಂದ ತನ್ನ ಸ್ನೇಹಿತಳ ಜೊತೆಗೆ ಆಟವಾಡುವುದಕ್ಕೆ ಎಷ್ಟು ಸಮಯ ತೆಗೆದುಕೊಂಡಳು?
3. ಗಿರೀಷ ಬೆಳಿಗ್ಗೆ 7:15 ಕ್ಕೆ ಹೊಲಕ್ಕೆ ಹೋಗಿದ್ದಾನೆ. ಆತನು ಮರಳಿ ಮನೆಗೆ ಮದ್ಯಾಹ್ನ 1:45ಕ್ಕೆ ಬಂದನು. ಗಿರೀಷ್ ಎಷ್ಟು ಸಮಯ ಹೊಲಕ್ಕೋಸ್ಕರ ತೆಗೆದುಕೊಂಡಿದ್ದಾನೆ?
4. ಸಂತೋಷ ಕುಟುಂಬ ಸದಸ್ಯರು, ಆತನ ಸ್ನೇಹಿತರು ಸೇರಿ ಬೆಳಿಗ್ಗೆ 10:30 ಕ್ಕೆ ಪಿಕ್‌ನಿಕ್‌ಗೆ ಹೋಗಿ ಸಂಜೆ 4:20 ರವರೆಗೆ ಇದ್ದರೆ. ಸಂತೋಷ್ ಅವರ ಕುಟುಂಬ ಸದಸ್ಯರು ಎಷ್ಟು ಸಮಯ ಪಿಕ್‌ನಿಕ್‌ಕ್ಕೋಸ್ಕರ ತೆಗೆದುಕೊಂಡರು?
5. ಕೆಳಗಿನ ಗಡಿಯಾರಗಳನ್ನು ನೋಡಿ, ಸಮಯ ಎಷ್ಟು ತಿಳಿಸಿ.








SCERT TELANGANA

# 12 ಸಮಭಾಗಗಳಾಗಿ ವಿಭಜಿಸೋಣ


ಅಮ್ಮ,ತಟ್ಟೆಯಲ್ಲಿ 12 ಇಡ್ಲಿಗಳನ್ನು ಹಾಕಿದಳು .




**ಅಮ್ಮ :** ಸೋನು! ಕೌಶಿಕ್!! ಈ ತಟ್ಟೆಯಲ್ಲಿನ ಇಡ್ಲಿಗಳನ್ನು ನೀವಿಬ್ಬರು ಸಮಾನವಾಗಿ ಹಂಚಿಕೊಂಡು ತಿನ್ನಿರಿ.
ಸೋನು ಮತ್ತು ಕೌಶಿಕ್ ಆ ಇಡ್ಲಿಗಳನ್ನು ಈ ರೀತಿಯಾಗಿ ಹಂಚಿಕೊಂಡರು.
ಅವರಿಬ್ಬರು ಆ ಇಡ್ಲಿಗಳನ್ನು ಸಮಾನವಾಗಿ ಹಂಚಿಕೊಂಡರೇ?



ಈಗ ಈ ಇಡ್ಲಿಗಳನ್ನು ನಾಲ್ವರಿಗೆ ಸಮಾನವಾಗಿ ಹಂಚಬಲ್ಲಿರಾ?




ಅದೇ ರೀತಿಯಾಗಿ ಈ ಕೆಳಗಿನ 9 ಪೆನ್ಸಿಲ್‌ಗಳನ್ನು ಸಹ ಮೂವರಿಗೆ ಹಂಚಬಲ್ಲಿರಾ?




SCERT TELANGANA

16 ಗೋಲಿಗಳನ್ನು ನಾಲ್ಕು ಜನ ಮಕ್ಕಳಿಗೆ ಹೇಗೆ ಹಂಚುವಿರಿ?



ಈ ದಿನ ಶಿಕ್ಷಕಿ, ತರಗತಿಯಲ್ಲಿ ಭಾಗಾಕಾರವನ್ನು ಬೋಧಿಸುತ್ತಾಳೆ. ಆಕೆ ಕಪ್ಪು ಹಲಗೆಯ ಮೇಲೆ 12 ಪೆನ್ಸಿಲ್‌ಗಳ ಚಿತ್ರಗಳನ್ನು ಹಾಕಿದಳು. ಸೋನುಗೆ ಆ 12 ಪೆನ್ಸಿಲ್‌ಗಳೂ ಮೂವರಿಗೆ ಹಂಚು ಎಂದು ಹೇಳಿದಳು.

ಸೋನು ಈ ರೀತಿಯಾಗಿ ಕಪ್ಪುಹಲಗೆಯ ಮೇಲಿರುವ ಪೆನ್ಸಿಲ್‌ಗಳಿಗೆ ◯ ಸುತ್ತಿದಳು.



12 ಪೆನ್ಸಿಲ್‌ಗಳು ಮೂವರಿಗೆ ಸಮವಾಗಿ ಹಂಚಿದಾಗ ಪ್ರತಿಯೊಬ್ಬರಿಗೆ 4 ಪೆನ್ಸಿಲ್‌ಗಳು ಬರುತ್ತವೆ ಎಂದು ಸೋನು ಹೇಳಿದಳು.
ಸೋನುನ ಸಹಪಾಠಿ ವಿದ್ಯಾರ್ಥಿ : ನೀನು ಸರಿಯಾಗಿಯೇ ಹೇಳಿದ್ದೀಯ.

12 ನ್ನು 3 ರಿಂದ ಭಾಗಿಸಿದಾಗ 4 ಬರುತ್ತದೆ. ಇದನ್ನು ಈ ರೀತಿಯಾಗಿ ಬರೆಯುತ್ತೇವೆ.

$12 \div 3 = 4$ ಮತ್ತು ಅದೇ ರೀತಿಯಾಗಿ $\frac{12}{3} = 4$

**ಇವು ಮಾಡಿರಿ**

1. ಸೋನಿನ ಸಹಪಾಠಿ ವಿದ್ಯಾರ್ಥಿ ಬರೆದ ವಿಧವಾಗಿ ಈ ಕೆಳಗಿನ ವಾಕ್ಯಗಳನ್ನು ಬರೆಯಿರಿ.
   (ಅ) ಲತ 6 ವಡೆಗಳನ್ನು ಮಾಡಿ, ಅವುಗಳನ್ನು 3 ಜನ ಮಕ್ಕಳಿಗೆ ಸಮಾನವಾಗಿ ಹಂಚಿದಳು?
   (ಆ) ಶಿಕ್ಷಕ 16 ನೋಟು ಪುಸ್ತಕಗಳನ್ನು 8 ಜನ ಮಕ್ಕಳಿಗೆ ಸಮಾನವಾಗಿ ಹಂಚಿದರು?
   (ಇ) ಅಮ್ಮ 10 ರೊಟ್ಟಿಗಳನ್ನು ಕುಟುಂಬದಲ್ಲಿರುವ 5 ಜನಕ್ಕೆ ಸಮಾನವಾಗಿ ಹಂಚಿದಳು?

2. ಈ ಕೆಳಗೆ ಕೊಟ್ಟಿರುವಗಳಿಗುಣವಾಗಿ ಪದ ಸಮಸ್ಯೆಗಳನ್ನು / ವಾಕ್ಯಗಳನ್ನು ಬರೆಯಿರಿ.

   (ಅ) $\frac{4}{2}$ (ಆ) $\frac{14}{2}$ (ಇ) $\frac{15}{3}$

   (ಈ) $\frac{16}{2}$ (ಉ) $\frac{18}{6}$

SCERT TELANGANA


## ರೊಟ್ಟಿಗಳನ್ನು ಸಮವಾಗಿ ಹಂಚಿರಿ.



ಶಿಕ್ಷಕಿ ಮಕ್ಕಳನ್ನು ಈ ವಿಧವಾಗಿ ಕೇಳಿದಳು.
ಒಂದು ರೊಟ್ಟಿಯನ್ನು ಇಬ್ಬರಿಗೆ ಸಮವಾಗಿ ಹೇಗೆ ಹಂಚಿ ಕೊಡುವಿರಿ?



ಮಕ್ಕಳು ರೊಟ್ಟಿಗಳನ್ನು ಹಂಚಿಕೊಳ್ಳುವುದನ್ನು ನೋಟ್ ಪುಸ್ತಕದಲ್ಲಿ ಈ ವಿಧವಾಗಿ ಚಿತ್ರಗಳು ಎಳೆದು ತೋರಿಸಿದರು.






ನೀವೆಲ್ಲರು ರೊಟ್ಟಿಗಳನ್ನು ಎರಡು ಸಮಭಾಗಗಳಾಗಿ ಮಾಡಬೇಕು (ಸುರೇಶ್! ನೀನು ಎಳೆದ ಚಿತ್ರದಲ್ಲಿ ಎರಡು ಸಮಭಾಗಗಳಿಲ್ಲ. ಅದನ್ನು ಸರಿಮಾಡು) ಈಗ ಹೇಳಿ. ಇದರಲ್ಲಿಂದ ಪ್ರತಿಯೊಬ್ಬರಿಗೆ ಎಷ್ಟು ರೊಟ್ಟಿ ಬರುತ್ತವೆ.

ಒಬ್ಬೊಬ್ಬರಿಗೆ ಅರ್ಧ ರೊಟ್ಟಿ ಬರುತ್ತದೆ.




ಶಿಕ್ಷಕಿ :- ಹೌದು, ಅರ್ಧ ಎಂದರೆ ಎರಡು ಸಮಭಾಗಗಳಲ್ಲಿ ಒಂದು ಭಾಗ. ಅರ್ಧವನ್ನು $\frac{1}{2}$ ರಿಂದ ಸೂಚಿಸುತ್ತೇವೆ..


ಆದ್ದರಿಂದ $1 \div 2 = \frac{1}{2}$



SCERT TELANGANA

**ಶಿಕ್ಷಕಿ** : ಈಗ, ಒಂದು ರೊಟ್ಟಿಯನ್ನು ನಾಲ್ವರಿಗೆ ಸಮವಾಗಿ ಹಂಚಿರಿ.


ಕಮಲತನ್ನ ನೋಟ್ ಪುಸ್ತಕದಲ್ಲಿ ಈ ವಿಧವಾಗಿ ಚಿತ್ರವನ್ನು ಎಳೆದು ತೋರಿಸಿದಳು.



**ಕಮಲ** : ಈ ನಾಲ್ಕು ಸಮಭಾಗಗಳಿಂದ ಪ್ರತಿಯೊಬ್ಬರಿಗೆ ಒಂದು ಕಾಲು ಭಾಗ ರೊಟ್ಟಿ ಬರುತ್ತದೆ.


**ಶಿಕ್ಷಕಿ** : ಸರಿಯಾಗಿ ಹೇಳಿದೆ.ಕಾಲು ಭಾಗವನ್ನು $\frac{1}{4}$ ಎಂದು ಬರೆಯುತ್ತೇವೆ.

ಆದ್ದರಿಂದ $1 \div 4 = \frac{1}{4}$



**ಶಿಕ್ಷಕಿ** : ಈಗ ನೀವು 3 ರೊಟ್ಟಿಗಳನ್ನು ಇಬ್ಬರಿಗೆ ಸಮವಾಗಿ ಹಂಚಬಲ್ಲಿರಾ?

ಕಮಲ ಕೆಳಗಿನ ವಿಧವಾಗಿ ಹಂಚಿದಳು.




**ಕಮಲ** : ಮೂರು ರೊಟ್ಟಿಗಳನ್ನು ಇಬ್ಬರಿಗೆ ಸಮವಾಗಿ ಹಂಚಲಾಗಿ, ಪ್ರತಿಯೊಬ್ಬರಿಗೆ ಒಂದು ಪೂರ್ಣರೊಟ್ಟಿ ಮತ್ತು ಒಂದು ಅರ್ಧರೊಟ್ಟಿ ಬರುತ್ತದೆ.

ಇದನ್ನು ಈ ರೀತಿಯಾಗಿ ಬರೆಯುತ್ತೇವೆ.

$$\frac{3}{2} = 1 + \frac{1}{2}$$

SCERT TELANGANA

ಈಗ, ನೀವು ಈ 5 ರೊಟ್ಟಿಗಳನ್ನು ಇಬ್ಬರಿಗೆ ಸಮವಾಗಿ ಹಂಚಿರಿ.




ಒಬ್ಬೊಬ್ಬರಿಗೆ ಪೂರ್ಣರೊಟ್ಟಿಗಳು ಎಷ್ಟು ಬರುತ್ತವೆ? ____________

ಒಬ್ಬೊಬ್ಬರಿಗೆ ಅರ್ಧ ರೊಟ್ಟಿಗಳು ಎಷ್ಟು ಬರುತ್ತವೆ ? ____________

ಆದ್ದರಿಂದ, $\frac{5}{2} =$ ____________ + ____________

5 ರೊಟ್ಟಿಗಳನ್ನು ನಾಲ್ವರಿಗೆ ಹೇಗೆ ಹಂಚಬಲ್ಲಿರಿ? ಪ್ರಯತ್ನಿಸಿ.



SCERT TELANGANA

ಒಬ್ಬೊಬ್ಬರಿಗೆ ಎಷ್ಟು ಪೂರ್ಣರೊಟ್ಟಿಗಳು ಬರುತ್ತವೆ? ____________

ಒಬ್ಬೊಬ್ಬರಿಗೆ ಎಷ್ಟು ಕಾಲು ಭಾಗ ರೊಟ್ಟಿಗಳು ಬರುತ್ತವೆ? ____________

ಆದ್ದರಿಂದ $\frac{5}{4} =$ ____________ + ____________

## ಒಂದು ಕಲ್ಲಂಗಡಿ ಹಣ್ಣನ್ನು ಸಮಭಾಗಗಳಾಗಿ ಮಾಡೋಣ!



ಸೋನುಗೆ ಕಲ್ಲಂಗಡಿ ಹಣ್ಣು ಅಂದರೆ ತುಂಬಾ ಇಷ್ಟ. ಅವಳ ಅಮ್ಮ ಸಂತೆಯಿಂದ ಒಂದು ಕಲ್ಲಂಗಡಿಹಣ್ಣನ್ನು ಕೊಂಡು ತಂದಳು.

ಆಕೆ ಅದನ್ನು ಎರಡು ಸಮಭಾಗಗಳಾಗಿ ಮಾಡಿದಳು. ಅದರಲ್ಲಿಂದ ಒಂದು ಭಾಗವು ಸೋನುಗೆ ಮತ್ತೊಂದು ಭಾಗವನ್ನು ಕೌಶಿಕ್‌ಗೆ ಕೊಟ್ಟಳು.


(ಅ) ಕಲ್ಲಂಗಡಿ ಹಣ್ಣಿನಲ್ಲಿ ಸೋನುಗೆ ಬಂದಿದ್ದ ಭಾಗವೆಷ್ಟು? __________

(ಆ) ಕೌಶಿಕ್‌ಗೆ ಬಂದ ಭಾಗವೆಷ್ಟು? __________


(ಇ) ಇನ್ನೂ ಇಬ್ಬರು ಮಕ್ಕಳು ಅಲ್ಲಿ ಇದ್ದರೆ, ಆ ಕಲ್ಲಂಗಡಿ ಹಣ್ಣನ್ನು ಎಷ್ಟು ಸಮಭಾಗಗಳಾಗಿ ಮಾಡಬೇಕು? __________

(ಈ) ಆಗ ಪ್ರತಿಯೊಬ್ಬರಿಗೆ ಕಲ್ಲಂಗಡಿ ಹಣ್ಣಿನಲ್ಲಿ ಬಂದ ಭಾಗವೆಷ್ಟು?

__________



ಈಗ ಒಂದು ಕೇಕ್‌ನ್ನು ನಾಲ್ವರಿಗೆ ಸಮವಾಗಿ ಹಂಚೋಣ.



(ಅ) ಒಂದು ಕೇಕು 4 ಸಮಭಾಗಗಳಾಗಿ ಮಾಡಿದ, ಆಗ ಒಂದು ಭಾಗವನ್ನು $1 \div 4$ ರಿಂದ ಅಥವಾ ________ ಎಂದು ಸಹ ಬರೆಯುತ್ತೇವೆ.

(ಆ) ಈಗ ಇದನ್ನು ನಾಲ್ವರಿಗೆ ಹಂಚಿದರೆ, ಒಬ್ಬೊಬ್ಬರಿಗೆ ಎಷ್ಟು ಭಾಗ ಬರುತ್ತದೆ? ________

(ಇ) ಒಂದು ವೇಳೆ ಆ ನಾಲ್ಕು ಸಮಭಾಗಗಳಲ್ಲಿ ಎರಡು ಭಾಗಗಳನ್ನು ಒಬ್ಬರೇ ತಿನ್ನುವುದಾದರೆ, ಆಕೆ / ಅವನು ಎಷ್ಟು ಭಾಗ ಕೇಕ್‌ನ್ನು ತಿಂದಹಾಗೆ? ________

(ಈ) ಈಗ ಆಕೆ / ಅವನು ತಿನ್ನುವ ಭಾಗವನ್ನು, ಮೇಲೆ ತೋರಿಸಿದ ಕೇಕ್ ಚಿತ್ರದಲ್ಲಿ ಬಣ್ಣಹಾಕಿ ನೋಡಿ, ಇದು $\frac{1}{2}$ ಕೇಕ್‌ಗೆ ಸಮವಾಗುತ್ತದೆಯೊ ಅಥವಾ ಇಲ್ಲವೋ ? ________

(ಉ) ಒಬ್ಬ ಆ ನಾಲ್ಕು ಭಾಗಗಳಲ್ಲಿ, 3 ಭಾಗ ಕೇಕ್‌ನ್ನು ತಿಂದಂತಾದರೆ, ಅವನು / ಆಕೆ ಆ ಕೇಕ್‌ನಲ್ಲಿ ಎಷ್ಟು ಭಾಗ ತಿಂದಂತೆ?________


SCERT TELANGANA


## ಪ್ರಯತ್ನಿಸಿರಿ.


1. ಒಂದು ಕಾಗದದ ತುಂಡನ್ನು ತೆಗೆದುಕೊಂಡು ಅದನ್ನು ಸಾಧ್ಯವಾದಷ್ಟು ವಿಧಗಳಾಗಿ ಎರಡು ಅರ್ಧಗಳಾಗಿ ವಿಭಜಿಸಿ.
2. ಮತ್ತೊಂದು ಕಾಗದದ ತುಂಡನ್ನು ತೆಗೆದುಕೊಂಡು, ಸಾಧ್ಯವಾದಷ್ಟು ವಿಧಗಳಲ್ಲಿ ನಾಲ್ಕು ಸಮಭಾಗಗಳಾಗಿ ವಿಭಜಿಸಿ.


## ಇವುಗಳನ್ನು ಮಾಡಿ


1. ಈ ಕೆಳಗೆ ಕೊಟ್ಟಿರುವ ಚಿತ್ರಗಳು ಸಮಭಾಗಗಳಾಗಿ ವಿಭಜಿಸಿವೆ. ಅವುಗಳಲ್ಲಿ ಷೇಡ್ (ಬಣ್ಣ ಹಾಕಿರುವ) ಮಾಡಿದ ಭಾಗವು ಎಷ್ಟು? ಒಂದು ಉದಾಹರಣೆ ಕೆಳಗೆ ಕೊಟ್ಟಿದೆ.

(ಅ)  $\frac{1}{2}$


(ಆ) 


(ಇ) 


(ಈ) 


(ಉ) 


2. ಕೆಳಗಿನ ಚಿತ್ರಗಳಲ್ಲಿ ಕೊಟ್ಟಿರುವ ಭಾಗಕ್ಕೆ ಬಣ್ಣಹಾಕಿರಿ. ಒಂದು ಉದಾಹರಣೆ ಕೊಡಲಾಗಿದೆ.

(ಅ)  $\frac{1}{2}$

(ಆ)  $\frac{1}{2}$

(ಇ)  $\frac{1}{4}$


(ಈ)  $\frac{3}{4}$


(ಉ)  $\frac{2}{4}$


(ಊ)  $\frac{1}{4}$

SCERT TELANGANA

3. ಈ ಕೆಳಗೆ ಕೊಟ್ಟಿರುವ ಚಿತ್ರಗಳಿಂದ ಅರ್ಧ ಭಾಗಕ್ಕೆ ಬಣ್ಣ ಹಾಕಿರಿ.

(ಅ) 


(ಆ) 


(ಇ) 


(ಈ) 


(ಉ) 

4. ಕೆಳಗೆ ಕೊಟ್ಟಿರುವ ಚಿತ್ರಗಳಿಗೆ $\frac{1}{4}$ (ಕಾಲು) ಭಾಗಕ್ಕೆ ಬಣ್ಣ ಹಾಕಿರಿ.

(ಅ) 

(ಆ) 


(ಇ) 

(ಈ) 


SCERT TELANGANA

### ಪ್ರಯತ್ನಿಸಿ

1. ಒಂದು ಆಯತವನ್ನು ಎಷ್ಟು ವಿಧವಾಗಿ ಎರಡು ಸಮಭಾಗಗಳಾಗಿ ವಿಭಜಿಸಬಲ್ಲಿರಿ. ಆಲೋಚಿಸಿ, ಮಾಡಿ ನೋಡಿ.



2. ಒಂದು ಆಯತವನ್ನು ಎಷ್ಟು ವಿಧವಾಗಿ ನಾಲ್ಕು ಸಮಭಾಗಗಳಾಗಿ ವಿಭಜಿಸಬಲ್ಲಿರಿ. ಆಲೋಚಿಸಿ, ಮಾಡಿನೋಡಿ,



### ರಾಣಿ ಹುಟ್ಟಿದ ದಿನ :



ರಾಣಿ ತನ್ನ ಹುಟ್ಟಿದ ದಿನಕ್ಕೆ 40 ಚಾಕ್ಲೆಟ್‌ಗಳು ಕೊಂಡು ತಂದಳು.

(ಅ) ಅದರಲ್ಲಿರುವ ಅರ್ಧ ಚಾಕ್ಲೆಟ್‌ಗಳನ್ನು ತನ್ನ ತರಗತಿಯಲ್ಲಿ ಹಂಚಿದಳು. ಆದರೆ ಆಕೆಯು ತರಗತಿಯಲ್ಲಿ ಹಂಚಿದ ಚಾಕ್ಲೆಟ್‌ಗಳು ಎಷ್ಟು? ____________

(ಆ) ರಾಣಿ ಒಟ್ಟು ಚಾಕ್ಲೆಟ್‌ಗಳ ಸಂಖ್ಯೆಯಿಂದ $\frac{1}{4}$ ಭಾಗವನ್ನು ಟೀಚರುಗಳಿಗೆ ಹಂಚಿದಳು. ಆದರೆ ಆ ದಿನ ಟೀಚರ್‌ಗಳಿಗೆ ಹಂಚಿರುವ ಚಾಕ್ಲೆಟ್‌ಗಳು ಎಷ್ಟು?

____________




### ಕಪ್ ಬೋರ್ಡ್‌ನಲ್ಲಿ ಎಷ್ಟು ಭಾಗವು ಖಾಲಿ ಇದೆ.

(ಅ) ಎಷ್ಟು ಭಾಗ ಪುಸ್ತಕಗಳಿವೆ?__________

(ಆ) ಎಷ್ಟು ಭಾಗ ಖಾಲಿ ಇದೆ? __________

### ಬಿಸ್ಕೆಟ್ ಪ್ಯಾಕೆಟ್‌ನಲ್ಲಿ ಎಷ್ಟು ಭಾಗವು ತಿಂದಿದ್ದೇವೆ.



(ಅ) ಸರಸ್ವತಿ, ಕೋಮಲರು ಈ ಪ್ಯಾಕೆಟ್‌ನಲ್ಲಿನ 8 ಬಿಸ್ಕೆಟ್‌ಗಳು ತಿಂದರೆ ಆ ಪ್ಯಾಕೆಟ್‌ನಲ್ಲಿ ಎಷ್ಟು ಭಾಗ ತಿಂದರು? __________

(ಆ) ಪ್ಯಾಕೆಟ್‌ನಲ್ಲಿ ಎಷ್ಟು ಭಾಗ ಬಿಸ್ಕೆಟ್‌ಗಳು ಉಳಿದಿವೆ? __________

SCERT TELANGANA

## ಅಭ್ಯಾಸ




1. ಭವಾನಿ ಒಂದು ಡಜನ್ ಕೋಳಿಮೊಟ್ಟೆ ಕೊಂಡು ತಂದಳು. ಅದರಲ್ಲಿಂದ $\frac{1}{2}$ ಭಾಗ ಕೋಳಿಮೊಟ್ಟೆಗಳಿಂದ ಆಮ್ಲೇಟ್‌ಗಳು ಹಾಕಿದಳು. ಆದರೆ ಆಕೆ ಉಪಯೋಗಿಸಿದ ಕೋಳಿ ಮೊಟ್ಟೆಗಳ ಸಂಖ್ಯೆಎಷ್ಟು? (1 ಡಜನ್ = 12)

2. ಲೀಲ ಹತ್ತಿರ 12 ಬಾಳೆಹಣ್ಣುಗಳಿವೆ. ಅದರಿಂದ ಆಕೆ $\frac{1}{4}$ ಭಾಗ ಬಾಳೆಹಣ್ಣುಗಳನ್ನು ತಿಂದಳು. ಆಕೆ ತಿಂದ ಬಾಳೆಹಣ್ಣುಗಳ ಸಂಖ್ಯೆ ಎಷ್ಟು?



3. ಶಿವ ತನ್ನ ಹತ್ತಿರವಿರುವ 8 ಕೋಳಿಗಳಿಂದ $\frac{3}{4}$ ಭಾಗ ಕೋಳಿಗಳನ್ನು ಮಾರಿದನು. ಆದರೆ ಆತನು ಮಾರಿದ ಕೋಳಿಗಳ ಸಂಖ್ಯೆ ಎಷ್ಟು?



4. ಅಭಿಷೇಕ್ ಒಂದು ದಿನಕ್ಕೆ ₹ 100 ಸಂಪಾದಿಸಿದ್ದಾನೆ. ಅದರಲ್ಲಿಂದ $\frac{1}{4}$ ರೂಪಾಯಿಗಳನ್ನು ಊಟಕ್ಕೆ ಖರ್ಚು ಮಾಡಿದನು. ಆದರೆ ಎಷ್ಟು ರೂಪಾಯಿಗಳು ಖರ್ಚುಮಾಡಿದ್ದಾನೆ?

5. 20 ಪುಟಗಳಿರುವ ಒಂದು ಅಧ್ಯಾಯದಲ್ಲಿ ಉಷ $\frac{1}{5}$ ಭಾಗ ಓದಿದಳು. ಆದರೆ ಉಷ ಓದಿದ ಪುಟಗಳ ಸಂಖ್ಯೆ ಎಷ್ಟು?

## ಪ್ರಯತ್ನಿಸಿ

1. ಈ ಸಮಯದದಲ್ಲಿ ನಿಮ್ಮ ತರಗತಿಯ ಕಪ್ಪು ಹಲಗೆಯ ಮೇಲೆ ಎಷ್ಟು ಭಾಗ ಖಾಲಿ ಇದೆ?
2. ನಿಮ್ಮ ತರಗತಿಯಲ್ಲಿ ಒಟ್ಟು ಎಷ್ಟು ಜನ ವಿದ್ಯಾರ್ಥಿಗಳು ಇರುವರು. ಅದರಲ್ಲಿ ಎಷ್ಟು ಭಾಗ ಹುಡುಗರು? ಎಷ್ಟು ಭಾಗ ಹುಡುಗಿಯರು ಇದ್ದಾರೆ?
3. ನಿಮ್ಮ ತರಗತಿಯಲ್ಲಿನ ಒಟ್ಟು ವಿದ್ಯಾರ್ಥಿಗಳಲ್ಲಿ, ಈದಿನ ಹಾಜರಾದ ಮಕ್ಕಳ ಭಾಗವೆಷ್ಟು?
4. ನಿಮ್ಮ ಪಾಠಶಾಲೆಯಲ್ಲಿರುವ ಒಟ್ಟು ಶಿಕ್ಷಕರುಗಳಲ್ಲಿ, ಈ ದಿನ ಹಾಜರಾದ ಶಿಕ್ಷಕರ ಭಾಗವೆಷ್ಟು?
5. ಮೇಲಿನ ಮಾದರಿಯಂತೆ ಇನ್ನೂ 5 ಸಮಸ್ಯೆಗಳನ್ನು ತಯಾರು ಮಾಡಿ.

SCERT TELANGANA

# 13 ಚತುರತಾ ಪಟ್ಟಿ

ನಾಲ್ಕನೆ ತರಗತಿಯ ವಿದ್ಯಾರ್ಥಿಗಳ (ಶ್ರೇಣಿ) ಗ್ರೇಡ್‌ಗಳನ್ನು ಉಪಾಧ್ಯಾಯಿನಿ ಜ್ಯೋತಿ ದಾಖಲೆ ಪುಸ್ತಕದಲ್ಲಿ ಕೆಳಕಂಡಂತೆ ನಮೂದಿಸಿದ್ದಾರೆ.

| | | | | | | | |
|---|---|---|---|---|---|---|---|
| ಅಖಿಲ | A | ಸೋನಿಯಾ | C | ಉದಯ್ | B | ಸರಳ | A |
| ರಾಜು | A | ಗೋಪಿ | B | ಅನಿಲ್ | A | ಊರ್ಮಿಳ | B |
| ಅಮ್ಜದ್ | C | ಲೀಲ | B | ದೀಪ್ತಿ | B | ರಮೇಶ | B |
| ವಿನಯ್ | B | ಷಾಮಿನ್ | A | ಶೃತಿ | C | ಶ್ರೀನು | A |
| ಹಂಪಿ | A | ಪ್ರಜ್ಞ | C | ರೋಜ | B | ಪ್ರಸಾದ್ | B |
| ರಾಣಿ | B | ಫಾಹಿಮ್ | A | ಮಂಗಳ | A | ಕಮಲ | B |
| ಕೃಷ್ಣ | A | ಕೋಮಲ್ | B | ಕಲ್ಪನ | B | ಜಾನ್ | C |

ಆ ಪಾಠಶಾಲೆಯ ಮುಖ್ಯೋಪಾಧ್ಯಾಯರು ಜ್ಯೋತಿ ಉಪಾಧ್ಯಾಯಿನಿಯನ್ನು ಎಷ್ಟು ಜನ ವಿದ್ಯಾರ್ಥಿಗಳು A,B,C ಗ್ರೇಡನ್ನು ಗಳಿಸಿದ್ದಾರೆ ಎಂಬುದರ ಬಗ್ಗೆ ವರದಿಯನ್ನು ಕೇಳಿದರು. ಇದಕ್ಕಾಗಿ ಜ್ಯೋತಿ ಉಪಾಧ್ಯಾಯಿನಿ ವಿದ್ಯಾರ್ಥಿಗಳ ಶ್ರೇಣಿಯ ವಿವರಗಳನ್ನು ತಾಳೆ ಗುರ್ತುಗಳನ್ನು ಉಪಯೋಗಿಸಿ ಪಟ್ಟಿಯ ರೂಪದಲ್ಲಿ ನಮೂದಿಸಿದಳು. ಆಕೆ ಅಖಿಲ, ರಾಜು, ಅಮ್ಜದ್ ಮತ್ತು ವಿನಿಯ್‌ರಿಗೆ ಅವರ ಗ್ರೇಡ್‌ನ ಆಧಾರದ ಮೇಲೆ ಅಂಕಗಳನ್ನು ನಮೂದಿಸಿದರು. ನೀವು ಈ ಪಟ್ಟಿಯನ್ನು ಪೂರ್ಣಗೊಳಿಸಲು ಉಪಾಧ್ಯಾಯಿನಿಗೆ ಸಹಾಯ ಮಾಡುವಿರಾ? ಪ್ರಯತ್ನಿಸಿ

| ಗ್ರೇಡ್ | ತಾಳೆ ಗುರ್ತುಗಳು | ವಿದ್ಯಾರ್ಥಿ ಸಂಖ್ಯೆ |
|---|---|---|
| A | 11 | |
| B | 1 | |
| C | 1 | |

1. ಎಷ್ಟು ಮಂದಿ ವಿದ್ಯಾರ್ಥಿಗಳು A ಗ್ರೇಡ್ ಪಡೆದಿದ್ದಾರೆ?


2. ಎಷ್ಟು ಮಂದಿ ವಿದ್ಯಾರ್ಥಿಗಳು B ಗ್ರೇಡ್ ಪಡೆದಿದ್ದಾರೆ?


3. C ಗ್ರೇಡ್ ನಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

SCERT TELANGANA

## ನಿಮಗೆ ಇಷ್ಟವಾದ ಆಟ ಯಾವುದು?

ನಿಮ್ಮ ತರಗತಿಯಲ್ಲಿನ ವಿದ್ಯಾರ್ಥಿಗಳನ್ನು ಅವರಿಗೆ ಇಷ್ಟವಾದ ಆಟ ಯಾವುದೆಂದು ಕೇಳಿ ಅವರ ಹೆಸರಿನ ಎದುರಿಗೆ ಅದನ್ನು ಬರೆಯಿರಿ. ಉದಾಹರಣೆಗೆ ಸುಧಾಕರ – ಹಗ್ಗದಾಟ. ಈ ವಿಷಯವನ್ನು ಆದರಿಸಿ ಕೆಳಗಿನ ಪಟ್ಟಿಯನ್ನು ಪೂರ್ಣಗೊಳಿಸಿ.







| ಆಟದ ಹೆಸರು | ತಾಳೆ ಗುರ್ತುಗಳು | ಮೊತ್ತ |
|---|---|---|
| | | |
| | | |
| | | |
| | | |
| | | |
| | | |
| | | |

1. ನಿಮ್ಮ ತರಗತಿಯಲ್ಲಿ ಹೆಚ್ಚು ಮಂದಿ ವಿದ್ಯಾರ್ಥಿಗಳು ಇಷ್ಟಪಡುವ ಆಟ ಯಾವುದು?


___________________________

2. ನಿಮ್ಮ ತರಗತಿಯಲ್ಲಿ ಕಡಿಮೆ ಮಂದಿ ವಿದ್ಯಾರ್ಥಿಗಳು ಇಷ್ಟಪಡುವ ಆಟ ಯಾವುದು?

___________________________







SCEPT TELANGANA



## ನಿಮ್ಮ ಸುತ್ತಮುತ್ತ ಇರುವ ಕುಟುಂಬಗಳು ಎಷ್ಟು ದೊಡ್ಡವು?

ನಿಮ್ಮ ಸುತ್ತ ಮುತ್ತ ಇರುವ 20 ಮನೆಗಳನ್ನು ಸಂದರ್ಶಿಸಿ ಪ್ರತಿಯೊಂದು ಮನೆಯಲ್ಲಿ ಎಷ್ಟು ಜನರಿದ್ದಾರೆ ಎಂಬುದನ್ನು ಕಂಡುಹಿಡಿಯಿರಿ. ಸಂಗ್ರಹಿಸಿದ ವಿಷಯದ ಸಹಾಯದಿಂದ ಕೆಳಗಿನ ಪಟ್ಟಿಯನ್ನು ಪೂರ್ಣಗೊಳಿಸಿ.

| ಕುಟುಂಬ ಸದಸ್ಯರ ಸಂಖ್ಯೆ | ತಾಳೆ ಗುರ್ತುಗಳು | ಕುಟುಂಬದ ಸಂಖ್ಯೆ |
|---|---|---|
| 7 ಅದಕ್ಕಿಂತ ಹೆಚ್ಚು | | |
| 6 ಮಂದಿ | | |
| 5 ಮಂದಿ | | |
| 4 ಮಂದಿ | | |
| 3 ಮಂದಿ | | |
| ಇಬ್ಬರು | | |
| ಒಬ್ಬರು | | |

## ಮನೆಯ ವಿಧಗಳು

ಒಂದು ಸಣ್ಣ ಹಳ್ಳಿಯಲ್ಲಿ ಮೂರು ವಿಧಧ ಮನೆಗಳಿವೆ. ಇವುಗಳ ಬಗ್ಗೆ ವಿವರಗಳನ್ನು ಕೆಳಗೆ ಕೊಡಲಾಗಿದೆ. ಕೆಳಗಿನ ಪಟ್ಟಿಯನ್ನು ತಾಳೆ ಗುರ್ತುಗಳೊಂದಿಗೆ ಕೊಟ್ಟಿರುವ ವಿವರಗಳಿಂದ ಭರ್ತಿ ಮಾಡಿರಿ.

| ಮನೆಯ ವಿಧಗಳು | ತಾಳೆ ಗುರ್ತುಗಳು | ಮನೆಗಳ ಸಂಖ್ಯೆ |
|---|---|---|
|  | | |
|  | | |
|  | | |

SCERT TELANGANA

## ಪಟ್ಟಿ ಚಿತ್ರ ಮತ್ತು ಚಿತ್ರಪಟ

### ಅಬ್ದುಲ್ಲಾನ ಬೊಂಬೆಗಳ ಅಂಗಡಿ

ಅಬ್ದುಲ್ಲನಿಗೆ ಒಂದು ಚಿಕ್ಕ ಬೊಂಬೆ ಅಂಗಡಿ ಇದೆ. ಮೇ ತಿಂಗಳ ಮೊದಲಲ್ಲಿ ಆತನ ಬಳಿ ಎಲ್ಲ ಬಗೆಯ ತಲಾ ಹತ್ತರಂತೆ ಬೊಂಬೆಗಳಿವೆ. ಕೆಳಗೆ ನೀಡಿರುವ ಚಿತ್ರಪಟಪಟ್ಟಿ ಮೇ ತಿಂಗಳ ಕೊನೆಯಲ್ಲಿ ಉಳಿದಿರುವ ಗೊಂಬೆಗಳ ಮಾಹಿತಿಯನ್ನು ನೀಡುತ್ತದೆ.



(ಅ) ಮೇ ತಿಂಗಳ ಕೊನೆಯಲ್ಲಿ ಹೆಚ್ಚು ಯಾವ ವಿಧವಾದ ಗೊಂಬೆಗಳು ಉಳಿದಿವೆ ?

(ಆ) ಮೇ ತಿಂಗಳ ಕೊನೆಯಲ್ಲಿ ಕಡಿಮೆ ಉಳಿದಿರುವ ಗೊಂಬೆ ಯಾವುದು?

(ಇ) ತಿಂಗಳ ಮೊದಲಲ್ಲಿ ಎಲ್ಲ ಬಗೆಯಲ್ಲಿ ತಲಾ ಹತ್ತುಗೊಂಬೆಗಳಿದ್ದವು. ಚಿತ್ರಪಟ್ಟಿಯಲ್ಲಿ ಉಳಿದಿರುವ ಗೊಂಬೆಗಳ ಸಹಾಯದಿಂದ ಯಾವ ವಿಧವಾದ ಗೊಂಬೆ ಹೆಚ್ಚು ಮಾರಾಟವಾಗಿತ್ತು ಎಂಬುದನ್ನು ಹೇಳಿ?

(ಈ) ಪಟ್ಟಿಕೆಯಿಂದ ಮಕ್ಕಳಿಗೆ ಇಷ್ಟವಾಗುವ ಇತರ ಗೊಂಬೆಗಳಾವುವು?

SCERT TELANGANA

**ಸಹಾಯ ಹಸ್ತಗಳು :**

ಪಾಲಂಪೇಟ್ ಪ್ರೈಮರಿ ಶಾಲೆಯ ನಾಲ್ಕನೇ ತರಗತಿಯ ವಿದ್ಯಾರ್ಥಿಗಳು ಅನಾಥಾಶ್ರಮದ ಸಂರಕ್ಷಣೆಗಾಗಿ ಒಂದು ವಾರದಲ್ಲಿ ₹ 300 ರೂಪಾಯಿಗಳನ್ನು ಸಂಗ್ರಹಿಸಬೇಕೆಂಬ ಗುರಿಯನ್ನು ಇಟ್ಟುಕೊಂಡರು. ಅದರಂತೆ ಅವರು ತಾವು ಸಂಪರ್ಕಿಸಿದವರಿಂದ ತಲಾ ₹5 ರೂಪಾಯಿಯನ್ನು ಚಂದಾ ಸಂಗ್ರಹಿಸಿದರು.

ಅವರು ಒಂದು ವಾರದಲ್ಲಿ ಪ್ರತಿ ದಿನ ಶೇಖರಿಸಿದ ಚಂದಾ ವಿವರಗಳನ್ನು ಕೆಳಗಿನ ಚಿತ್ರಪಟ್ಟಿಯಲ್ಲಿ ತೋರಿಸಿದೆ.


| ದಿನಗಳು | ಸಂಗ್ರಹಿಸಿದ ರೂಪಾಯಿಗಳು | ಒಟ್ಟು ಹಣ |
|---|---|---|
| ಭಾನು |  | |
| ಸೋಮ |  | |
| ಮಂಗಳ |  | |
| ಬುಧ |  | |
| ಗುರು |  | |
| ಶುಕ್ರ |  | |
| ಶನಿ |  | |

SCERT TELANGANA

1. ಯಾವ ದಿನ ಗರಿಷ್ಠ ಚಂದಾವನ್ನು ಶೇಖರಿಸಿದರು?
2. ಯಾವ ಯಾವ ದಿನಗಳಲ್ಲಿ ಸಮಾನವಾಗಿ ಚಂದಾವನ್ನು ಸಂಗ್ರಹಿಸಿದರು?
3. ಆ ತರಗತಿಯ ವಿದ್ಯಾರ್ಥಿಗಳು ತಮ್ಮ ಗುರಿಯನ್ನು ತಲುಪಿದ್ದಾರೆ?

**ಭತ್ತದ ಚೀಲಗಳು :**

ಮಲ್ಲಯ್ಯ ಒಬ್ಬ ರೈತ, ಆತ ತಾನು ಕಳೆದ ನಾಲ್ಕು ವರ್ಷಗಳಿಂದಲೂ ತನ್ನ ಹೊಲದಲ್ಲಿ ಬೆಳೆದ ಭತ್ತಕ್ಕೆ ವಿವರಗಳನ್ನು ಬರೆದಿದ್ದಾನೆ..ಪ್ರತಿಯೊಂದು ಭತ್ತದ ಚೀಲವು 50ಕಿ.ಗ್ರಾಂ ತೂಕಕ್ಕೆ ಸಮಾನವಾಗಿದೆ.




1. ಯಾವ ವರ್ಷದಲ್ಲಿ ಅತ್ಯಂತ ಹೆಚ್ಚು ಭತ್ತವನ್ನು ಬೆಳೆದನು? ಎಷ್ಟು?

2. ಯಾವ ವರ್ಷದಲ್ಲಿ 2009 ರಲ್ಲಿ ಬೆಳೆದ ಬೆಳೆಗಿಂತ ಎರಡರಷ್ಟು ಹೆಚ್ಚು ಭತ್ತವನ್ನು ಬೆಳೆದನು?


3. ಮೇಲಿನ ಚಿತ್ರಪಟ್ಟಿಯನ್ನು ನೋಡಿ ಕಳೆದ ನಾಲ್ಕು ವರ್ಷಗಳಿಂದ ಮಲ್ಲಯ್ಯ ಬೆಳೆದ ಧಾನ್ಯದ ಉತ್ಪತ್ತಿ ಕ್ರಮೇಣ ಹೆಚ್ಚಾಗಿದೆಯೆಂದು ನಾವು ಭಾವಿಸಬಹುದೇ?

SCERT TELANGANA

## ಚೌಕುಳಿ ಚಿತ್ರಪಟ

### ಯಾವ ಎಣ್ಣೆ ಎಷ್ಟು ಸಂಗ್ರಹಣೆ ಇದೆ?

ಒಬ್ಬ ಎಣ್ಣೆ ವ್ಯಾಪಾರಿಯು ಶೇಂಗಾ ಎಣ್ಣೆ, ಪಾಮೋಲಿನ್ ಎಣ್ಣೆ, ಸನ್‌ಫ್ಲವರ್, ಕೊಬ್ಬರಿ ಎಣ್ಣೆ ಮತ್ತು ತವಡು ಎಣ್ಣೆಯನ್ನು ಮಾರುತ್ತಿರುತ್ತಾನೆ. ಕೆಳಗಿನ ಚೌಕುಳಿ ಚಿತ್ರಪಟವು ವಾರದ ಕೊನೆಯಲ್ಲಿ ಉಳಿದ ಎಣ್ಣೆ ಪಾಕೆಟ್‌ಗಳ ದಾಖಲೆಯನ್ನು ನೀಡುತ್ತದೆ. ಚೌಕುಳಿ ಚಿತ್ರಪಟ ಮೂಲಕ ಗಮನಿಸಿರಿ.





1. ಯಾವ ಎಣ್ಣೆ ಹೆಚ್ಚು ಉಳಿಕೆಯಾಗಿದೆ?
2. ಯಾವ ಎಣ್ಣೆ ಕಡಿಮೆ ಉಳಿಕೆಯಾಗಿದೆ?
3. ವಾರದ ಮೊದಲಲ್ಲಿ 30 ಶೇಂಗಾ ಎಣ್ಣೆ ಪಾಕೆಟ್ಟುಗಳಿದ್ದರೆ ವಾರದಕಕೊನೆವರೆಗೆ ಎಷ್ಟು ಎಣ್ಣೆ ಪಾಕೆಟ್ಟುಗಳು ಮಾರಾಟವಾಗಿವೆ?
4. ವಾರದ ಮೊದಲಲ್ಲಿ 20 ಸನ್‌ಫ್ಲವರ್ ಪಾಕೆಟ್‌ಗಳಿದ್ದರೆ ,ಕೊನೆಯ ದಿನದವರೆಗೆಎಷ್ಟು ಎಣ್ಣೆ ಪಾಕೆಟ್‌ಗಳು ಮಾರಾಟವಾಗಿವೆ?

# 14 ಅಂಚುಗಳು ಮತ್ತು ಸರಹದ್ದುಗಳು

ಗಣರಾಜ್ಯ ದಿನಾಚರಣೆದಿನ ವೆಂಕಟಾಪುರ ಶಾಲೆಯ ಮಕ್ಕಳು ತಮ್ಮ ತರಗತಿ ಕೋಣೆಯನ್ನು ಅಲಂಕರಿಸಬೇಕೆಂದುಕೊಂಡರು. ಅವರು ಕಪ್ಪು ಹಲಗೆಯ ಅಂಚನ್ನು ಬಣ್ಣದ ಹಾಳೆಯ ತೋರಣದಿಂದ ಅಲಂಕರಿಸಬೇಕೆಂದುಕೊಂಡರು.




ಒಂದು ಕಪ್ಪುಹಲಗೆಯನ್ನು ಅಲಂಕರಿಸಲು ಎಷ್ಟು ಬಣ್ಣದ ಹಾಳೆಗಳ ತೋರಣವನ್ನು ಕಂಡುಕೊಳ್ಳಬೇಕಾಗುತ್ತದೆ?




ಮಕ್ಕಳು ಕಪ್ಪುಹಲಗೆಯ ಅಂಚುಗಳ ಉದ್ದಗಳನ್ನು ಅಳತೆ ಮಾಡಿದರು ಹಾಗೂ ನಾಲ್ಕು ಅಂಚುಗಳ ಉದ್ದಗಳನ್ನು ಕೂಡಿದರು.

2 ಮೀ + 2 ಮೀ + 1ಮೀ + 1 ಮೀ = 6ಮೀ


ಆದ್ದರಿಂದ ಒಟ್ಟು 6ಮೀ. ಬಣ್ಣದ ಹಾಳೆಗಳ ತೋರಣಆವಸರವಾಗುತ್ತದೆ ಎಂದು ಗುರ್ತಿಸಿದರು.. ಅವರು ಗುರ್ತಿಸಿರುವುದು ಸರಿಯೇ? ___________





SCERT TELANGANA

## ಹೊಲಗಳಿಗೆ ಬೇಲಿ ಹಾಕೋಣ

ರಾಮಯ್ಯ ಅಹ್ಮದ್ ಮತ್ತು ಜಾನ್ ಸ್ನೇಹಿತರು. ಅವರು ತಮ್ಮ ಹೊಲಗಳ ಸುತ್ತಲೂ ಬೇಲಿಯನ್ನು ಹಾಕಬೇಕೆಂದುಕೊಂಡರು.








(ಅ) ಮೂವರೂ ಜೊತೆಗೂಡಿ ಬೇಲಿಹಾಕಲು 100 ಮೀ ಮುಳ್ಳುತಂತಿ ಬೇಲಿಯನ್ನು ಕೊಂಡುಕೊಂಡರು. ಈ ತಂತಿ ಆ ಮೂವರ ಹೊಲದ ಸುತ್ತ ಬೇಲಿ ನಿರ್ಮಿಸಲು ಸರಿಯಾಗುವುದೇ?


**ಇವು ಮಾಡಿರಿ**

1. ನಿಮ್ಮ ತರಗತಿ ಕೋಣೆಯ ಸುತ್ತಳತೆಯನ್ನು ಅಂದಾಜಿಸಿ, ನಂತರ ಟೇಪಿನ ಸಹಾಯದಿಂದ ಅಳೆದು ಹೋಲಿಸಿರಿ.

(ಅ)




(ಆ)




SCERT TELANGANA

## ಪ್ರಯತ್ನಿಸಿರಿ

1. ಕೆಳಗೆ ನೀಡಿದ ಹೊಲಗಳ ಜಾಗವನ್ನು ಪರಿಶೀಲಿಸಿ, ಅವುಗಳ ಸುತ್ತಳತೆಯನ್ನು ಕಂಡುಹಿಡಿಯಿರಿ.

### ಅಂಚುಗಳು ಮತ್ತು ಪಟ್ಟಿಗಳು


(ಅ) ಸಲ್ಮಾ ಲೇಸ್‌ನ ಅಂಗಡಿಗೆ ಹೋಗಿ ತನ್ನ ದುಪ್ಪಟ್ಟಾಗೆ ಲೇಸನ್ನು ಕೊಂಡುಕೊಳ್ಳಬೇಕೆಂದು ಕೊಂಡಳು. ಆಕೆಗೆ ಎಷ್ಟು ಉದ್ದದ ಲೇಸು ಬೇಕಾಗುತ್ತದೆ?________




(ಆ) ಒಂದು ವೇಳೆ ಲೇಸ್‌ನ ಬೆಲೆ ಪ್ರತಿ ಮೀಟರ್‌ಗೆ ₹ 12 ಆದರೆ ಸಲ್ಮಾ ಅಂಗಡಿಯವನಿಗೆ ಕೊಡಬೇಕಾದ ಹಣವೆಷ್ಟು?

__________


(ಅ) ವಸುಧ ತನ್ನ ಹೊಸ ಸೀರೆಯ ಅಂಚಿಗೆ ಪ್ರತ್ಯೇಕ ಪಟ್ಟಿಯನ್ನು ಹಾಕಬೇಕೆಂದು ಕೊಂಡಿದ್ದಾಳೆ. ಸೀರೆಯ ಉದ್ದ 5 ಮೀ 50 ಸೆಂ.ಮೀ. ಹಾಗೂ ಅಗಲ 1 ಮೀ 50 ಸೆಂ.ಮೀ ವಸುಧಳಿಗೆ ಬೇಕಾದ ಅಂಚಿನ ಒಟ್ಟು ಉದ್ದವೆಷ್ಟು?________




(ಆ) 1 ಮೀ ಲೇಸಿನ ಬೆಲೆ ₹75 ಆದರೆ ವಸುಧ ಅಂಗಡಿಯವನಿಗೆ ನೀಡಬೇಕಾದ ಹಣವೆಷ್ಟು?________

SCERT TELANGANA


## ಪ್ರಯತ್ನಿಸಿರಿ




1. (ಅ) ಪಕ್ಕದ ಚಿತ್ರದಲ್ಲಿರುವ ಚೌಕದ ಸುತ್ತಳತೆ ಎಷ್ಟು? ________




(ಆ) ಒಂದು ವೇಳೆ ಚೌಕದ ಒಂದು ಮೂಲೆಯಿಂದ 1 ಸೆಂ.ಮೀ. ಬಾಹುವುಳ್ಳ ಒಂದು ಚೌಕವನ್ನು ಕತ್ತರಿಸಿ ತೆಗೆದಾಗ ಆ ಚೌಕದ ಸುತ್ತಳತೆಯಲ್ಲಿ ಬದಲಾವಣೆ ಉಂಟಾಗುವುದೆ?________




(ಇ) ಒಂದು ವೇಳೆ ಎಲ್ಲಾ ಮೂಲೆಗಳಿಂದಲೂ ಕತ್ತರಿಸಿದರೆ ಏನಾಗುತ್ತದೆ?


________



(ಈ) ಈ ಚಿತ್ರವನ್ನು ನೋಡಿ. ಇದರ ಸುತ್ತಳತೆ ಎಷ್ಟು?________



2. (ಅ) ಈ ಆಕಾರದಲ್ಲಿರುವ ಹೊಲದ ಸುತ್ತಳತೆಯನ್ನು ಹೇಗೆ ಲೆಕ್ಕಿಸಬಹುದು?





ಆ) ಉಮ, ಶ್ರೀಯ ಇಬ್ಬರೂ ವೃತ್ತಾಕಾರದ ಆಟದ ಮೈದಾನದಲ್ಲಿ ಓಡುತ್ತಿದ್ದಾರೆ. ಉಮ ಆಟದ ಮೈದಾನದ ಒಳಗಿನ ಟ್ರಾಕ್‌ನಲ್ಲಿ ಹಾಗು ಶ್ರೀಯ ಹೊರಗಿನ ಟ್ರಾಕ್‌ನಲ್ಲಿ ಚಿತ್ರದಲ್ಲಿ ತೋರಿಸಿದಂತೆ ಓಡುತ್ತಿದ್ದಾರೆ. ಅವರಿಬ್ಬರೂ ಒಂದೇ ಸ್ಥಳದಿಂದ ಓಡಲು ಪ್ರಾರಂಭಿಸದೆ ಬೇರೆ ಬೇರೆ ಸ್ಥಳಗಳಿಂದ ಓಡಲಾರಂಭಿಸಿದರು. ಏಕೆ ಹಾಗೆ ಓಡಲು ಪ್ರಾರಂಭಿಸಿದರು? ಊಹಿಸಬಲ್ಲಿರಾ?

SCERT TELANGANA


## ಅಭ್ಯಾಸ

1. ಕೆಳಗಿನವುಗಳ ಸುತ್ತಳತೆ ತಿಳಿಸಿರಿ.


(ಅ)





(ಆ)





(c)




2. ರಂಗ ಮತ್ತು ರಾಮ ಇವರ ಹೊಲಗಳ ಸುತ್ತಳತೆಯನ್ನು ಕೆಳಗೆ ನೀಡಲಾಗಿದೆ. ಅವರಿಬ್ಬರೂ ತಮ್ಮ ಹೊಲಗಳ ಸುತ್ತಬೇಲಿ ಹಾಕಲು ತಂತಿಕೊಳ್ಳಬೇಕೆಂದುಕೊಂಡಿದ್ದಾರೆ. ಯಾರಿಗೆ ಹೆಚ್ಚಿನ ತಂತಿ ಬೇಕಾಗುತ್ತದೆ?





ರಂಗ




ರಾಮು

3. ರಂಗ ಪ್ರತಿದಿನ ಬೆಳಗ್ಗೆ ಈ ತೋಟದ ಸುತ್ತಲೂ 3 ಸುತ್ತು ನಡೆಯುತ್ತಾನೆ. ಆತ ಪ್ರತಿದಿನ ನಡೆಯುವ ಒಟ್ಟು ದೂರ ಎಷ್ಟು?




SCERT TELANGANA

# 15 ಒಂದೇ ಬಗೆಯ ಅರ್ಧಭಾಗಗಳು

ಭವ್ಯ ತನ್ನ ಮನೆಯ ಮುಂದೆ ರಂಗೋಲಿ ಹಾಕುತ್ತಿದ್ದಾಳೆ.



ಅಷ್ಟರಲ್ಲಿ ಆಕೆಯ ತಾಯಿ ಆಕೆಗೆ ರಂಗೋಲಿ ಹಾಕುವುದನ್ನು ನಿಲ್ಲಿಸಿ ಅರಿಶಿನ ತಂದುಕೊಡಲು ಹೇಳಿದಳು. ಆಕೆಯ ತಂಗಿ ರಂಗೋಲಿಯನ್ನು ಪೂರ್ತಿಮಾಡದಳು.

ಉಳಿದ ರಂಗೋಲಿಯನ್ನು ಭವ್ಯಾಳ ತಂಗಿ ನವ್ಯ ಪೂರ್ತಿಮಾಡಿದಳು.



ಚಿತ್ರದಲ್ಲಿ ತೋರಿಸಿದಂತೆ ರಂಗೋಲಿಯನ್ನು ಇನ್ನೂ ಯಾವ ರೀತಿಯಲ್ಲಿ ಅರ್ಧಭಾಗವಾಗಿ ವಿಭಾಗಿಸಬಹುದೇ?


ನವ್ಯಳಿಗೆ ಭವ್ಯ ಈ ರೀತಿ ಹೇಳಿದಳು – ನಾನು ಅರ್ಧ ರಂಗೋಲಿಯನ್ನು ಹಾಕುತ್ತೇನೆ. ನೀನದನ್ನು ಪೂರ್ಣಗೊಳಿಸು.


ರಂಗೋಲಿಯನ್ನು ಪೂರ್ಣಗೊಳಿಸುವಲ್ಲಿ ನೀವು ನವ್ಯಳಿಗೆ ಸಹಾಯ ಮಾಡಿರಿ.

ಪೂರ್ಣಗೊಳ್ಳದ ರಂಗೋಲಿಯ ಭಾಗದ ಕಡೆಗೆ ಕನ್ನಡಿ ಇಡಿ. ಏನನ್ನು ಗಮನಿಸಿದಿರಿ?




SCERT TELANGANA







**ಇವುಗಳನ್ನು ಮಾಡಿ**


1. ಕೆಳಗೆ ನೀಡಿದ ಚಿತ್ರಗಳನ್ನು ಒಂದೇ ರೀತಿ ಕಾಣುವಂತೆ ಗೆರೆ ಎಳೆದು ಎರಡು ಭಾಗಗಳಾಗಿ ವಿಭಜಿಸಿರಿ. ಮೊದಲನೇ ಚಿತ್ರದಲ್ಲಿ ತೋರಿಸಿದಂತೆ ಇವುಗಳನ್ನು ಒಂದೇ ರೀತಿಯಲ್ಲದೆ, ಒಂದಕ್ಕಿಂತ ಹೆಚ್ಚು ರೀತಿಯಲ್ಲಿ ಸಹ ಮಾಡಬಹುದು.
















SCERT TELANGANA



2. ಕೆಳಗೆ ನೀಡಿದ ಚಿತ್ರಗಳನ್ನು ಎರಡು ಅರ್ಧಗಳು ಒಂದೇ ರೀತಿಯಾಗಿ ಕಾಣುವಂತೆ ಗೆರೆ ಎಳೆದು ವಿಭಜಿಸಿರಿ.


ಸೂಚನೆ :- ನೀವು ಇವುಗಳನ್ನು ಒಂದಕ್ಕಿಂತ ಹೆಚ್ಚು ವಿಧಗಳಾಗಿಯೂ ವಿಭಜಿಸಬಹುದು.



3. ಸಂಖ್ಯೆಗಳನ್ನು ಸಹ ಮೇಲೆ ತೋರಿಸಿದಂತೆ ಒಂದೇ ರೀತಿಯ ಎರಡು ಸಮ ಭಾಗಗಳಾಗಿ ವಿಭಜಿಸಬಲ್ಲಿರಾ?

ಕೆಳಗೆ ನೀಡಿದ ಸಂಖ್ಯೆಗಳಲ್ಲಿ ಮೇಲೆ ತೋರಿಸಿದಂತೆ ಯಾವ ಸಂಖ್ಯೆಗಳನ್ನು ಎರಡು ಅರ್ಧ ವಿಭಾಗಗಳು ಒಂದೇ ವಿಧವಾಗಿರುವಂತೆ ವಿಭಜಿಸಬಹುದು? ಅವುಗಳನ್ನು ಗೆರೆ ಎಳೆದು ಅರ್ಧ ಭಾಗಗಳಾಗಿ ವಿಭಜಿಸಿ

ಒಂದು ಉದಾಹರಣೆ ನೀಡಲಾಗಿದೆ.




SCERT TELANGANA

## ಪ್ರಯತ್ನಿಸಿರಿ

1. ನಿಮ್ಮ ಸುತ್ತಲಿನ ವಸ್ತುಗಳನ್ನು ಪರಿಶೀಲಿಸಿ. ಯಾವ ವಸ್ತುಗಳನ್ನು ಎರಡು ಅರ್ಧ ಭಾಗಗಳು ಒಂದೇ ರೀತಿಯಾಗಿ ಕಾಣುವಂತೆ ವಿಭಾಗಿಸಬಹುದೋ ತಿಳಿಸಿರಿ.

## ಚಟುವಟಿಕೆ

**ಆನೆಯ ಮುಖವಾಡ ತಯಾರಿಸೋಣ.**

1. ಒಂದು ಕಾಗದವನ್ನು ತೆಗೆದುಕೊಂಡು ಎರಡು ಅರ್ಧಭಾಗಗಳಾಗಿ ವಿಭಾಗಿಸುವಂತೆ ಒಂದು ಗೆರೆ ಎಳೆಯಿರಿ.
2. ಕೆಳಗೆ ತೋರಿಸಿದ ರೀತಿಯಲ್ಲಿ ಆನೆಯ ಮುಖವನ್ನು ಅರ್ಧಭಾಗದ ಕಾಗದದ ಮೇಲೆ ಚಿತ್ರಿಸಿ.
3. ಈಗ ಕಾಗದವನ್ನು ಗೆರೆಯೊಂದಿಗೆ ಮಡಚಿ.
4. ಕತ್ತರಿಯಿಂದ ಆನೆಯ ಮುಖವನ್ನು ಕತ್ತರಿಸಿರಿ.
5. ಮಡಚಿದ ಕಾಗದವನ್ನು ಬಿಡಿಸಿ, ಆನೆಯ ಮುಖದಲ್ಲಿ ಕಣ್ಣುಗಳನ್ನು ರಚಿಸಿ.
6. ಬಣ್ಣ ಹಾಕಿ, ಮುಖವಾಡ ಹಾಕಿಕೊಳ್ಳಲು ಸರಿಯಾಗುವ ಹಾಗೆ ರಬ್ಬರ್ ಬ್ಯಾಂಡನ್ನು ಕಟ್ಟಿರಿ.



SCERT TELANGANA


# 16 ವಿನ್ಯಾಸ ಗಳು

ರಜಿತ, ಸ್ರವಂತಿ ಒಂದು ಜಾತ್ರೆಗೆ ಹೋಗುತ್ತಿದ್ದಾರೆ. ಅವರು ದಾರಿಯಲ್ಲಿ ಅನೇಕ ರೀತಿಯ ಮನೆಗಳನ್ನು ನೋಡಿದರು.

**ರಜಿತ :** ಸ್ರವಂತಿ ಈ ಮನೆಯ ಕಂಪೌಂಡ್ ಗೋಡೆಗಳನ್ನು ನೋಡು ಅದರ ಮೇಲೆ ಅಂದವಾದ ವಿನ್ಯಾಸಗಳಿವೆ.







ಕಂಪೌಂಡ್ ಗೋಡೆಯ ಮೇಲಿನ ಯಾವ ಭಾಗ ಪುನಃ ಪುನಃ ಪುನರಾವರ್ತನೆಯಾಗಿ ವಿನ್ಯಾಸ ಉಂಟಾಗಿದೆ ಗುರ್ತಿಸಿರಿ.

**ಸ್ರವಂತಿ** : ನೋಡು, ಈ ಮನೆಯ ಕಂಪೌಂಡ್ ಗೋಡೆಯ ಮೇಲಿನ ಗ್ರಿಲ್ ಸಹ ವಿನ್ಯಾಸವನ್ನು ಹೊಂದಿದೆ.





ಗ್ರಿಲ್‌ನ ಯಾವ ಭಾಗ ಪುನರಾವರ್ತಿತವಾಗಿ ವಿನ್ಯಾಸ ಏರ್ಪಟ್ಟಿದೆ ಎಂಬುದನ್ನು ಗುರ್ತಿಸಿ.




ಬಸ್ ನಿಲ್ದಾಣದ ಹತ್ತಿರ ಅವರು ಮರದ ಕೆಳಗೆ ನಿಂತು ಬಸ್‌ಗಾಗಿ ಕಾಯುತ್ತಿದ್ದರು.

**ರಜಿತ :** ಸ್ರವಂತಿ ಇಲ್ಲಿ ನೋಡು, ಎಲೆಗಳನ್ನು ಹೊಂದಿರುವ ಈ ಟೊಂಗೆಯು ಕೂಡ ವಿನ್ಯಾಸವನ್ನು ಹೊಂದಿದೆ.

ರಜಿತ ಮತ್ತು ಸ್ರವಂತಿ ಪ್ರಯಾಣಿಸುತ್ತಿರುವಾಗ ಬಸ್ಸು ಸೇತುವೆ ಮೇಲೆ ಹೋಗುತ್ತಿದೆ.

ಈ ಸೇತುವೆ ನಿರ್ಮಾಣದಲ್ಲಿ ಯಾವುದೇ ವಿನ್ಯಾಸ ಗುರ್ತಿಸಿದೆಯಾ?



ನಿಮ್ಮ ಸುತ್ತಲೂ ಇರುವ ವಸ್ತುಗಳು, ಪರಿಸರದಲ್ಲಿ ಯಾವುದರಲ್ಲಿ ನೀವು ವಿನ್ಯಾಸಗಳನ್ನು ಗಮನಿಸಿದ್ದೀರಿ?.

SCERT TELANGANA

ಜಾತ್ರೆಯಲ್ಲಿ ಸ್ರವಂತಿ, ರಜಿತ ತಮಗಾಗಿ ಮುತ್ತಿನ ಸರಗಳನ್ನು ಕೊಂಡುಕೊಂಡರು.



1. ಕೆಳಗೆ ನೀಡಿದ ಮುತ್ತಿನ ಸರಗಳಲ್ಲಿನ ವಿನ್ಯಾಸವನ್ನು ಗುರ್ತಿಸಿರಿ. ಈ ವಿನ್ಯಾಸವನ್ನು ಅದೇ ರೀತಿ ಮುಂದುವರೆಸಿ.

(ಅ) 

(ಆ) 

(ಇ) 


(ಈ) 

2. ಜಾತ್ರೆಯಲ್ಲಿ ಅವರು ಇನ್ನೂ ಕೆಲವು ರೀತಿಯ ಸರಗಳನ್ನು ನೋಡಿದರು. ಅವುಗಳು ಈ ರೀತಿಯಾಗಿವೆ. ಅವುಗಳಲ್ಲಿರುವ ವಿನ್ಯಾಸವನ್ನು ಗುರ್ತಿಸಿರಿ. ಅವುಗಳಿಗೆ ಇನ್ನೆರಡು ಮಣಿಗಳನ್ನು ಸೇರಿಸಿ ವಿನ್ಯಾಸವನ್ನು ಮುಂದುವರೆಸಿ.

(ಅ) 

(ಆ) 

(ಇ) 

(ಈ) 

(ಉ) 

SCERT TELANGANA

**ಇವು ಮಾಡಿರಿ**

1. ಬೇರೆ ಬೇರೆ ವಿನ್ಯಾಸಗಳನ್ನು ಹೊಂದಿದ ಮೂರು ಸರಗಳನ್ನು ತಯಾರಿಸಿರಿ.

## ಸ್ಥಿತ್ಯಂತರ ವಿನ್ಯಾಸ

ಈ ಮಕ್ಕಳು ಮಧ್ಯಾಹ್ನ ಊಟದ ಸಮಯದಲ್ಲಿ ಆಟದ ಮೈದಾನದಲ್ಲಿ ಆಡುತ್ತಿದ್ದರು.
ಅವರು ನಿಂತಿರುವ ರೀತಿಯಲ್ಲಿ ನೀವು ಯಾವುದಾದರೂ ವಿನ್ಯಾಸವನ್ನು ಗುರ್ತಿಸಿದ್ದೀರಾ?



ಈ ಮಕ್ಕಳು ಖೋ – ಖೋ ಆಡುತ್ತಿದ್ದಾರೆ. ಇವರು ಕುಳಿತ ರೀತಿಯಲ್ಲಿ ಯಾವುದಾದರೂ ವಿನ್ಯಾಸವಿದೆಯೇ?




ಇದರಲ್ಲಿ ಒಂದು ವಿನ್ಯಾಸವಿದೆ. ಒಬ್ಬರ ನಂತರ ಒಬ್ಬರು ವಿರುದ್ಧ ದಿಕ್ಕಿಗೆ ಮುಖ ಮಾಡಿ ಕುಳಿತಿದ್ದಾರೆ.

SCERT TELANGANA


## ಇವು ಮಾಡಿರಿ

1. ಕೆಳಗಿನ ವಿನ್ಯಾಸವನ್ನು ಮುಂದುವರೆಸಿ,

(ಅ)



(ಆ)




(ಇ)




(ಈ)



(ಉ)



(ಊ)



SCERT TELANGANA

## ಸಂಖ್ಯೆಗಳಲ್ಲಿನ ವಿನ್ಯಾಸ

ಕೆಳಗಿನ ಸಂಖ್ಯಾಕ್ರಮದಲ್ಲಿನ ಶ್ರೇಣಿಯನ್ನು ಗುರ್ತಿಸಿರಿ.
ಈ ಸಂಖ್ಯಾಕ್ರಮದಲ್ಲಿ ನಂತರ ಬರುವ ಸಂಖ್ಯೆ ಯಾವುದಿರಬಹುದು?

(a) 2, 4, 6, 8, ______________

(b) 1, 3, 5, 7, ______________

(c) 3, 6, 9, 12, ______________

(d) 11, 15, 19, 23, ______________

(e) 15, 13, 11, 9, ______________

(f) 21, 27, 33, 39, ______________

(g) 25, 20, 15, 10, ______________

(h) 3, 6, 10, 15, ______________

(i) 8, 16, 24, 32, ______________

(j) 35, 28, 21, 14, ______________

(k) 50, 40, 30, 20, ______________

(l) 9, 19, 29, 39, ______________

(m) 45, 54, 63, 72, ______________

**ಸಂಖ್ಯಾಕ್ರಮದಲ್ಲಿನ ಎರಡು ಅನುಕ್ರಮ ಸಂಖ್ಯೆಗಳ ಮಧ್ಯೆ ಯಾವ ಸಂಬಂಧವಿದೆ.**

**ಇವುಗಳಲ್ಲಿನ ಕೆಲವು ವಿನ್ಯಾಸಗಳು ಹೆಚ್ಚುತ್ತಾ ಇವೆ.**

ಇವುಗಳಲ್ಲಿನ ಕೆಲವು ವಿನ್ಯಾಸಗಳು ಕಡಿಮೆಯಾಗುತ್ತಾ ಇವೆ.

SCERT TELANGANA

2. ಈ ಕೆಳಗಿನ ಸಂಖ್ಯಾ ಕ್ರಮದಲ್ಲಿನ ವಿನ್ಯಾಸವನ್ನು ಗುರ್ತಿಸಿ ಮುಂದುವರೆಸಿರಿ.

(ಅ) 3, 6, 12, 24 ________________________

(ಆ) 4, 8, 16, 32 ________________________

(ಇ) 32, 16, 8, 4 ________________________

(ಈ) 2, 6, 18, 54 ________________________

(ಉ) 5, 20, 80 ________________________

(ಊ) 400, 200, 100, 50 ________________________

## ಕ್ಯಾಲೆಂಡರ್‌ನಲ್ಲಿ ವಿನ್ಯಾಸ :

May-2013

| S | M | T | W | Th | F | Sa |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

ಕ್ಯಾಲೆಂಡರ್‌ನಲ್ಲಿ ಸೂಚಿಸಿದ ರೀತಿಯಲ್ಲಿ ಯಾವುದಾದರೂ 9 ಸಂಖ್ಯೆಗಳನ್ನು ತೆಗೆದುಕೊಳ್ಳಿ ಅವುಗಳ ಮೊತ್ತ ಎಷ್ಟು?

ವಾಣಿ ಸಂಖ್ಯೆಗಳನ್ನು ಈ ರೀತಿ ಕೂಡಿದ್ದಾಳೆ.

13 + 20 + 27 + 14 + 21 + 28 + 15 + 22 + 29 = 189

**ರಮು :** ನಾನು ಇದನ್ನು ಇನ್ನು ಬೇಗನೆ ಮಾಡಬಲ್ಲೆ. ಇವುಗಳಲ್ಲಿನ ಮಧ್ಯದ ಸಂಖ್ಯೆಯನ್ನು ಗುರ್ತಿಸಿ ಅದನ್ನು 9 ರಿಂದ ಗುಣಿಸಿ ಮೊತ್ತವನ್ನು ಪಡೆಯುತ್ತೇನೆ.

9 x 21 = 189

May-2013

| S | M | T | W | Th | F | Sa |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

ಕ್ಯಾಲೆಂಡರ್ ಸೂಚಿಸಿದ ರೀತಿಯಲ್ಲಿ ಯಾವುದಾದರೂ 5 ಸಂಖ್ಯೆಗಳನ್ನು ತೆಗೆದುಕೊಳ್ಳಿ. ಅವುಗಳ ಮೊತ್ತ ಎಷ್ಟು?

ವಾಣಿ ಎಲ್ಲ ಸಂಖ್ಯೆಗಳನ್ನು ಕೂಡಿಸಿದಳು. 2+9+16+23+30=80

ರಮ ನಾನು ಮಧ್ಯದ ಸಂಖ್ಯೆಯನ್ನು 5 ರಿಂದ ಗುಣಿಸುವುದರ ಮೂಲಕ ಇದನ್ನು ಬೇಗನೇ ಮಾಡಬಲ್ಲೆನು ಎಂದಳು.

ರಮು ಮಾಡಿದ್ದು ಸರಿಯೆ?

**ಇವುಗಳನ್ನು ಮಾಡಿರಿ.**

1. ನಿನಗಿಷ್ಟವಾದ ಕ್ಯಾಲೆಂಡರ್‌ನ ಯಾವುದಾದರೂ ಒಂದು ತಿಂಗಳಿನಲ್ಲಿ ಮೇಲೆ ತೋರಿಸಿದ ರೀತಿಯಲ್ಲಿ ಯಾವುದಾದರೂ 9 ಸಂಖ್ಯೆಗಳನ್ನು ತೆಗೆದುಕೊಂಡು ಮೇಲಿನ ವಿನ್ಯಾಸ ಆ 9ಸಂಖ್ಯೆಗಳಿಗೆ ಸರಿಹೊಂದುತ್ತದೆಯೆ? ಕಂಡುಹಿಡಿಯಿರಿ.

2. ನಿನಗಿಷ್ಟವಾದ ಕ್ಯಾಲೆಂಡರ್‌ನಲ್ಲಿ ಯಾವುದಾದರೂ ಒಂದು ತಿಂಗಳಲ್ಲಿ ಯಾವುದಾದರೂ ಬೇರೆ 5 ಸಂಖ್ಯೆಗಳನ್ನು ತೆಗೆದುಕೊಳ್ಳಿ. ಮೇಲಿನ ವಿನ್ಯಾಸ ಆ ಸಂಖ್ಯೆಗಳಿಗೆ ಸರಿಹೊಂದುತ್ತದೆಯೆ? ತಿಳಿಯಿರಿ.

SCERT TELANGANA

# 17 ಗಣಿತ ನಮ್ಮ ಸುತ್ತಲೂ ಇದೆ

ಸಂತೋಷ್ ತಂಗಿಯ ಮದುವೆಗೆ ಇನ್ನೂ ಒಂದು ವಾರ ಮಾತ್ರವೇ ಇದೆ. ಮನೆಯಲ್ಲಿ ಪ್ರತಿಯೊಬ್ಬರೂ ಮದುವೆಯ ಕೆಲಸದಲ್ಲಿ ನಿರತರಾಗಿದ್ದಾರೆ.

ಇಂದು ಸಂತೋಷ್ ಆತನ ತಂಗಿ ಅನಿತಾ, ಅವರ ತಂದೆ ತಾಯಿಯರು ಬಟ್ಟೆಗಳನ್ನು ಕೊಂಡುಕೊಳ್ಳಲು ಅಂಗಡಿಗೆ ಹೊರಟಿದ್ದಾರೆ. ಅನಿತ ಮತ್ತು ಆಕೆಯ ಅಮ್ಮ ತಾವು ಯಾವಾಗಲೂ ಹೋಗುವ ಅಂಗಡಿಗೆ ಹೋದರು. ಅಲ್ಲಿ ಅವರು ತುಂಬಾ ಸೀರೆಗಳನ್ನು ನೋಡಿ ಕೆಲವನ್ನು ಆಯ್ಕೆ ಮಾಡಿದರು. ಅವುಗಳು.





₹ 1500



₹ 2000



₹ 3200



₹ 850




₹ 1300

ಸೀರೆಯಲ್ಲಿರುವ ಕೆಲವು ವಿನ್ಯಾಸಗಳನ್ನು ಗುರ್ತಿಸಿರಿ. ಹಾಗೆಯೇ ನಿಮ್ಮ ತಾಯಿಯ ಸೀರೆಗಳಲ್ಲಿರುವ ವಿನ್ಯಾಸಗಳನ್ನು ಗುರ್ತಿಸಿರಿ.

1. ಅವರುಗಳು ಸೀರೆಗಾಗಿ ಖರ್ಚುಮಾಡಿದ ಒಟ್ಟು ಹಣವೆಷ್ಟು? _____________

2. ಒಂದು ವೇಳೆ ಅಂಗಡಿಯವನಿಗೆ ಅವರು ₹ 9000 ಕೊಟ್ಟರೆ ಆತನು ಅವರಿಗೆ ಎಷ್ಟು ಹಣ ವಾಪಸ್ಸು ಕೊಡಬೇಕಾಗುತ್ತದೆ? _____________

ಇದೇ ಸಮಯದಲ್ಲಿ ಸಂತೋಷ್ ಮತ್ತುಅವರ ತಂದೆ ಹೋಗಿ ಪುರುಷರ ಬಟ್ಟೆಗಳನ್ನು ನೋಡಿದರು. ತಮಗೆ ಬೇಕಾದ ಪ್ಯಾಂಟ್ ಮತ್ತು ಷರ್ಟ್ ಬಟ್ಟೆಗಳನ್ನು ಕೊಂಡುಕೊಂಡರು.



3. ಅಂಗಡಿಯವನು ಈ ರೀತಿಯಾಗಿ ಬಿಲ್ ತಯಾರಿಸಿದ್ದಾನೆ. ನೀವು ಆ ಬಿಲ್ಲನ್ನು ಪೂರ್ಣಗೊಳಿಸಿ.

| ವಸ್ತುಗಳು | ದರ ಪ್ರತಿಮೀಟರ್‌ಗೆ | ಒಟ್ಟು ಹಣ |
|---|---|---|
| ಪ್ಯಾಂಟ್ ಬಟ್ಟೆ 1 ಮೀ 50 ಸೆಂ.ಮೀ | ₹ 150 | |
| ಪ್ಯಾಂಟ್ ಬಟ್ಟೆ 1 ಮೀ 50 ಸೆಂ.ಮೀ | ₹ 220 | |
| ಷರ್ಟ್ ಬಟ್ಟೆ 2 ಮೀ | ₹ 140 | |
| ಷರ್ಟ್ ಬಟ್ಟೆ 2 ಮೀ | ₹ 125 | |
| ಒಟ್ಟು | | |

**ಮದುವೆಗಾಗಿ ಸಿಹಿ ಕೊಳ್ಳುತ್ತಿದ್ದಾರೆ.**

ನಂತರ ಅವರು ಸಿಹಿ ಅಂಗಡಿಗೆ ಹೋದರು. ಅಲ್ಲಿ 20 ಕಿಲೋ ಲಡ್ಡು, 20 ಕಿಲೋ ಬಾದುಷಾಗೆ ಆರ್ಡರ್ ನೀಡಿದರು. 1 ಕಿಲೋ ಲಡ್ಡು ಬೆಲೆ ₹ 120. ಒಂದು ಕಿಲೋ ಬಾದುಷಾ ಬೆಲೆ ₹ 150.


1. ಅವರು ಸಿಹಿ ಅಂಗಡಿಯವನಿಗೆ ಎಷ್ಟು ಹಣ ಕೊಡ ಬೇಕಾಗುತ್ತದೆ?

2. ಸಂತೋಷ್ ಅಂಗಡಿಯವನಿಗೆ ಅರ್ಧಕಿಲೋ ಬಾಕ್ಸ್‌ಗಳಲ್ಲಿ ಲಡ್ಡುಪ್ಯಾಕ್ ಮಾಡಲು ತಿಳಿಸಿದನು. ಅಂಗಡಿಯವನು ಅವನಿಗೆ ಎಷ್ಟು ಲಡ್ಡು ಬಾಕ್ಸ್‌ಗಳನ್ನು ನೀಡಬೇಕು?




SCERT TELANGANA

## ಮದವೆ ಕಾರ್ಡ್‌ಗಳನ್ನು ಪೋಸ್ಟ್ ಮಾಡುತ್ತಿದ್ದಾರೆ :




ಆ ನಂತರ ಸಂತೋಷ್ ಲಗ್ನ ಪತ್ರಿಕೆಗಳನ್ನು ತನ್ನ ಸ್ನೇಹಿತರಿಗೆ ಬಂಧುಗಳಿಗೆ ಕಳುಹಿಸಲು ಅಂಛೆಕಛೇರಿಗೆ ಹೋದನು. ಪೋಸ್ಟ್‌ಮಾಸ್ಟರ್ ಲಗ್ನಪತ್ರಿಕೆಯನ್ನುನೋಡಿ ಸಂತೋಷನಿಗೆ35 ಗ್ರಾಂ ತೂಕವಿದೆ ಎಂದು ಹೇಳಿದರು.

ಸಂತೋಷ್ 200 ಲಗ್ನಪತ್ರಿಕೆಗಳನ್ನು ಪೋಸ್ಟ್ ಮಾಡಲು, ಪೋಸ್ಟ್ ಮಾಸ್ಟರ್ ಗೆ ಎಷ್ಟು ಹಣ ನೀಡಬೇಕು?

ಕುಟುಂಬ ಸದಸ್ಯರು ಅಂದು ಮಾಡಬೇಕೆಂದುಕೊಂಡ ಎಲ್ಲಾ ಕೆಲಸ, ಷಾಪಿಂಗ್‌ನ್ನು ಪೂರ್ಣಗೊಳಿಸಿ ಸಂತೋಷದಿಂದ ಮನೆಗೆ ಹಿಂತಿರುಗಿದರು.

## ಪ್ರಯಾಣದ ಸಿದ್ದತೆ :


ವರಂಗಲ್‌ನಲ್ಲಿ ವರನ ಮನೆಯಲ್ಲಿ ಮದುವೆ ನಡೆಯುವುದು. ಕುಟುಂಬದ ಹೆಚ್ಚಿನ ಸದಸ್ಯರು ಮದುವೆಗಾಗಿ ಪ್ರಯಾಣಿಸ ಬೇಕಾಗುತ್ತದೆ. ಆದ್ದರಿಂದ ಸಂತೋಷ್‌ನ ತಂದೆ ಪ್ರಯಾಣಕ್ಕಾಗಿ ಬಸ್‌ಗಳನ್ನು ಬಾಡಿಗೆಗೆ ತೆಗೆದುಕೊಳ್ಳಬೇಕೆಂದು ಕೊಂಡರು. ಮಾರನೇ ದಿನ ಸಂತೋಷ್ ಮತ್ತು ಅವನ ತಂದೆ ಬಸ್ ಏಜೆನ್ಸಿಗೆ ಹೋದರು.

ಅವರು ಒಂದೊಂದು ಕುಟುಂಬದಿಂದ 4 ಜನರಂತೆ 40 ಕುಟುಂಬಗಳು ಮದುವೆಗೆ ಹೊರಡಬೇಕೆಂದು ಅಂದಾಜಿಸಿದರು.

ಸರಿಸುಮಾರು ಎಷ್ಟು ಜನ ಮದುವೆಗಾಗಿ ಪ್ರಯಾಣಿಸ ಬೇಕಾಗುತ್ತದೆ?.

ಬಸ್ ಏಜೆನ್ಸಿಯವರು ಪ್ರತಿ ಬಸ್‌ನಲ್ಲಿ 4 ಸೀಟುಗಳ 15 ಸಾಲುಗಳಿರುವುದಾಗಿ ತಿಳಿಸಿದರು.

1. ಒಂದು ಬಸ್‌ನಲ್ಲಿ ಎಷ್ಟು ಜನ ಕುಳಿತುಕೊಳ್ಳಬಹುದು?
2. ಅಂತಹ ಎಷ್ಟು ಬಸ್‌ಗಳು ಬೇಕಾಗುತ್ತವೆ?
3. ತಂದೆಯ ಅಂದಾಜಿನಂತೆ ಜನರು ಮದುವೆಗಾಗಿ ಬಂದರೆ ಯಾವುದಾದರೂ ಬಸ್‌ನಲ್ಲಿ ಸೀಟ್‌ಗಳು ಉಳಿಯು ತ್ತವೆಯೆ? ಎಷ್ಟು ಸೀಟ್‌ಗಳು ಉಳಿಯುತ್ತವೆ?






SCERT TELANGANA

ಸಂತೋಷ್‌ನ ತಂದೆ ಬಸ್ ಏಜೆನ್ಸಿಯವರೊಂದಿಗೆ ಪ್ರತಿ ಕಿ.ಮೀ. ₹ 12 ಯಂತೆ ಒಪ್ಪಂದ ಮಾಡಿಕೊಂಡರು.

1. ಒಂದು ವೇಳೆ ಅದಿಲಾಬಾದ್‌ನಿಂದ ವರಂಗಲ್‌ಗೆ ಹೋಗಿ ಬರಲು 500 ಕಿ.ಮೀ. ಪ್ರಯಾಣ ದೂರವಾದರೆ ಪ್ರತಿ ಬಸ್‌ಗೆ ಅವರು ನೀಡಬೇಕಾದ ಹಣವೆಷ್ಟು? ಹಾಗೂ ಎಲ್ಲ ಬಸ್‌ಗಳಿಗೆ ಸೇರಿ ಎಷ್ಟು ಹಣ ನೀಡಬೇಕಾಗುತ್ತದೆ?
2. ಒಂದು ವೇಳೆ ಸಂತೋಷ್ ತಂದೆ ಮುಂಗಡವಾಗಿ ₹ 4500ನ್ನು ಏಜೆನ್ಸಿಗೆ ನೀಡಿದರೆ, ಮನೆಗೆ ಹಿಂದಿರುಗಿದ ಮೇಲೆ ಅವರು ಏಜೆನ್ಸಿಗೆ ಎಷ್ಟು ಹಣ ನೀಡಬೇಕಾಗುತ್ತದೆ?

**ವರಂಗಲ್‌ಗೆ ಪ್ರಯಾಣಿಸಿದ ಮದುವೆ ಗುಂಪು:-**

ಮದುವೆ ದಿನ ಬೆಳಗ್ಗೆ 7 ಗಂಟೆಗೆ ಮದುವೆ ಗುಂಪು ಅದಿಲಾಬಾದ್‌ನಿಂದ ಹೊರಟಿತು.

ತನು : ನಾವು ವರಂಗಲ್‌ಗೆ ಎಷ್ಟೊತ್ತಿಗೆ ತಲುಪುತ್ತೇವೆ.

ಆಂಟಿ : ನಾವು ಎಲ್ಲಿಯೂ ನಿಲ್ಲಿಸದೇ ಹೋದರೆ, ಅಲ್ಲಿಗೆ 5 ಗಂಟೆಗಳಲ್ಲಿ ತಲುಪಬಹುದು.

ತನು : ಈಗ 7 ಗಂಟೆಯಾಗಿದೆ. ಹಾಗಾದರೆ ನಾವು ___________ ಗಂಟೆಗೆ ಅಲ್ಲಿಗೆ ತಲುಪುತ್ತೇವೆ.

ಮಂಜಿತ್ : ಇಲ್ಲಿಂದ ವರಂಗಲ್‌ಗೆ ತಲುಪಲು 5 ಗಂಟೆ ಬೇಕಾಗುತ್ತದೆ. ಅಂದರೆ ತುಂಬಾ ದೂರವಿದೆ.

ಆಂಟಿ :ಸುಮಾರು 250 ಕಿ.ಮೀ. ಇರಬಹುದು.

ತನು : ನಾವು ಮಧ್ಯದಲ್ಲೆಲ್ಲಾದರೂ ನಿಲ್ಲಿಸುತ್ತೇವೆಯಾ?

ಆನಂದ್ : ಕರೀಂನಗರದಲ್ಲಿ ನಿಲ್ಲಿಸಬಹುದು. ಅದು 180 ಕಿ.ಮಿ ದೂರವಿದೆ.

1. ಬಸ್ ಎಷ್ಟು ಗಂಟೆಗೆ ಕರೀಂನಗರ ಸೇರುತ್ತದೆ?
   (ಅ) 10 ಗಂಟೆಯ ಮೊದಲು
   (ಆ) 10, 11 ಗಂಟೆಯ ನಡುವೆ
   (ಇ) 11 ಗಂಟೆಯ ನಂತರ

ಈ ಮಧ್ಯೆ ಯುವಕರು, ಮಕ್ಕಳು ಅಂತ್ಯಾಕ್ಷರಿ ಆಡುತ್ತಿದ್ದರು. ಬಸ್ಸು ಸುಮಧುರ ಗೀತೆಗಳಿಂದ ತುಂಬಿಹೋಯಿತು. ಇದೇ ಸಮಯದಲ್ಲಿ ಹಿರಿಯರು ಅಂದವಾದ ಬೆಟ್ಟಗುಡ್ಡ, ಕಾಡುಗಳ ದೃಶ್ಯವನ್ನು ನೋಡಿ ಆನಂದಿಸುತ್ತಿದ್ದರು.

ಅವರು ವಿಶಾಲವಾದ ಗೋದಾವರಿ ನದಿಯ ಮೇಲಿನ ಅದಿಲಾಬಾದ್ ಗಡಿಯಲ್ಲಿರುವ ರಾಯಪಟ್ನಂ ಸೇತುವೆ ದಾಟಿದರು. ಮಕ್ಕಳು ಉತ್ಸಾಹದಿಂದ ಕಿಟಕಿಯಿಂದ ಹೊರಗೆ ನೋಡುತ್ತಿದ್ದಾರೆ.



ತನು : ಅಬ್ಬಾ! ನೋಡಿ, ಗೋದಾವರಿ ಎಷ್ಟು ಅಂದವಾಗಿದೆ. ಇದು ತುಂಬಾ ದೊಡ್ಡದಾಗಿದೆ.

SCERT TELANGANA

ಆರಿಫ್ :ಅಮ್ಮಾ! ಇದು 100 ಮೀ ಅಗಲವಾಗಿದೆಯೆ?

ಮಾಧವಿ : ಇಲ್ಲ ಇದು 1/2 ಕಿಲೋಮೀಟರ್ ಗಿಂತ ಹೆಚ್ಚು ಅಗಲವಿದೆ.

ಆಂಟಿ :ನೋಡಿ! ಇಲ್ಲಿ ಬರೆದಿದ್ದಾರೆ. ಈ ಬ್ರಿಡ್ಜ್‌ನ ಉದ್ದ 863 ಮೀಟರ್ ಆದ್ದರಿಂದ ನದಿ ಸುಮಾರು 600 ಮೀ ಅಗಲವಿರಬಹುದು.

ಮದುವೆಗುಂಪು ಪ್ರಯಾಣಿಸುತ್ತಿರುವ ಬಸ್ಸು 5 ಮೀಟರ್ ಉದ್ದವಿದೆ. ಹಾಗಾದರೆ ಒಂದರ ನಂತರ ಒಂದರಂತೆ ಇಂತಹ ಎಷ್ಟು ಬಸ್‌ಗಳನ್ನು ಸೇತುವೆ ಮೇಲೆ ನಿಲ್ಲಿಸಬಹುದು.

**ಕರೀಂನಗರದಲ್ಲಿ ಹಣ್ಣಿನ ರಸ ತೆಗೆದುಕೊಳ್ಳೋಣ :**

ಎಲ್ಲರೂ ಗೋದಾವರಿ ನದಿಯ ಅಂದ, ಅದರ ಹರಿವುಗಳ ಬಗ್ಗೆ ಚರ್ಚಿಸುತ್ತಾ ಕರೀಂನಗರ್ ತಲುಪಿದರು. ಟೀಗಾಗಿ ಬಸ್ಸನ್ನು ನಿಲ್ಲಿಸಿದರು. ದೊಡ್ಡವರೆಲ್ಲರೂ ಟೀ, ಚಿಕ್ಕವರೆಲ್ಲರೂ ಹಣ್ಣಿನ ರಸ ತೆಗೆದುಕೊಂಡರು. ಅಂಗಡಿಯವನಿಗೆ 90 ಕಪ್ ಟೀ ತಯಾರಿಸಲು ಹಾಗೂ ಮಕ್ಕಳಿಗಾಗಿ 4 ಎರಡೂವರೆ ಲೀಟರ್ ಹಣ್ಣಿನ ರಸದ ಬಾಟಲ್ ನೀಡಲು ತಿಳಿಸಿದರು.




(ಅ) ಎಷ್ಟು ಲೀಟರ್ ಹಣ್ಣಿನ ರಸ ಕೊಂಡರು? ___________

(ಆ) ಪ್ರತಿ ವ್ಯಕ್ತಿ 100 ಮಿ.ಲೀ. ಹಣ್ಣಿನ ರಸ ತೆಗೆದುಕೊಂಡರೆ ಟೀ ಕುಡಿಯದೇ ಉಳಿದವರು ಎಷ್ಟು ಲೀ ಹಣ್ಣಿನ ರಸ ಕುಡಿದರು? ___________


(ಇ) ಒಂದು ಕಪ್ ಟೀಗೆ ₹ 5 ಆದರೆ ಟೀಗೆ ನೀಡಲು ಎಷ್ಟು ಹಣ ಬೇಕಾಗುತ್ತದೆ?___________

(ಈ) 1 ಲೀ ಹಣ್ಣಿನ ರಸದ ₹ 18 ಆದರೆ ಹಣ್ಣಿನ ರಸಕ್ಕೆ ನೀಡಬೇಕಾದ ಹಣ ಎಷ್ಟು?___________

SCERT TELANGANA

**ಹೂವು ಕೊಳ್ಳೋಣ :**

ಎಲ್ಲರೂ ಟೀ ಕುಡಿದ ಮೇಲೆ, ಸಂತೋಷ್ ವರನ ಕುಟುಂಬದವರನ್ನು ಅಭಿನಂದಿಸಲು ಹೂವು ಕೊಳ್ಳಲು ಹೋದನು. ಆತ 3.5 ಮಲ್ಲಿಗೆ ಹೂವಿನ ಹಾರಗಳನ್ನು ಕೊಂಡುಕೊಂಡನು.



(ಅ) ಸಾಧಾರಣವಾಗಿ ಒಂದು ಹಾರ ತಯಾರಿಸಲು ಎಷ್ಟು ಮಾರು ಮಲ್ಲಿಗೆ ಹೂ ಬೇಕು?

(ಆ) ಅವರು ಮಧ್ಯಾಹ್ನ 1.30 ಕ್ಕೆ ವರಂಗಲ್ ತಲುಪಿದರು. ಹಾಗಾದರೆ ಅವರು ವರಂಗಲ್ ತಲುಪಲು ಎಷ್ಟು ಸಮಯ ಬೇಕಾಯಿತು.

ಎರಡೂ ಕುಟುಂಬಗಳ ಸದಸ್ಯರು ವರಂಗಲ್‌ನಲ್ಲಿ ಮದುವೆಯನ್ನು ತುಂಬಾ ಆನಂದದಿಂದ ನೆರವೇರಿಸಿದರು.

**ಪ್ರಯತ್ನಿಸಿರಿ :-**

1. ನಿಮ್ಮ ಮನೆಯಲ್ಲಿ ಮದುವೆಗಳಾದಾಗ ಯಾವ ರೀತಿಯ ಖರ್ಚುಗಳಿಗೆ ಲೆಕ್ಕವಿಡಬೇಕಾಗುತ್ತದೆ?
2. ನಿಮ್ಮ ಕುಟುಂಬವು ರಜಾದಿನಗಳಲ್ಲಿ ವಿಹಾರಕ್ಕೆ ಹೋದಾಗ ಯಾವ ರೀತಿಯ ಖರ್ಚುಗಳಿಗೆ ಲೆಕ್ಕವಿಡಬೇಕಾಗುತ್ತದೆ?

SCERT TELANGANA

# ಉಪಾಧ್ಯಾಯರಿಗೆ ಸೂಚನೆಗಳು
# (ಪಠ್ಯಕ್ರಮ ಮತ್ತು ಬೋಧನೆಗೆ ಸಂಬಂಧಿಸಿದಂತೆ)

ಪ್ರೀತಿಯ ಉಪಾಧ್ಯಾಯಿನಿ, ಹಾಗೂ ಉಪಾಧ್ಯಾಯರೇ,

ಈ ಪುಸ್ತಕದಲ್ಲಿ 17 ಅಧ್ಯಾಯಗಳಿವೆ. ವಿಸ್ತೃತವಾಗಿ ಇವು ಎರಡು ಅಂಶಗಳಿಗೆ ಸಂಬಂಧಿಸಿವೆ. ಅವುಸಂಖ್ಯೆ ಮತ್ತು ಜ್ಯಾಮಿತಿ. ಸಂಖ್ಯಾ ಪರಿಕಲ್ಪನೆಯನ್ನು ತಿಳಿಸಲು ಪ್ರಾಥಮಿಕ ಹಂತದಲ್ಲಿ ಅವುಗಳನ್ನು ಓದುವುದು, ಬರೆಯುವುದು, ಹೋಲಿಸುವುದು, ನಾಲ್ಕು ಮೂಲಕ್ರಿಯೆಗಳನ್ನು ಮಾಡುವ ಸಾಮರ್ಥ್ಯವನ್ನು ಬೆಳೆಸಬೇಕು. ಅಲ್ಲದೆ ಈ ನಾಲ್ಕು ಮೂಲ ಕ್ರಿಯೆಗಳನ್ನು ಪ್ರತ್ಯೇಕವಾಗಿ ಅಲ್ಲದೇ ಅವುಗಳ ಮಧ್ಯೆ ಇರುವ ಪರಸ್ಪರ ಸಂಬಂಧವನ್ನು ಕೂಡ ಚರ್ಚಿಸಲಾಗಿದೆ. ಉದಾಹರಣೆಗೆ ಕೂಡುವುದು-ಕಳೆಯುವುದು ಹಾಗೂ ಗುಣಾಕಾರ-ಭಾಗಾಕಾರ. ಅಲ್ಲದೇ ಸಂಖ್ಯಾಗುಣಗಳಾದ ಪರಿವರ್ತನೀಯ ಹಾಗೂ ವಿಭಾಜತೆಯ ಬಗ್ಗೆ ಕೂಡ ಚರ್ಚಿಸಲಾಗಿದೆ. ಸಂಖ್ಯಾಕ್ರಮವು ಕೂಡ ಸಂಖ್ಯಾಕಲ್ಪನೆಯ ಅವಿಭಾಜ್ಯ ಅಂಗವಾಗಿದ್ದು ಅದನ್ನು ತಿಳಿಸಲಾಗಿದೆ. ಅಲ್ಲದೇ ಭಾಗಾಕಾರದ ಮೂಲಕ ಭಿನ್ನರಾಶಿಗಳ ಪರಿಕಲ್ಪನೆ ಹಾಗೂ ಭವಿಷ್ಯತ್ತಿನಲ್ಲಿ ಕಲಿಯಬೇಕಾದ ಅನುಪಾತ, ಶೇಕಡಾ ಕ್ರಮ ಮುಂತಾದವುಗಳಿಗೆ ತಳಹದಿ ಹಾಕಲಾಗಿದೆ. ಅಲ್ಲದೆ ಸಂಖ್ಯಾ ಗಣಗಳನ್ನು ವಿಸ್ತರಿಸುವುದನ್ನು ತಿಳಿಸಲಾಗಿದೆ. ಪ್ರಕೃತಿಯಲ್ಲಿನ ವಸ್ತುಗಳನ್ನು ತ್ರಿಮಿತಿ, ದ್ವಿಮಿತಿ, ಆಕೃತಿಗಳಾಗಿ ನೋಡುವುದೇ ಜ್ಯಾಮಿತಿ. ಅದೇ ರೀತಿ ತ್ರಿಮಿತಿ ಹಾಗೂ ದ್ವಿಮಿತಿಯ ಆಕೃತಿಗಳ ನಡುವಿನ ಸಂಬಂಧವನ್ನು, ವಿವಿಧ ವಸ್ತುಗಳನ್ನು ವಿವಿಧ ರೀತಿಯಲ್ಲಿ ನೋಡುವುದು, ಅವುಗಳಲ್ಲಿನ ಸಮಮಿತಿ ಮತ್ತು ವಿನ್ಯಾಸಗಳನ್ನು ತಿಳಿಯುವುದಕ್ಕೂ ಪ್ರಸ್ತುತ ಪಠ್ಯಕ್ರಮದಲ್ಲಿ ಪರಿಚಯಿಸಲಾಗಿದೆ. ಉದ್ದ, ತೂಕ, ಘನಫಲ, ಕಾಲ ಹಾಗು ವಿಸ್ತೀರ್ಣಗಳಂತಹ ಜ್ಯಾಮಿತಿಯ ಹಾಗೂ ಜ್ಯಾಮಿತಿಯವಲ್ಲದ ಪರಿಕಲ್ಪನೆಗಳನ್ನು ಅಳೆಯುವುದು ಹಾಗೂ ಅವುಗಳ ಮೇಲೆ ಮೂಲ ಕ್ರಿಯೆಗಳ ನಡೆಸುವುದನ್ನು ಈ ಪಠ್ಯಕ್ರಮ ಒಳಗೊಂಡಿದೆ. ಮೇಲಿನ ಎರಡು ವಿಷಯಗಳಾದ ಸಂಖ್ಯಾ ಹಾಗೂ ಜ್ಯಾಮಿತಿಯ ಸಂಬಂಧಿಸಿದಂತೆ ಅಂದಾಜಿಸುವುದು ಒಂದು ಮುಖ್ಯವಾದ ಸಾಮರ್ಥ್ಯವಾಗಿದೆ. ಅಲ್ಲದೆ ದತ್ತಾಂಶ ಸಂಗ್ರಹಣೆ ಹಾಗೂ ನಿರ್ವಹಣೆ, ಅವುಗಳನ್ನು ಚಿತ್ರಗಳು ಹಾಗೂ ಗ್ರಾಫ್‌ಮೂಲಕ ತೋರಿಸುವುದನ್ನು ಒಳಗೊಂಡಿದೆ. ಮೇಲ್ಕಾಣಿಸಿದ ಸಂಖ್ಯಾ ಪರಿಕಲ್ಪನೆ ಹಾಗೂ ಜ್ಯಾಮಿತಿಯ ಪರಿಕಲ್ಪನೆಗಳನ್ನು ವಿದ್ಯಾರ್ಥಿಗಳು ಆನಂದದಿಂದ ಕಲಿಯಲು ಸಹಕರಿಸಬೇಕೆಂದು ತಮ್ಮಲ್ಲಿ ಕೋರಿಕೊಳ್ಳುತ್ತೇವೆ.

ಇಲ್ಲಿ ಒಂದು ಮುಖ್ಯವಾದ ವಿಷಯವೇನೆಂದರೆ, ಮೇಲಿನ ವಿಷಯಗಳ ಜೊತೆಗೆ ಪ್ರಾಥಮಿಕ ಹಂತದ ತರಗತಿಗಳಲ್ಲಿನ ಗಣಿತ ಭೋಧನಾ – ಕಲಿಕಾ ಪ್ರಕ್ರಿಯೆಯನ್ನು ಸಹ ಚರ್ಚಿಸಲಾಗಿದೆ. ಮೊದಲನೆಯದಾಗಿ ಈ ಹಂತದಲ್ಲಿ ಮೂರ್ತ ವಸ್ತುಗಳ ಉಪಯೋಗ ಮಾಡಲೇಬೇಕು. ಉದಾಹರಣೆ ದಾಳ, ಸಂಖ್ಯಾ ಕಾರ್ಡುಗಳು, 100 ಮಣಿಗಳ ಸರ, ಮೀಟರ್ ಪಟ್ಟಿ, ಟೇಪ್, ತೂಕದ ಬಟ್ಟುಗಳು, ಗಡಿಯಾರ, ಕ್ಯಾಲೆಂಡರ್, ವಿವಿಧ ಆಕಾರದ ಡಬ್ಬಿಗಳು, ವಿವಿಧ ಪರಿಮಾಣವನ್ನು ಹೊಂದಿದ ಬಾಟಲ್‌ಗಳು, ಕನ್ನಡಿ ಮುಂತಾದವು.ಎರಡನೆಯದಾಗಿ ಗಣಿತವನ್ನು ನಿತ್ಯ ಜೀವನದ ಸನ್ನಿವೇಶಗಳಿಗೆ ಹೊಂದಿಸಿ ಕಲಿಸುವುದರಿಂದ ಮಗು ತಾನು ತರಗತಿ ಕೋಣೆಯಲ್ಲಿ ಕಲಿತ ಗಣಿತಕ್ಕೂ ಹೊರಗಿನ ಪ್ರಪಂಚದ ವಿಷಯಗಳಿಗೂ ಸಂಬಂಧ ಕಲ್ಪಿಸುವಂತಾಗಬೇಕು. ಗಣಿತದ ಪರಿಕಲ್ಪನೆಗಳನ್ನು ನಿತ್ಯ ಜೀವನದ ಸನ್ನಿವೇಶಗಳಿಗೆ ಹೊಂದಿಸಿ ಕಲಿಸುವ ಪ್ರಯತ್ನ ಈ ಪುಸ್ತಕದಲ್ಲಿ ಮಾಡಲಾಗಿದೆ. ಈ ಮೂಲಕ ಮಕ್ಕಳಿಗೆ ಅರ್ಥವತ್ತಾದ ಗಣಿತ ಭೋಧನೆ ಆಗುತ್ತದೆ. ನೀವು ಇಂತ ನಿತ್ಯ ಜೀವನದ ಸನ್ನಿವೇಶಗಳನು ಇನ್ನೂ ಹಲವಾರು ತಯಾರಿಸಿ ಮಕ್ಕಳ ಕಲಿಕೆಗೆ ಒದಗಿಸಬೇಕೆಂದು ಕೋರುತ್ತೇವೆ. ಈ ಮೂಲಕ ಮಕ್ಕಳು ತಮ್ಮ ಗಣಿತ ಜ್ಞಾನವನ್ನು ಸ್ಥಳೀಯ ಸನ್ನಿವೇಶಗಳಿಗೆ ಹೊಂದಿಸಿಕೊಳ್ಳಲು ಸಹಾಯಕವಾಗುತ್ತದೆ. ಹಾಗೆಯೇ ಮೂರನೆಯದಾಗಿ ಮಕ್ಕಳನ್ನು ತಾವೇ ಸ್ವತಃ ಗಣಿತ ಸಮಸ್ಯೆಗಳನ್ನು ಸೃಷ್ಟಿಸಿಅವುಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರೋತ್ಸಾಹಿಸುವುದು. ಒಂದು ಸಮಸ್ಯೆಯನ್ನು ಬಿಡಿಸಲು ಬಹಳಷ್ಟು ಪದ್ದತಿಗಳು / ವಿಧಾನಗಳಿರಬಹುದು. ದಯವಿಟ್ಟು ಮಕ್ಕಳನ್ನು ತಮ್ಮ ಸ್ವಂತ ಪದ್ದತಿಯಲ್ಲಿ / ವಿಧಾನದಲ್ಲಿ ಸಮಸ್ಯೆಯನ್ನು ಬಿಡಿಸಲು ಪ್ರೋತ್ಸಾಹಿಸಿರಿ. ಹಾಗೆಯೇ ಈ ಪದ್ದತಿ / ವಿಧಾನಗಳನ್ನು ಪರಸ್ಪರ ಚರ್ಚಿಸಲು ಅವಕಾಶ ನೀಡಿ. ಸಾಮೂಹಿಕ ಅಭ್ಯಾಸವೆಂಬುದು ತರಗತಿಯ ಭೋಧನೆಯಲ್ಲಿ ಎಲ್ಲಕ್ಕಿಂತ ಮಿಗಿಲಾದ ಸಂಪನ್ಮೂಲ. ಆದ್ದರಿಂದ ಮಕ್ಕಳನ್ನು ಜೊತೆಯಾಗಿ ಅಥವಾ ಗುಂಪುಗಳಲ್ಲಿ ಸಮಸ್ಯೆಗಳನ್ನು ಬಿಡಿಸಲು ಪ್ರೋತ್ಸಾಹಿಸಿ.

ಅದೇ ರೀತಿ ಪ್ರವಾಸಗಳು, ಮೆಟ್ರಿಕ್ ಮೇಳ, ಗಣಿತ ಪ್ರದರ್ಶನ, ಕಲಿಕಾ ಮಾಲೆ, ಕ್ವಿಜ್, ಗಣಿತ ಕ್ಲಬ್ ಕಾರ್ಯಕ್ರಮಗಳು ಮುಂತಾದವು ಒಂದು ಶೈಕ್ಷಣಿಕ ವರ್ಷದಲ್ಲಿ ಸಾಧ್ಯವಾದಾಗ ನಡೆಸಲು ಕೋರುತ್ತೇವೆ.

ಕೊನೆಯದಾಗಿ ತರಗತಿ ಕೋಣೆಯಲ್ಲಿ ಭೋಧಿಸಲು ಮೊದಲೇ ಎಲ್ಲಾ ವಿಷಯಗಳನ್ನು ಓದಿ ಅವುಗಳಿಗೆ ಬೇಕಾದ ಯೋಜನೆಗಳನ್ನು ತಯಾರಿಸಿಕೊಳ್ಳಬೇಕೆಂದು ಕೋರಿಕೊಳ್ಳುತ್ತೇವೆ. ತರಗತಿ ಕೋಣೆಯನ್ನು ಇನ್ನಷ್ಟು ಉತ್ತಮಗೊಳಿಸಲು, ಭೋಧಿಸುವ ಮೊದಲೇ ಅಧ್ಯಾಯದ ಮೊದಲೇ ಪ್ರತಿ ಸಮಸ್ಯೆಯನ್ನು ಬಿಡಿಸುವುದು ಉತ್ತಮ. ಗಣಿತದ ಪರಿಕಲ್ಪನೆಗಳ ನಿರ್ಮಾಣಕ್ಕೆ ಸರಿಯಾದ TLM.ಗಳನ್ನು

SCERT TELANGANA

ಪೂರ್ವಭಾವಿಯಾಗಿಯೇ ಸಂಗ್ರಹಿಸಿ ಕೈಗೆಟುಕುವಂತೆ ಇಟ್ಟುಕೊಳ್ಳಬೇಕು.

ಉದಾಹರಣೆಗೆ ಉದ್ದಗಳ ಅಧ್ಯಾಯಕ್ಕೆ ಮೀಟರ್ ಪಟ್ಟಿ,, ಗಾತ್ರಕ್ಕೆ ಲೀಟರ್ ಬಾಟಲ್‌ಗಳು ಮುಂತಾದವು.

**ಪುಸ್ತಕದ ಕುರಿತು ಒಂದು ಮಾತು**

ಮಕ್ಕಳು ಸಮಸ್ಯೆಗಳನ್ನು ಬಿಡಿಸಲು ಪಠ್ಯಾಂಶದ ಕೊನೆಗೆ ಮಾತ್ರವಲ್ಲದೆ ಪಠ್ಯಾಂಶದ ಉದ್ದಕ್ಕೂ ವಿವಿಧ ಕಡೆಗಳಲ್ಲಿ ಅವಕಾಶಗಳನ್ನು ಕಲ್ಪಿಸಲಾಗಿದೆ. ಪರಿಕಲ್ಪನೆಗಳ ನಿರ್ಮಾಣ ಸಮಯದಲ್ಲಿ ಮಕ್ಕಳು ಪಠ್ಯಾಂಶದ ಕುರಿತು ಚರ್ಚಿಸುತ್ತಿರುತ್ತಾರೆ. ಹಾಗೆಯೇ ಪಠ್ಯಾಂಶ ಕಲಿಕೆಯ ವಿವಿಧ ಸಂದರ್ಭಗಳಲ್ಲಿ ಕಲಿತ ಅಂಶವನ್ನು ಕ್ರೋಢೀಕರಿಸಿ ಪರಿಕಲ್ಪನೆಗಳನ್ನು ನಿರ್ಮಿಸಿಕೊಳ್ಳುತ್ತಾರೆ. "ಇವುಗಳನ್ನು ಮಾಡಿ'' ಎಂಬ ಅಭ್ಯಾಸಗಳು ಒಂದು ಪರಿಕಲ್ಪನೆಗಳನ್ನು ಕಲಿತ ಕೂಡಲೇ ಸಮಸ್ಯೆ ಬಿಡಿಸುವುದನ್ನು ಅಭ್ಯಾಸ ಮಾಡಿಕೊಳ್ಳಲು ಹಾಗೂ ಮಕ್ಕಳು ಅವುಗಳನ್ನು ಸ್ವತಃ ವಾಗಿ ಬಿಡಿಸಲು ಉದ್ದೇಶಿಸಿ ನೀಡಲಾಗಿದೆ. 'ಪ್ರಯತ್ನಿಸಿರಿ' ಅಭ್ಯಾಸದಲ್ಲಿರುವ ಅಂಶಗಳು ಮಕ್ಕಳನ್ನು ಆಲೋಚಿಸಲು ಪ್ರೇರೇಪಿಸುವ ರೀತಿಯಲ್ಲಿ, ಅವುಗಳನ್ನು ಒಂದು ಸವಾಲಾಗಿ ಸ್ವೀಕರಿಸುವಂತಿವೆ. 'ಆಲೋಚಿಸಿ',' ಚರ್ಚಿಸಿ' ಯಂತಹ ಅಭ್ಯಾಸಗಳು ಮಕ್ಕಳಿಗೆ ಸವಾಲುಗಳನ್ನು ನೀಡುವುದು ಅಲ್ಲದೇ ಅವುಗಳನ್ನು ಜೊತೆಯಾಗಿ ಇಲ್ಲವೇ ಗುಂಪುಗಳಲ್ಲಿ ಬಿಡಿಸಲು ಪ್ರೇರೇಪಿಸುತ್ತದೆ. ಅಭ್ಯಾಸದಲ್ಲಿನ ಸಮಸ್ಯೆಗಳು ಪಠ್ಯಾಂಶದಲ್ಲಿ ಕಲಿತ ಎಲ್ಲಾ ವಿಷಯಗಳ ಕುರಿತು ಪಠ್ಯಾಂಶದ ಕೊನೆಯಲ್ಲಿ ನೀಡಲಾಗಿರುತ್ತದೆ.

**ಪಾಠಕ್ಕನ್ನುಗುಣವಾಗಿ ಕೆಲವು ಸೂಚನೆಗಳು**

**ಆಕಾರಗಳು :**

- ಮಕ್ಕಳು ಪರಿಸರದಲ್ಲಿನ ದ್ವಿಮಿತಿ ಹಾಗೂ ತ್ರಿಮಿತಿಯ ಆಕೃತಿಗಳನ್ನು ಗುರ್ತಿಸಲು ಪ್ರೋತ್ಸಾಹಿಸುತ್ತದೆ.
- ವಿವಿಧ ದ್ವಿಮಿತಿಯ ಆಕಾರಗಳನ್ನು ಶೋಧಿಸಿ ಅವುಗಳ ವಿವಿಧ ಲಕ್ಷಣಗಳನ್ನು ತಿಳಿಯಲು ಪ್ರೋತ್ಸಾಹಿಸುತ್ತದೆ.
- ಮಕ್ಕಳನ್ನು ವ್ಯಾಖ್ಯಾನಗಳಲ್ಲಿ ಬಂಧಿಸದೆ ವಿವಿಧ ವಿಷಯಗಳನ್ನು ತೆಗೆದುಕೊಂಡು ಕ್ರೋಢೀಕರಿಸಿ ಪರಿಕಲ್ಪನೆ ನಿರ್ಮಾಣ ಮಾಡಿಕೊಳ್ಳಲು ಅವಕಾಶ ನೀಡಬೇಕು.
- ವಿವಿಧ ರೀತಿಯ ಪೆಟ್ಟಿಗೆಗಳನ್ನು ತಂದು ಬಿಚ್ಚಿ ಅವುಗಳ ರಚನೆಯನ್ನು ತಿಳಿಯುವುದು.
- ಮಕ್ಕಳು ವಸ್ತುಗಳು ಮತ್ತು ಪ್ರದೇಶಗಳನ್ನು ವಿವಿಧ ರೀತಿಯಿಂದ ನೋಡಲು ಹಾಗೂ ನೋಡಿದ್ದನ್ನು ಚಿತ್ರಿಸಲು ಪ್ರೋತ್ಸಾಹಿಸಬೇಕು.
- ಶಾಲೆ, ಸ್ಥಳೀಯ ಪ್ರದೇಶ, ಗ್ರಾಮ ಮೊದಲಾದ ನಕ್ಷೆಗಳನ್ನು ತೋರಿಸಿ ಅವುಗಳಲ್ಲಿ ನಿರ್ಧಿಷ್ಟ ಪ್ರದೇಶವನ್ನು ಗುರ್ತಿಸಲು ಪ್ರೋತ್ಸಾಹಿಸಬೇಕು.

**ಸಂಖ್ಯೆಗಳು :**

- 100 ಮಣಿಗಳ ಸರ, ಸಂಖ್ಯಾರೇಖೆ, ನೂರು ಸಂಖ್ಯೆಯ ಪಟ್ಟಿ ಮೊದಲಾದವುಗಳನ್ನು ಬಳಸುವ ಸಂದರ್ಭಗಳನ್ನು ಸೃಷ್ಟಿಸಿ ಮಕ್ಕಳು ದಶಮಾಂಶ ಪದ್ದತಿಯನ್ನು ತಿಳಿದುಕೊಳ್ಳಲು ಸಹಾಯ ಮಾಡುವುದು.
- ದತ್ತ ಅಂಕಿಗಳಿಂದ ಸಂಖ್ಯೆಗಳನ್ನು ರಚಿಸಿ ಅವುಗಳನ್ನು ಹೋಲಿಸಲು ಸಾಕಷ್ಟು ಅವಕಾಶ ನೀಡಬೇಕು.

**ಸಂಕಲನ ಮತ್ತು ವ್ಯವಕಲನ :**

- ದೊಡ್ಡ ಸಂಖ್ಯೆಗಳಿಂದ ಕೂಡುವುದ ಮತ್ತು ಕಳೆಯುವುದನ್ನು ಹಾಗೂ ಅವುಗಳ ಮೊತ್ತ ಮತ್ತು ವ್ಯತ್ಯಾಸಗಳನ್ನು ಅಂದಾಜಿಸಲು ಮಕ್ಕಳನ್ನು ಪ್ರೋತ್ಸಾಹಿಸಬೇಕು.
- ಸೇರಿಸು, ಹೋಲಿಸು ಮತ್ತು ಬದಲಿಸು ರೂಪದಲ್ಲಿರುವ ಅರ್ಥವಂತವಾದ ವಾಕ್ಯ ರೂಪದ ಸಮಸ್ಯೆಗಳನ್ನು ಇನ್ನಷ್ಟು ರಚಿಸಿ ಅವುಗಳನ್ನು ಬಿಡಿಸುವಂತೆ ಹೇಳುವುದು. ಮಕ್ಕಳು ಕೂಡುವುದು, ಕಳೆಯುವುದು ಹಾಗೂ ಎರಡಕ್ಕೂ ಸಂಬಂಧಿಸಿದ ಪ್ರಶ್ನೆಗಳನು ತಯಾರು ಮಾಡುವ ಹಾಗೆ ಪ್ರೋತ್ಸಾಹಿಸಬೇಕು.

**ಗುಣಾಕಾರ :**

- ದೊಡ್ಡ ಸಂಖ್ಯೆಗಳಿಂದ ಕೂಡಿದ ಗುಣಾಕಾರ ಮಾಡಲು ಮತ್ತು ಅವುಗಳ ಗುಣಲಬ್ದವನ್ನು ಅಂದಾಜಿಸಲು ಪ್ರೋತ್ಸಾಹಿಸುವುದು.
- ಸಮಾನ ಗುಂಪುಗಳು, ರಷ್ಟು, ಅಡ್ಡಸಾಲು, ಕಂಬಸಾಲು ಮತ್ತು ಕಾರ್ಟೀಶಿಯನ್ ಗುಣಲಬ್ದ ರೂಪದಲ್ಲಿರುವ ಅರ್ಥವಂತಾದ ಲೆಕ್ಕಗಳನ್ನು

SCERT TELANGANA

ಇನ್ನಷ್ಟು ರಚಿಸಿ ಬಿಡಿಸಲು ತಿಳಿಸಿ. ಮಕ್ಕಳು ಸ್ವತಃ ಗುಣಾಕಾರ ಲೆಕ್ಕಗಳನ್ನು ರಚಿಸಲು ಪ್ರೋತ್ಸಾಹಿಸಬೇಕು.

- ಸಂಖ್ಯೆಗಳನ್ನು 10, 100, 1000ಮೊದಲಾದ ರೂಪದಲ್ಲಿ ಬಿಡಿಸಲು ಮಕ್ಕಳಿಗೆ ಅವಕಾಶ ನೀಡುವುದು. ಅವುಗಳಿಂದ ವಿಭಾಜಕ / ವಿತರಣಾ ನಿಯಮವನ್ನು ಪ್ರಯೋಗಿಸಿ ಗುಣಿಸುವಂತೆ ಪ್ರೋತ್ಸಾಹಿಸುವುದು.
- ಗುಣಾಕಾರ ಮತ್ತು ಭಾಗಾಕಾರ ನಡುವೆ ಇರುವ ಸಂಬಂಧವನ್ನು ಮಕ್ಕಳು ಗುರ್ತಿಸುವಂತೆ ಪ್ರೋತ್ಸಾಹಿಸಬೇಕು. ಮತ್ತು ಗುಣಾಕಾರಕ್ಕೆ ಸಂಬಂಧಿಸಿದ ಪರಿವರ್ತನೀಯ ನಿಯಮ ಮತ್ತು ವಿಭಾಜಕ ನಿಯಮವನ್ನು ಪರಿಶೀಲಿಸುವಂತೆ ಪ್ರೋತ್ಸಾಹಿಸಬೇಕು.

**ಭಾಗಾಕಾರ :**

- ಮಕ್ಕಳು ದೊಡ್ಡ ಸಂಖ್ಯೆಗಳಿಂದ ಕೂಡಿದ ಭಾಗಾಕಾರಗಳನ್ನು ಮಾಡುವಂತೆ ಅದರ ಭಾಗಲಬ್ದವನ್ನು ಅಂದಾಜಿಸುವಂತೆ ಪ್ರೋತ್ಸಾಹಿಸಬೇಕು.
- ಗುಂಪು ಮಾಡುವುದು ಮತ್ತು ಸಮಾನವಾಗಿ ಹಂಚುವುದು. ರೂಪದಲ್ಲಿರುವ ಅರ್ಥವಂತವಾದ ವಾಕ್ಯರೂಪದ ಸಮಸ್ಯೆಗಳನ್ನು ರಚಿಸಿ ಬಿಡಿಸಲು ಹೇಳುವುದು. ಮಕ್ಕಳು ಸ್ವತಃ ಗುಣಾಕಾರದ ಸಮಸ್ಯೆಗಳನ್ನು ರಚಿಸುವಂತೆ ಪ್ರೋತ್ಸಾಹಿಸುವುದು.

**ಭಿನ್ನರಾಶಿಗಳು :**

- ಮಕ್ಕಳು ಕಾಲು ಅರ್ಧ ಮುಕ್ಕಾಲುಗಳನ್ನು ಭಿನ್ನರಾಶಿಗಳೆಂದು ತಿಳಿಯದೆ ತಮ್ಮ ನಿತ್ಯ ಜೀವನದಲ್ಲಿ ಉಪಯೋಗಿಸುತ್ತಿರುತ್ತಾರೆ. ಭಿನ್ನರಾಶಿಗಳನ್ನು ಪರಿಚಯಿಸಲು ಅರ್ಥವಂತವಾದ ಸನ್ನಿವೇಶಗಳನ್ನು ಬಳಸುವುದು.
- ಭಿನ್ನರಾಶಿಗಳನ್ನು ತಿಳಿದುಕೊಳ್ಳುವಲ್ಲಿ ಪೂರ್ಣವೆಂದು ಪರಿಗಣಿಸುವುದು ಒಂದು ವಸ್ತು ಅಥವ ವಸ್ತುಗಳ ಸಮೂಹವಾಗಿರಬಹುದೆಂದು ತಿಳಿಯುವುದು ಆವಶ್ಯಕ ಹಾಗೂ ಪೂರ್ಣವೆಂದು ಪರಿಗಣಿಸಲ್ಪಡುವ ವಸ್ತು ಅಥವಾ ವಸ್ತುಗಳ ಸಮೂಹವನ್ನು ಅರ್ಧ ಭಾಗಗಳಾಗಿ ವಿಭಾಗಿಸಲು ತಿಳಿಸುವುದು.
- ಭಿನ್ನರಾಶಿ ಹಾಗೂ ಭಾಗಾಕಾರ ಕ್ರಿಯೆಗಳ ಸಂಬಂಧವನ್ನು ಗುರ್ತಿಸುವುದೇ ಅಲ್ಲದೇ ಅವುಗಳ ಇರುವಿಕೆಯನ್ನು ಸಂಖ್ಯಾರೇಖೆಯ ಮೇಲೆ ತೋರಿಸುವುದನ್ನು ಕಲಿಯುವುದು ಅಷ್ಟೇ ಮುಖ್ಯ.

**ಅಳತೆಗಳು** :

- ಮಕ್ಕಳಿಗೆ ಅಳತೆಗಳನ್ನು ಕಲಿಸುವಾಗ ಉದ್ದ, ತೂಕ, ಕಾಲ ಮತ್ತು ಪರಿಮಾಣಗಳಿಗೆ ಸಂಬಂಧಿಸಿದ ಪಠ್ಯಗಳನ್ನು ಪರಿಚಯಿಸಲಾಗಿದೆ.
- ಮಕ್ಕಳು ಅಳತೆಗಳಿಗೆ ಸಂಬಂಧಿಸಿದಂತೆ ನಿತ್ಯ ಜೀವನದಲ್ಲಿ ಅನೇಕ ಅನುಭವಗಳನ್ನು ಹೊಂದಿರುತ್ತಾರೆ. ಅವುಗಳನ್ನು ನಮ್ಮ ತರಗತಿಯ ಕೋಣೆಯ ಭೋಧನೆಯಲ್ಲಿ ಉಪಯೋಗಿಸಬೇಕು. ನಿಜವಾಗಿಯೂ ಮಕ್ಕಳು ಅವರ ಪೋಷಕರು ಕೈಗೊಂಡ ವೃತ್ತಿಗಳಲ್ಲಿ ಉದ್ದ, ತೂಕ, ಕಾಲ ಮತ್ತು ಪರಿಮಾಣಗಳಿಗೆ ಸಂಬಂಧಿಸಿದ ವಿವಿಧ ಪ್ರಮಾಣಗಳನ್ನು ಕಲಿತಿರುತ್ತಾರೆ.

**ವಿನ್ಯಾಸಗಳು :-**

- ಪ್ರಕೃತಿಯಲ್ಲಿ ಹಾಗೂ ಮಾನವ ನಿರ್ಮಿತ ವಸ್ತುಗಳಲ್ಲಿರುವ ವಿನ್ಯಾಸವನ್ನು ಗಮನಿಸುವಂತೆ ನೋಡಿಕೊಳ್ಳಬೇಕು. ತಮ್ಮ ಸುತ್ತಲಿನ ವಸ್ತುಗಳಲ್ಲಿ ವಿನ್ಯಾಸಗಳನ್ನು ಗಮನಿಸುವಂತೆ ಪ್ರೋತ್ಸಾಹಿಸಬೇಕು.
- ಮಕ್ಕಳು ವಿನ್ಯಾಸಗಳನ್ನು ಗುರ್ತಿಸುವುದಲ್ಲದೆ ಸ್ವತಃ ವಿನ್ಯಾಸಗಳನ್ನು (ಜೋಡಣೆಗಳನ್ನು) ರಚಿಸುವಂತೆ ಪ್ರೋತ್ಸಾಹಿಸಬೇಕು.
- ಮಕ್ಕಳು ಸಂಖ್ಯೆಗಳಿಂದ ಕೂಡಿದ ಜೋಡಣೆಗಳನ್ನು ರಚಿಸಲು ಪ್ರೋತ್ಸಾಹಿಸಬೇಕು.

**ಸಮಮಿತಿ**

- ಮಕ್ಕಳು ತಮ್ಮ ಪರಿಸರದಲ್ಲಿನ ಸಮಮಿತಿ ಹೊಂದಿದ ವಸ್ತುಗಳನ್ನು ಗುರ್ತಿಸುವಂತೆ ಪ್ರೋತ್ಸಾಹಿಸಬೇಕು.
- ಮಕ್ಕಳು ಪರಿಸರದಲ್ಲಿನ ಸಮಮಿತಿಯನ್ನು ಗಮನಿಸಲು ಪ್ರೋತ್ಸಾಹಿಸಬೇಕು.
- ರೇಖಾ ಸಮಮಿತಿಯನ್ನು ತಿಳಿದುಕೊಳ್ಳಲು ತರಗತಿ ಕೋಣೆಯಲ್ಲಿ ಕನ್ನಡಿ ಉಪಯೋಗಿಸಲು ಪ್ರೋತ್ಸಾಹಿಸಬೇಕು.

**ದತ್ತಾಂಶ ನಿರ್ವಹಣೆ**

- ಮಕ್ಕಳು ತಮ್ಮ ಶಾಲೆಯ ಹಾಗೂ ಮನೆಯ ಪರಿಸರದಲ್ಲಿನ ದತ್ತಾಂಶಗಳನ್ನು ಸಂಗ್ರಹಿಸುವಂತೆ ನೋಡಿಕೊಳ್ಳಬೇಕು.ಸಂಗ್ರಹಿಸಿದ ದತ್ತಾಂಶಗಳನ್ನು ಪಟ್ಟಿ, ಗಣತಿ, ಚಿನ್ಹೆ, ಚಿತ್ರಪಟ ಮತ್ತು ಸ್ತಂಭಲೇಖ ಮೊದಲಾದ ವಿವಿಧ ರೂಪಗಳಲ್ಲಿ ಪ್ರದರ್ಶಿಸಲು ಅವಕಾಶ ಕಲ್ಪಿಸಬೇಕು

SCERT TELANGANA

# ಪಠ್ಯಕ್ರಮ

**I** ಆಕಾರಗಳು– ಆಕೃತಿಗಳ ತಿಳುವಳಿಕೆ **(16ಗಂ.)**

ಆಕಾರಗಳು – ಆಕೃತಿಗಳ ತಿಳುವಳಿಕೆ (16 ಗಂಟೆಗಳು)

- ವಿವಿಧ ವಸ್ತುಗಳಲ್ಲಿರುವ ತ್ರಿಮಿತಿಯ ಆಕೃತಿಗಳನ್ನು ಗುರ್ತಿಸುವುದು. (ಆಕಾರಗಳ ಹೆಸರುಗಳನ್ನು ಬಳಸದೆ)
- ತ್ರಿಮಿತೀಯ ಆಕೃತಿಗಳಲ್ಲಿನ ಅಂಚುಗಳು ಹಾಗೂ ಮೂಲೆಗಳನ್ನು ಗುರ್ತಿಸುವುದು.
- ಉರುಳುವ (ROLL) ಹಾಗೂ ಜಾರುವ (SLIDE) ಸ್ವಭಾವಗಳ ಆಧಾರದ ಮೇಲೆ ಆಕಾರಗಳನ್ನು ವಿಂಗಡಿಸುವುದು.
- ಸರಳವಾದ ವಸ್ತುಗಳನ್ನು ಪಕ್ಕದಿಂದ, ಮೇಲಿನಿಂದ, ಮುಂದಿನಿಂದ ನೋಡಿದರೆ ಹೇಗೆ ಕಾಣುತ್ತವೆಂಬುದನ್ನು ಗುರ್ತಿಸುವುದು.
- ಆಯತ ಘನ ಮತ್ತು ಘನಾಕಾರಗಳಲ್ಲಿರುವ ಪೆಟ್ಟಿಗೆಯ ರಚನೆಯನ್ನು ತಿಳಿಯುವುದು.
- ಆಯತ, ಚೌಕ, ತ್ರಿಭುಜ ಮತ್ತು ವೃತ್ತದಂತಹ ದ್ವಿಮಿತಿಯ ಆಕಾರಗಳನ್ನು ಹೆಸರಿನಿಂದ ಗುರ್ತಿಸುವುದು.
- ವಿವಿಧ ವಸ್ತುಗಳಲ್ಲಿರುವ ದ್ವಿಮಿತೀಯ ಆಕಾರಗಳನ್ನು ಗುರ್ತಿಸುವುದು.
- ತಿಳಿದ ದ್ವಿಮಿತೀಯ ಆಕೃತಿಗಳಿಂದ ಗೊಂಬೆಗಳನ್ನು ರಚಿಸುವುದು.
- ಡಾಟೆಡ್ ಬೋರ್ಡ್‌ನ ಮೇಲೆ ವಿವಿಧ ಆಕಾರಗಳನ್ನು ರಚಿಸುವುದು.
- ಸುತ್ತಳತೆಯನ್ನು ತಿಳಿದುಕೊಂಡು ಅದನ್ನು ಕಂಡುಹಿಡಿಯಿರಿ.
- ಪ್ರತಿಫಲನ, ಪೇಪರ್ ಕಟಿಂಗ್, ಕಾಗದಗಳನ್ನು ಮಡಚುವುದರ ಮೂಲಕ ಸಮಮಿತಿ ಎಂಬ ಕಲ್ಪನೆಯನ್ನು ತಿಳಿಯುವುದು.

**ಜೋಡಣೆಗಳು (3 ಗಂ)**

- ವಿವಿಧ ಸಂದರ್ಭಗಳಲ್ಲಿ ಕಂಡು ಬರುವ ಜೋಡಣೆಗಳನ್ನು ಗುರ್ತಿಸುವುದು ಅವುಗಳನ್ನು ಮುಂದುವರೆಸುವುದು.

**II ಸಂಖ್ಯೆಗಳು (40 ಗಂ.)**

**1000** ದವರೆಗೆ ಸಂಖ್ಯೆಗಳು.

- ವಾಕ್ಯರೂಪದ ಸಮಸ್ಯೆಗಳು / ಸಂದರ್ಭೋಚಿತ ಉದಾಹರಣೆಗಳ ಮೂಲಕ 2, 3, ಅಂಕಿಗಳ ಸಂಖ್ಯೆಗಳನ್ನು ಓದುವುದು, ಬರೆಯುವುದು ಮತ್ತು ಹೋಲಿಸುವುದು.
- 2, 3 ಅಂಕಿಗಳ ಸಂಖ್ಯೆಗಳನ್ನು ಸಂಖ್ಯಾರೇಖೆಯ ಮೇಲೆ ಅಂದಾಜಿಸುವುದು.
- ಖಾಲಿಯಿರುವ ಸಂಖ್ಯಾರೇಖೆಯ ಮೇಲೆ ಎರಡಂಕಿ ಸಂಖ್ಯೆಗಳನ್ನು ಕೂಡುವುದು ಮತ್ತು ಕಳೆಯುವುದು.
- ವಾಕ್ಯರೂಪದ ಸಮಸ್ಯೆಗಳನ್ನು ರಚಿಸುವುದು.

**ಗುಣಾಕಾರ**

- ವಾಕ್ಯರೂಪದ ಸಮಸ್ಯೆಗಳು/ ಸಂದರ್ಭೋಚಿತ ಉದಾಹರಣೆಗಳ ಮೂಲಕ ಮತ್ತು 2 ಅಂಕಿಗಳ ಸಂಖ್ಯೆಗಳಿಂದ ಕಂಬಸಾಲು ಹಾಗೂ ವಿಭಾಜಕ ಪದ್ಧತಿಯಲ್ಲಿ ಗುಣಿಸುವುದು. (Grouping array;s at the ratcab ಗೆ ಸಂಬಂಧಿಸಿದ ವಾಕ್ಯರೂಪದ ಸಮಸ್ಯೆಗಳು.
- 10 ಮತ್ತು 100 ರಿಂದ ಗುಣಾಕಾರ.

SCERT TELANGANA

- ವಾಕ್ಯರೂಪದ ಸಮಸೆಯಗಳನ್ನು ರಚಿಸುವುದು.
- 2x1, 2x2, 3x1, ರ ಗುಣಲಬ್ಧವನ್ನು ಅಂದಾಜಿಸುವುದು.

**ಭಾಗಾಕಾರ**

- ವಾಕ್ಯರೂಪದ ಸಮಸ್ಯೆಗಳು / ಸಂದರ್ಭೋಚಿತ ಉದಾಹರಣೆಗಳ ಮೂಲಕ 2 ಮತ್ತು 3 ಅಂಕಿಗಳ ಸಂಖ್ಯೆಗಳನ್ನು 1 ಮತ್ತು 2 ಅಂಕಿಗಳ ಸಂಖ್ಯೆಗಳಿಂದ ಭಾಗಾಕಾರ ಶೇಷವಿಲ್ಲದೆ, ಶೇಷ ಬರುವಂತೆ (group ಮತ್ತು sharing ನೊಂದಿಗೆ)
- 2 ಮತ್ತು 3 ಅಂಕಿಗಳ ಸಂಖ್ಯೆಗಳನ್ನು ಒಂದಂಕಿ ಸಂಖ್ಯೆಯಿಂದ ಭಾಗಿಸಿದಾಗ ಬರುವ ಶೇಷವನ್ನು ಅಂದಾಜಿಸುವುದು.
- ವಾಕ್ಯರೂಪದ ಸಮಸ್ಯೆಗಳನ್ನು ರಚಿಸುವುದು.
- 2 ಮತ್ತು 1 ಅಂಕಿ ಸಂಖ್ಯೆಗಳಿಂದ ಗುಣಾಕಾರ ಮತ್ತು ಭಾಗಾಕಾರಗಳ ಮಧ್ಯೆ ಸಂಬಂಧವನ್ನೇರ್ಪಡಿಸುವುದು.

**ಭಿನ್ನರಾಶಿಗಳು**

- ಒಟ್ಟು/ ಪೂರ್ಣದಲ್ಲಿ ಕಾಲು, ಅರ್ಧ, ಮುಕ್ಕಾಲುಗಳನ್ನು ಗುರ್ತಿಸುವುದು.
- ವಿವಿಧ ರೀತಿಯ ಭಿನ್ನರಾಶಿಗಳು 1/2, 1/4 ಮತ್ತು 3/4 ಗಳನ್ನು ಗುರ್ತಿಸುವುದು.
- 1/2, 1/4 ಮತ್ತು 3/4 ಗಳ ಅರ್ಥವನ್ನು ವಿವರಿಸುವುದು.
- ಸಮಭಿನ್ನರಾಶಿಗಳಿಂದ ಕೂಡುವುದು, ಕಳೆಯುವುದು ಮತ್ತು ಹೋಲಿಸುವುದನ್ನು ತಿಳಿಯುವರು. ಜೋಡಣೆ
- ಕೂಡುವುದು, ಕಳೆಯುವುದು, ಗುಣಾಕಾರ, ಭಾಗಾಕಾರಗಳಿಗೆ ಸಂಬಂಧಿಸಿದ ಜೋಡಣೆಗಳನ್ನು ಮುಂದುವರೆಸುವುದು.

**III ಅಳತೆಗಳು (21 ಗಂ)**

**ಉದ್ದ**

- ಮೀಟರ್ ಮತ್ತು ಸೆಂಟಿಮೀಟರ್ ಉದ್ದಗಳನ್ನು ಗುರ್ತಿಸುವುದು.
- ಮೀಟರ್ ಮತ್ತು ಸೆಂಟಿಮೀಟರ್‌ಗಳ ನಡುವೆ ಸಂಬಂಧವೇರ್ಪಡಿಸುವುದು.
- ಮೀಟರ್‌ನ್ನು ಸೆಂಟಿಮೀಟರ್‌ಗೆ ಪರಿವರ್ತಿಸುವುದು.
- ಸೆಂಟೀಮೀಟರ್‌ನ್ನು ಮೀಟರ್‌ಗಳಿಗೆ ಪರಿವರ್ತಿಸುವುದು.
- ದತ್ತ ವಸ್ತುಗಳ ಉದ್ದವನ್ನು ಹಾಗೂ ದತ್ತ ಪ್ರದೇಶಗಳ ನಡುವಿನ ದೂರವನ್ನು ಅಂದಾಜಿಸುವುದು.
- ಮೀಟರ್, ಸೆಂಟಿಮೀಟರ್‌ಗಳಲ್ಲಿರುವ ವಾಕ್ಯರೂಪದ ಸಮಸ್ಯೆಗಳನ್ನು ಬಿಡಿಸುವುದು.

**ತೂಕ**

- ಕಿ.ಗ್ರಾಂ. ಮತ್ತು ಗ್ರಾಂಗಳಲ್ಲಿರುವ ವಾಸ್ತವ ತೂಕ ಹಾಗೂ ಉತ್ಪಾದಿತ ತೂಕವನ್ನು ತಿಳಿಯುವುದು.
- ಕಿ.ಗ್ರಾಂ. ಮತ್ತು ಗ್ರಾಂ.ಗಳ ಮಧ್ಯೆ ಸಂಬಂಧವೇರ್ಪಡಿಸುವುದು.
- ವಸ್ತುಗಳ ತೂಕವನ್ನು ಅಂದಾಜಿಸಿ ಅವುಗಳ ವಾಸ್ತವ ತೂಕದೊಂದಿಗೆ ಹೋಲಿಸುವುದು.

**ಪರಿಮಾಣ**

- ಪರಿಮಾಣಗಳನ್ನು ಲೀಟರ್ ಮತ್ತು ಮಿಲ್ಲಿ ಲೀಟರ್‌ಗಳಲ್ಲಿ ಅರ್ಥೈಸಿಕೊಳ್ಳುವುದು.
- ಲೀಟರ್ ಮತ್ತು ಮಿಲಿಲೀಟರ್‌ಗಳ ಮಧ್ಯೆ ಸಂಬಂಧವನ್ನು ಗುರ್ತಿಸುವನು.
- ಏಕಮಾನ ಅಳತೆಗಳ ಮೂಲಕ ದತ್ತ ದ್ರವಗಳ ಪರಿಮಾಣವನ್ನಳೆಯುವುದು.
- ದತ್ತ ದ್ರವ್ಯದ ಪರಿಮಾಣವನ್ನು ಅಂದಾಜಿಸಿ ಅದರ ನಿಜವಾದ ಪರಿಮಾಣದೊಂದಿಗೆ ಹೋಲಿಸುವುದು.
- ಲೀಟರ್ ಮತ್ತು ಮಿಲ್ಲಿ ಲೀಟರ್‌ಗಳಲ್ಲಿರುವ ಪರಿಮಾಣಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಿಡಿಸುವುದು.


SCERT TELANGANA

**ಕಾಲ**

- ನಿಮಿಷ, ಗಂಟೆ, ದಿನ ಮತ್ತು ತಿಂಗಳುಗಳ ಮಧ್ಯೆಯಿರುವ ವ್ಯತ್ಯಾಸವನ್ನು ಗುರ್ತಿಸಿ ಪ್ರಶಂಸಿಸುವನು.
- ಕ್ಯಾಲೆಂಡರ್ ನೋಡಿ ಒಂದು ವಾರದಲ್ಲಿನ ದಿನಗಳು, ಒಂದು ತಿಂಗಳಲ್ಲಿನ ವಾರಗಳು, ಒಂದು ವರ್ಷದಲ್ಲಿನ ತಿಂಗಳುಗಳನ್ನು ಗುರ್ತಿಸುವುದು.
- ಯಾವ ವರ್ಷದಲ್ಲಿ ಫೆಬ್ರವರಿ ತಿಂಗಳಲ್ಲಿ ಹೆಚ್ಚು ದಿನಗಳು ಬರುತ್ತವೆಯೋ ಅದನ್ನು ಅಧಿಕ ವರ್ಷ ಎಂದೂ, ಅಧಿಕ ವರ್ಷ ಪ್ರತಿ ನಾಲ್ಕು ವರ್ಷಗಳಿಗೆ ಒಮ್ಮೆ ಬರುವುದೆಂದು ಅರ್ಥೈಸಿಕೊಳ್ಳುವನು.
- ಕ್ಯಾಲೆಂಡರ್‌ನಲ್ಲಿ ದಿನಾಂಕಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ದಿನಗಳ ಮಧ್ಯೆ ಸಂಬಂಧವನ್ನೇರ್ಪಡಿಸುವುದು.
- ಗಡಿಯಾರದಲ್ಲಿನ ಸಮಯವನ್ನು ಗಂಟೆ ಮತ್ತು ನಿಮಿಷಗಳಲ್ಲಿ ಹೇಳುವುದು.
- ಸಮಸ್ಯೆಗಳನ್ನು ಬಿಡಿಸುವುದು.

**IV ದತ್ತಾಂಶ ನಿರ್ವಹಣೆ (6 ಗಂ)**

- ಚಿತ್ರಪಟಗಳ ಆಧಾರದ ಮೇಲೆ ನೀಡಿದ ದತ್ತಾಂಶಗಳನ್ನು ವಿಶ್ಲೇಷಿಸುವುದು.
- ಬಾಕ್ಸ್ ಚಾರ್ಟ್(Best graph) ಆಧಾರದ ಮೇಲೆ ನೀಡಿದ ದತ್ತಾಂಶಗಳನ್ನು ವಿಶ್ಲೇಷಿಸುವುದು.
- ನೀಡಿದ ದತ್ತಾಂಶಗಳನ್ನು ಗಣನ ಚಿನ್ಹೆಗಳನ್ನುಪಯೋಗಿಸಿ ತೋರಿಸುವುದು.

**ನಿತ್ಯ ಜೀವನದಲ್ಲಿ ಗಣಿತ (5 ಗಂ) (ಹಣ, ಉದ್ದ, ತೂಕ, ಪರಿಮಾಣ, ಸ್ಥಳ )**

- ಒಂದಕ್ಕಿಂತ ಹೆಚ್ಚಿನ ಕ್ರಿಯೆಗಳು ಅಥವಾ ಒಂದಕ್ಕಿಂತ ಹೆಚ್ಚು ಪರಿಕಲ್ಪನೆಗಳನ್ನು ಇಲ್ಲದೆ ಬಹುಹಂತಗಳಿಗೆ ಸಂಬಂಧಿಸಿದ ವಾಕ್ಯರೂಪದ ಸಮಸ್ಯೆಗಳು ಸಂದರ್ಭೋಚಿತ ಉದಾಹರಣೆಯ ಸಮಸ್ಯೆಗಳನ್ನು ಬಿಡಿಸುವುದು.
- ನಿತ್ಯ ಜೀವನದಲ್ಲಿ ಎದುರಾಗುವ ಸಂದರ್ಭಗಳಿಗೂ ಪರಿಹಾರಗಳನ್ನು ಅಂದಾಜಿಸುವುದು.

SCERT TELANGANA

# ಶೈಕ್ಷಣಿಕ ಪ್ರಮಾಣಗಳು

ವಿದ್ಯಾರ್ಥಿಗಳು ಒಂದು ತರಗತಿಯಲ್ಲಿ ಏನು ಮಾಡಬೇಕೆಂಬುದನ್ನು, ಏನು ತಿಳಿದಿರಬೇಕೆಂಬುದನ್ನು ಸ್ಪಷ್ಟವಾಗಿ ವಿವರಿಸುವ ಹೇಳಿಕೆಗಳನ್ನು ಆ ತರಗತಿಯ ಶೈಕ್ಷಣಿಕ ಪ್ರಮಾಣಗಳೆನ್ನುವರು. ಈ ಶೈಕ್ಷಣಿಕ ಪ್ರಮಾಣಗಳನ್ನು ಕೆಳಗಿನ ವಿಧಗಳಲ್ಲಿ ವರ್ಗೀಕರಿಸಲಾಗಿದೆ.

ಗಣಿತದ ವಿವಿಧ ಪಠ್ಯಾಂಶಗಳ ಮೂಲಕ ಕೆಳಗೆ ಸೂಚಿಸಿದ ಶೈಕ್ಷಣಿಕ ಪ್ರಮಾಣಗಳನ್ನು ಸಾಧಿಸಬೇಕು.

**ಸಮಸ್ಯೆ ಬಿಡಿಸುವುದು**

ಗಣಿತ ಪರಿಕಲ್ಪನೆಗಳು, ಪದ್ಧತಿಗಳನ್ನು ಉಪಯೋಗಿಸುವುದರ ಮೂಲಕ ಗಣಿತ ಸಮಸ್ಯೆಗಳನ್ನು ಬಿಡಿಸುವುದು.

**(ಅ) ಸಮಸ್ಯೆ ವಿಧಗಳು**

ಪಜಿಲ್ಸ್, ಪದ ಸಮಸ್ಯೆಗಳು, ಚಿತ್ರ ಸಮಸ್ಯೆಗಳು, ದತ್ತಾಂಶ ಅರ್ಥೈಸುವಿಕೆ, ವಿಶ್ಲೇಷಣೆ, ಪಟ್ಟಿಗಳು, ಗ್ರಾಫ್, ಪದ್ದತಿ ಪ್ರಕಾರ ಮಾಡುವ ಸಮಸ್ಯೆಗಳು, ಮೊದಲಾದ ವಿಧ ವಿಧವಾದ ಗಣಿತ ಸಮಸ್ಯೆಗಳಿರುತ್ತವೆ.

**ಸಮಸ್ಯೆ ಬಿಡಿಸುವ ಹಂತಗಳು**

- ಸಮಸ್ಯೆಗಳನ್ನು ಓದುವುದು.
- ದತ್ತಾಂಶಗಳಲ್ಲಿನ ವಿಷಯವೆಲ್ಲವನ್ನು ಬಿಡಿಭಾಗಗಳಾಗಿ ಗುರ್ತಿಸುವುದು.
- ದತ್ತಾಂಶಗಳಿಂದ ವಿಷಯಗಳನ್ನು(ಅನುಬಂಧ) ಬೇರ್ಪಡಿಸುವುದು.
- ಸಮಸ್ಯೆಯಲ್ಲಿ ಅಡಗಿರುವ ಗಣಿತ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳುವುದು.
- ಆಯ್ದ ಪದ್ದತಿ ಪ್ರಕಾರ ಸಮಸ್ಯೆ ಬಿಡಿಸುವುದು.

**ಕಠಿಣತೆ**

ಸಮಸ್ಯೆಯ ಕಠಿಣತೆಯು ಕೆಳಗಿನ ಅಂಶಗಳ ಮೇಲೆ ಆಧಾರಪಟ್ಟಿದೆ.

- ಸಂಧಾನವೇರ್ಪಡಿಸುವುದು (ಇದು ಸಂಧಾನ ವಿಭಾಗದಲ್ಲಿ ನಿರ್ವಹಿಸಲ್ಪಡುವುದು)
- ಸಮಸ್ಯೆಯಲ್ಲಿರುವ ಹಂತಗಳ ಸಂಖ್ಯೆ.
- ಸಮಸ್ಯೆಯಲ್ಲಿರುವ ಪ್ರಕ್ರಿಯೆಗಳ ಸಂಖ್ಯೆ
- ಸಮಸ್ಯೆ ಬಿಡಿಸಲು ನೀಡಲಾದ ಪರಿಹಾರಗಳು ಯಾವ ಪರಿಮಾಣದಲ್ಲಿವೆ?
- ಸಮಸ್ಯೆ ಬಿಡಿಸುವ ಪದ್ದತಿಯ ಸಹಜತ್ವ.

**2. ಕಾರಣಗಳನ್ನು ತಿಳಿಸುವುದು - ನಿರೂಪಣೆ ಮಾಡುವುದು**

- ವಿವಿಧ ಹಂತಗಳಿಗೆ ಕಾರಣ ವಿವರಿಸುವುದು.
- ಗಣಿತದ ಸಾಮಾನ್ಯೀಕರಣ ಹಾಗೂ ಅರ್ಥ ಮಾಡಿಕೊಳ್ಳುವುದು ಮತ್ತು ಮಾಡುವುದು.
- ಪದ್ದತಿಯನ್ನು ಅರ್ಥಮಾಡಿಕೊಳ್ಳುವುದು ಮತ್ತು ಪ್ರತಿಪಾದಿಸುವುದು.
- ತಾರ್ಕಿಕ ಚರ್ಚೆಗಳನ್ನು ಪರೀಕ್ಷಿಸುವುದು.
- ಸಮಸ್ಯೆ ನಿರೂಪಣೆಯ ಕ್ರಮವನ್ನು ಅರ್ಥಮಾಡಿಕೊಳ್ಳುವುದು.

SCERT TELANGANA

- ಆಗಮನ, ನಿಗಮನ ಪದ್ಧತಿಗಳಲ್ಲಿ ತಾರ್ಕಿಕತೆಯನ್ನು ಉಪಯೋಗಿಸುವುದು.
- ಗಣಿತ ಪ್ರಕಲ್ಪನೆಗಳನ್ನು ಪರೀಕ್ಷಿಸುವುದು.

**3. ವ್ಯಕ್ತಪಡಿಸುವುದು**

- ಗಣಿತ ಪರಿಕಲ್ಪನೆಗಳನ್ನು, ವಾಕ್ಯಗಳನ್ನು ಓದುವುದು – ಬರೆಯುವುದು

ಉದಾ:– ಲೆಕ್ಕಗಳು $3 + 4 = 7$

$3 \times 4 = ?$

$\frac{3}{4}$

- ಗಣಿತ ವ್ಯಕ್ತೀಕರಣವನ್ನು ರೂಪಿಸುವುದು.
- ಗಣಿತ ಪರವಾದ ಆಲೋಚನೆಗಳನ್ನು ತನ್ನ ಸ್ವಂತ ಮಾತುಗಳಲ್ಲಿ ವಿವರಿಸುವುದು.

  ಉದಾ :– ಚತುರ್ಭುಜವು, ನಾಲ್ಕು ಸಮಾನ ಬಾಹುಗಳನ್ನು, ನಾಲ್ಕು ಸಮಾನ ಕೋನಗಳನ್ನು ಹೊಂದಿದ ಸರಳ ಸಂವೃತ ಚಿತ್ರ.
- ಪದ್ಧತಿಯನ್ನು ವಿವರಿಸುವುದು. ಉದಾ :– ಎರಡಂಕಿ ಸಂಖ್ಯೆಗಳ್ನನ್ನು ಕೂಡುವಾಗ ಬಿಡಿ ಸ್ಥಾನದ ಅಂಕಿಗಳನ್ನು ಕೂಡಿ ನಂತರ ಹತ್ತರ ಸ್ಥಾನದ ಅಂಕಿಗಳನ್ನು ಕೂಡುವುದು.
- ಗಣಿತ ತಾರ್ಕಿಕತೆಯನ್ನು ವಿವರಿಸುವುದು

**4. ಸಂಧಾನವೇರ್ಪಡಿಸುವುದು**

- ಅನುಬಂಧ ಗಣಿತ ಪಾಠ್ಯ ವಿಭಾಗಗಳನ್ನು– ಪರಿಕಲ್ಪನೆಗಳನ್ನುಸಂಧಾನಿಸುವುದು. ಉದಾ :– ಗುಣಾಕಾರಕ್ಕೆ – ಕೂಡುವಿಕೆಗೆ; ಪೂರ್ಣದಲ್ಲಿ ಭಾಗ, ಅನುಪಾತ ಮತ್ತು ಭಾಗಾಕಾರಕ್ಕೆ ಜೋಡಣೆಗೆ – ಸಮಮಿತಿಗೆ; ಅಳತೆಗಳು ಮತ್ತು ಸ್ಥಳಗಳಿಗೆ.
- ದಿನನಿತ್ಯ ಜೀವನಕ್ಕೆ ಮತ್ತು ಗಣಿತಕ್ಕೆ ಸಂಧಾನವೇರ್ಪಡಿಸುವುದು.
- ಬೇರೆ ವಿಷಯಗಳೊಂದಿಗೆ ಗಣಿತವನ್ನು ಸಂಧಾನಿಸುವುದು.
- ಗಣಿತದಲ್ಲಿ ಬೇರೆ ಬೇರೆ ಪಠ್ಯಾಂಶಗಳಿಗೆ ಸಂಬಂಧಿಸಿದ ಪರಿಕಲ್ಪನೆಗಳನ್ನು ಸಂಧಾನಿಸುವುದು. ಉದಾ:– ದತ್ತಾಂಶ ಸಂಗ್ರಹ ಣೆ ಮತ್ತು ಅಂಕಗಣಿತ, ಅಂಕಗಣಿತ ಮತ್ತು ಪ್ರದೇಶ.
- ಪರಿಕಲ್ಪನೆಗಳನ್ನು, ಬಹು ಹಂತ ಪದ್ಧತಿಗೆ ಅನುಸಂಧಾನಿಸುವುದು.

**5. ದೃಶ್ಯೀಕರಣ ಮತ್ತು ಪ್ರಾತಿನಿಧ್ಯ ನೀಡುವುದು**

- ಪಟ್ಟಿಯಲ್ಲಿನ ವಿಷಯ, ಸಂಖ್ಯಾರೇಖೆ, ಚಿತ್ರಪಟ, ಸ್ತಂಭಾಲೇಖ, ದ್ವಿಮಿತಿ ಚಿತ್ರ, ತ್ರಿಮಿತಿ ಚಿತ್ರ ಮತ್ತು ಚಿತ್ರಗಳನ್ನು ಓದುವುದು.
- ಪಟ್ಟಿಗಳನ್ನು ರೂಪಿಸುವುದು, ಸಂಖ್ಯಾರೇಖೆಯ ಮೇಲೆ ತೋರಿಸುವುದು, ಚಿತ್ರಪಟಗಳು, ಸ್ತಂಭಾರೇಖೆಗಳು, ಚಿತ್ರಪಟಗಳನ್ನು ರಚಿಸುವುದು.

SCERT TELANGANA